ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಶಾಲಾ ಶಿಕ್ಷಣ ಇಲಾಖೆ

# ಉತ್ತರ ಉನ್ನತಿ-2

## ದ್ವಿತೀಯ ಭಾಷೆ-ಕನ್ನಡ

2024 ನೇ ಸಾಲಿನ ಎಸ್.ಎಸ್.ಎಲ್.ಸಿ
ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ
ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ
ಅಭ್ಯಾಸ ಪ್ರಶ್ನೆಪತ್ರಿಕೆಗಳ ಕೈಪಿಡಿ

ಮಾದರಿ ಉತ್ತರಗಳೊಂದಿಗೆ



ಉಪನಿರ್ದೇಶಕರು (ಆಡಳಿತ)ರವರ ಕಛೇರಿ

ಬೆಂಗಳೂರು ಉತ್ತರ ಜಿಲ್ಲೆ ಕೆ.ಜಿ.ರಸ್ತೆ, ಬೆಂಗಳೂರು

ಶಾಲಾ ಶಿಕ್ಷಣ ಇಲಾಖೆ

ಉಪನಿರ್ದೇಶಕರು(ಆಡಳಿತ)ರವರ ಕಚೇರಿ

ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು

# ಉತ್ತರ ಉನ್ನತಿ -2

# ದ್ವಿತೀಯ ಭಾಷೆ-ಕನ್ನಡ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

## ಮಾದರಿ ಉತ್ತರಗಳೊಂದಿಗೆ



**ಶ್ರೀ ಕಾಂತರಾಜು ಪಿ ಎಸ್** ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ**
**ಎಸ್ ಕರಿಯಪ್ಪ ರಸ್ತೆ**
**ಬನಶಂಕರಿ**
**ಬೆಂಗಳೂರು ನಗರ ಜಿಲ್ಲಾ ಪಂಚಾಯತ್**
**ಬೆಂಗಳೂರು**

## :: ಅಭಿನಂದನಾ ನುಡಿ ::

ಶಾಲಾ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿದ್ದು, ಅದರಲ್ಲೂ ಎಸ್.ಎಸ್.ಎಲ್.ಸಿ ಎನ್ನುವುದು ಅತ್ಯಂತ ಪ್ರಮುಖವಾದ ಮೈಲಿಗಲ್ಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ವಿದ್ಯಾರ್ಥಿಗಳು ವಿಶ್ವಾಸಪೂರ್ವಕವಾಗಿ ಬರೆಯುವಂತಾಗಲೂ ಮತ್ತು ಶಿಕ್ಷಕರು ವಿದ್ಯಾರ್ಥಿಗಳನ್ನು ಈ ದೆಸೆಯಲ್ಲಿ ಸಿದ್ಧಗೊಳಿಸಲು ಅನುವಾಗುವಂತೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರ ಕಚೇರಿಯಿಂದ **ಉತ್ತರ ಉನ್ನತಿ–2** ಎನ್ನುವ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಮಾದರಿ ಉತ್ತರಗಳ ಸಮೇತ ನೀಡುತ್ತಿರುವುದು ಹರ್ಷದಾಯಕ ವಿಷಯವಾಗಿದೆ. ಪರೀಕ್ಷೆಗೆ ಉಳಿಕೆ ಇರುವ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸದರಿ ಕೈಪಿಡಿಯನ್ನು ಆಧರಿಸಿ ತಮ್ಮ ಹಂತದಲ್ಲಿ ಕ್ರಿಯಾಯೋಜನೆ ರಚಿಸಿಕೊಂಡು ಸದರಿ ಹೊತ್ತಿಗೆಯನ್ನು ಪರಿಣಾಮಕಾರಿ ಬಳಸಿಕೊಂಡು ಉತ್ತಮ ಫಲಿತಾಂಶ ಪಡೆಯಲು ಸಹಕಾರಿಯಾಗಲೀ ಎಂದು ಆಶಿಸುತ್ತಾ, ವಿದ್ಯಾರ್ಥಿಗಳ ಫಲಿತಾಂಶವು ಕೇವಲ ವಿದ್ಯಾರ್ಥಿಗೆ ಸಂಬಂಧಿಸಿದ ಫಲಿತಾಂಶವಾಗಿರದೇ, ಬೆಂಗಳೂರು ನಗರ ಜಿಲ್ಲೆಯ ಫಲಿತಾಂಶವೂ ಆಗಿರುವುದರಿಂದ ಜಿಲ್ಲೆಯ ಫಲಿತಾಂಶವನ್ನು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಈ ಪುಸ್ತಿಕೆಯು ದಾರಿದೀಪವಾಗಲೀ ಎಂದು ಹಾರೈಸುತ್ತಾ, ಈ ಹೊತ್ತಿಗೆಯನ್ನು ಹೊರತರುವಲ್ಲಿ ಶ್ರಮಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಂಪನ್ಮೂಲ ಶಿಕ್ಷಕರಿಗೆ ತುಂಬು ಹೃದಯದ ಅಭಿನಂದನೆಗಳು.

01.01.2024
ಬೆಂಗಳೂರು

ಕಾಂತರಾಜು
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು



**ಲೋಹಿತೇಶ್ವರ ರೆಡ್ಡಿ ಕೆ ಪಿ**
ಉಪನಿರ್ದೇಶಕರು (ಆಡಳಿತ)

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**

# ಸಂದೇಶ

ಪ್ರತಿಯೊಂದು ವಿದ್ಯಾರ್ಥಿಯ ಜೀವನದಲ್ಲೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವೂ ಮಹತ್ವಪೂರ್ಣವಾಗಿದೆ. ಇಂದಿನ ವಿದ್ಯಾರ್ಥಿಗಳೇ, ಮುಂದಿನ ರಾಷ್ಟ್ರದ ಭವಿಷ್ಯತ್ತಿನ ಸಂಪತ್ತಾಗಿರುವುದರಿಂದ, ಶಿಕ್ಷಣದ ಅಂತಸತ್ವವನ್ನು ಮತ್ತಷ್ಟು ಗಟ್ಟಿಗೊಳಿಸುವ ಮತ್ತು ಗುಣಾತ್ಮಕವಾಗಿಸುವ ನಿಟ್ಟಿನಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ. ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಿದ ನಂತರ, ವಿದ್ಯಾರ್ಥಿಗಳನ್ನು ಸ್ಪರ್ಧಾತ್ಮಕ ಜಗತ್ತಿಗೆ ಅಣಿಗೊಳಿಸುವಂತಹ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕಾದ ಈ ಸಂಧರ್ಭದಲ್ಲಿ ನಮ್ಮ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಲೇ ಬರಲಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನು ಶೈಕ್ಷಣಿಕವಾಗಿ ಸಧೃಡರನ್ನಾಗಿ ಮಾಡುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಸಂಪನ್ಮೂಲ ಶಿಕ್ಷಕರ ತಂಡವನ್ನು ರಚಿಸಿಕೊಂಡು ಕಾರ್ಯೋನ್ಮುಖರಾಗಿದ್ದಾರೆ.

ನಮ್ಮ ಈ ಬೆಂಗಳೂರು ಉತ್ತರ ಜಿಲ್ಲೆಯ ಶೈಕ್ಷಣಿಕ ಪಗ್ರತಿಯ ಒಂದು ಭಾಗವಾದ, ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಪ್ರತಿವರ್ಷ "ಉತ್ತರ ಉತ್ತುಂಗ" ಎಂಬ ಹೊತ್ತಿಗೆಯನ್ನು ಹೊರತರುತ್ತಿದ್ದು ಸದರಿ ವರ್ಷ ಹೊಸ ಶೀರ್ಷಿಕೆಯೊಂದಿಗೆ ಮಾದರಿ ಉತ್ತರಗಳ ಸಮೇತ **'ಉತ್ತರ ಉನ್ನತಿ–2'** ಎಂಬ ಶೀರ್ಷಿಕೆಯಡಿಯಲ್ಲಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನೊಳಗೊಂಡ ಕೈಪಿಡಿಯನ್ನು ಹೊರತರಲಾಗುತ್ತಿದ್ದು ಇದರ ಉಪಯೋಗವನ್ನು ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಡೆಯುವಂತಾಗಲೀ ಎಂದು ಆಶಿಸುತ್ತೇನೆ.

ಕೇವಲ ಉತ್ತೀರ್ಣಗೊಳಿಸುವ ಒಂದೇ ಮಾನದಂಡವನ್ನು ಇಟ್ಟುಗೊಳ್ಳದೇ, ವಿದ್ಯಾರ್ಥಿಯ ಗುಣಾತ್ಮಕ ಫಲಿತಾಂಶಕ್ಕೆ ಇನ್ನೂ ಉಳಿಕೆ ಇರುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮದೇ ಆದ ಕ್ರಿಯಾ ಯೋಜನೆಯನ್ನು ರಚಿಸಿಕೊಂಡು ಉತ್ತಮ ಸ್ಥಾನ ಪಡೆಯುವಂತಾಗಲೀ ಎಂದು ಶುಭ ಹಾರೈಸುತ್ತೇನೆ.

ಈ ಕೈಪಿಡಿಯನ್ನು ಹೊರತರುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಾದ ಶ್ರೀ ರಮೇಶ್ ವಿ ರವರಿಗೂ , ಎಲ್ಲಾ ವಿಷಯ ಪರಿವೀಕ್ಷಕರು ಮತ್ತು ಅವರ ಸಂಪನ್ಮೂಲ ತಂಡಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

01.01.2024

ಬೆಂಗಳೂರು

ಲೋಹಿತೇಶ್ವರ ರೆಡ್ಡಿ ಕೆ ಪಿ

ಉಪನಿರ್ದೇಶಕರು (ಆಡಳಿತ)




ರಮೇಶ್ ವಿ
ಶಿಕ್ಷಣಾಧಿಕಾರಿಗಳು &
ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು



ಉಪನಿರ್ದೇಶಕರು (ಆಡಳಿತ)ರವರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ
ಬೆಂಗಳೂರು – 560009
ದೂರವಾಣಿ ಸಂಖ್ಯೆ – 080 22215312
ಇಮೇಲ್ ವಿಳಾಸ –
ddpinorth@gmail.com


# ಮುನ್ನುಡಿ

ಶಿಕ್ಷಣವು ವಿದ್ಯಾರ್ಥಿಯ ವ್ಯಕ್ತಿತ್ವ ಬೆಳವಣಿಗೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಅದರಲ್ಲೂ ಮಾಧ್ಯಮಿಕ ಶಿಕ್ಷಣವೂ ವಿದ್ಯಾರ್ಥಿಯ ಮುಂದಿನ ಭವಿಷ್ಯದ ತಳಪಾಯವಾಗಿದ್ದು, ರಾಷ್ಟ್ರದ ಉತ್ತಮ ನಾಗರೀಕ ಪ್ರಜೆಯನ್ನಾಗಿಸುವಲ್ಲಿ ಮಹತ್ತಮ ಘಟ್ಟವಾಗಿದೆ. ಕರ್ನಾಟಕ ಶಿಕ್ಷಣ ಸಂರಚನೆಯ ವ್ಯವಸ್ಥೆಯಲ್ಲಿ ಮಾಧ್ಯಮಿಕ ಶಿಕ್ಷಣದ ಮಹತ್ತರ ಘಟ್ಟವೆಂದೇ ಪರಿಗಣಿತವಾಗಿರುವ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಆಯ್ಕೆ ಮತ್ತು ವೃತ್ತಿ ಜೀವನ ನಿರ್ಧಾರದ ಕೈಗೊಳ್ಳುವ ಪ್ರಥಮತಃ ಹಂತವಾಗಿದ್ದು, ಈ ತರಗತಿಯ ಫಲಿತಾಂಶವೂ ಅತ್ಯಂತ ಮಹತ್ತರವಾಗಿರುತ್ತದೆ.

ಪ್ರತೀ ವರ್ಷ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ನಡೆಸಲ್ಪಡುವ ಹತ್ತನೇ ತರಗತಿಯ ಪರೀಕ್ಷೆಗೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯಿಂದ ಪ್ರಸಕ್ತ ವರ್ಷ 44378 ಶಾಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಈ ವಿದ್ಯಾರ್ಥಿಗಳ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಕರಿಂದ ಮೊದಲುಗೊಂಡು, ಮುಖ್ಯ ಶಿಕ್ಷಕರು ಅಲ್ಲದೇ ತಾಲ್ಲೂಕು ಹಂತ, ಜಿಲ್ಲಾ ಹಂತ, ರಾಜ್ಯ ಹಂತದ ಎಲ್ಲಾ ಅಧಿಕಾರಿಗಳು ವಿವಿಧ ಕಾರ್ಯತಂತ್ರಗಳ ಮುಖೇನ ಪ್ರಯತ್ನಿಸುತ್ತಲೇ ಇದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಕಚೇರಿಯಿಂದಲೂ 22 ಮೇ 2023 ರಂದು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ ಕರೆದು ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ರಚಿಸಿ, ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಮುಟ್ಟುವಂತಹ ಕೆಲಸವನ್ನು ಜೂನ್ 2023ರಿಂದಲೂ ಮಾಡುತ್ತಲೇ ಬರುತ್ತಿದೆ.

ಈ ಕಾರ್ಯಚಟುವಟಿಕೆಯ ಒಂದು ಭಾಗವಾಗಿ **"ಉತ್ತರ ಉನ್ನತಿ–2"** ಎಂಬ ಮಾದರಿ ಉತ್ತರಗಳನ್ನು ಒಳಗೊಂಡ ಅಭ್ಯಾಸ ಪತ್ರಿಕೆಗಳ ಸಂಪನ್ಮೂಲ ಸಾಹಿತ್ಯವನ್ನು ರಚಿಸಿ, ಪ್ರಸ್ತುತ ಶಿಕ್ಷಕರಿಗೆ ನೀಡುತ್ತಿದ್ದೇವೆ. ಈ ಸಂಪನ್ಮೂಲ ಸಾಹಿತ್ಯವನ್ನು ಗುಣಾತ್ಮಕ ಫಲಿತಾಂಶದ ಒಂದು ಕಾರ್ಯತಂತ್ರವಾಗಿ ಹೇಗೆ ಬಳಕೆ ಮಾಡಬೇಕೆಂದು ವಿಷಯ ಪರಿವೀಕ್ಷಕರು ಮತ್ತು ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ಮುಖೇನ ಮಾರ್ಗದರ್ಶನ ಮಾಡಿದ್ದು, ಇದು ಈ ಶೈಕ್ಷಣಿಕ ವರ್ಷದ ಬೆಂಗಳೂರು ಉತ್ತರ ಜಿಲ್ಲೆಯ ಫಲಿತಾಂಶವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವುದೆಂಬ ಆಶಯದೊಂದಿಗೆ ಈ ಕೈಪಿಡಿಯನ್ನು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕೈಗಿಡಲಾಗುತ್ತಿದೆ. ಇದರ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಪಡೆದು, ಉತ್ತಮ ಫಲಿತಾಂಶಕ್ಕಾಗಿ ಶುಭ ಹಾರೈಸುತ್ತೇನೆ.

01.01.2024

ಬೆಂಗಳೂರು

**ರಮೇಶ್ ವಿ**

ಶಿಕ್ಷಣಾಧಿಕಾರಿಗಳು & ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು



**ಪಂಕಜ ಜಿ ಸಿ**
ಶಿಕ್ಷಣಾಧಿಕಾರಿ

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**

# ಶುಭ ಹಾರೈಕೆ

ಶಿಕ್ಷಣವು ಜ್ಞಾನವನ್ನು ಕಟ್ಟಿಕೊಳ್ಳುವ, ಜ್ಞಾನವನ್ನು ಸಂರಚಿಸಿಕೊಳ್ಳುವ ಹಾಗೂ ಜ್ಞಾನಾನ್ವೇಷಣೆಯತ್ತ ನಮ್ಮನ್ನು ಪ್ರೇರೇಪಿಸುವ ಒಂದು ಅದ್ಭುತ ಪ್ರಕ್ರಿಯೆ. ಬೋಧನೆ, ಕಲಿಕೆ, ಕಲಿಕೆಯ ದೃಢೀಕರಣ ಹಾಗೂ ಮೌಲ್ಯಮಾಪನ ಕ್ರಿಯೆಗಳು ಈ ಪ್ರಕ್ರಿಯೆಯ ಪ್ರಮುಖ ಭಾಗಗಳಾಗಿವೆ. ಮೌಲ್ಯಮಾಪನವು ವಿದ್ಯಾರ್ಥಿಗಳ ಗುಣಾತ್ಮಕ ಕಲಿಕೆಯನ್ನು ಹಾಗೂ ಕಲಿಕಾಫಲಗಳನ್ನು ಒರೆಹಚ್ಚುವ ಒಂದು ಸಾಧನವಾಗಿದೆ. ಈ ಮೌಲ್ಯಮಾಪನ ಪ್ರಕ್ರಿಯೆಯನ್ನು ಸದೃಢಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು 2023–24ನೇ ಸಾಲಿನ ಪರೀಕ್ಷೆಗಾಗಿ ಸಿದ್ಧಗೊಳಿಸುವ ನಿಟ್ಟಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಿಂದ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿರುವ "**ಉತ್ತರ ಉನ್ನತಿ–2**" ಎಂಬ ಕೈಪಿಡಿಯನ್ನು ಹೊರತರಲಾಗುತ್ತಿದೆ. 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಹೊರತರುತ್ತಿರುವ ಈ ಆವೃತ್ತಿಯು ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥೈಸಿಕೊಳ್ಳುವ, ವಿಶ್ಲೇಷಿಸುವ ಹಾಗೂ ಸೂಕ್ತ ರೀತಿಯಲ್ಲಿ ಉತ್ತರಿಸುವ ಪ್ರಕ್ರಿಯೆಯನ್ನು ಸದೃಢಗೊಳಿಸುವತ್ತ ಬಹಳ ಪರಿಣಾಮಕಾರಿಯಾಗಿದೆ. ಈ "ಉತ್ತರ ಉನ್ನತಿ–2" ನೂತನ ಆವೃತ್ತಿಯು 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ಸಾಮಗ್ರಿಯಾಗಿ ಉಪಯೋಗವಾಗಲಿ ಎಂಬುವುದು ನಮ್ಮ ಆಶಯ. ಈ ಕೈಪಿಡಿಯನ್ನು ಹೊರತರುವಲ್ಲಿ ತಮ್ಮ ಅಮೂಲ್ಯ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿದ ಉಪನಿರ್ದೇಶಕರು (ಆಡಳಿತ), ಬೆಂಗಳೂರು ಉತ್ತರ ಜಿಲ್ಲೆ, ಇವರಿಗೂ ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಿಗೂ ಮತ್ತು ಈ ಕಾರ್ಯಕ್ಕೆ ಶ್ರಮಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು, ವಿಷಯ ಪರಿವೀಕ್ಷಕರು ಹಾಗೂ ಅಧಿಕಾರಿ ವೃಂದದವರಿಗೂ ಹೃತ್ಪೂರ್ವಕ ಅಭಿನಂದನೆಗಳು. 2023–24ನೇ ಸಾಲಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸುತ್ತಾ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಉತ್ತುಂಗಕ್ಕೆ ಏರಲೆಂದು ಮನದುಂಬಿ ಆಶಿಸುತ್ತೇನೆ.

01.01.2024

ಬೆಂಗಳೂರು

**ಪಂಕಜ ಜಿ ಸಿ**

ಶಿಕ್ಷಣಾಧಿಕಾರಿ



**ಮಂಜುನಾಥ ಎನ್ ಎಸ್**
ವಿಷಯ ಪರಿವೀಕ್ಷಕರು
ಸಮಾಜ ವಿಜ್ಞಾನ & ಕನ್ನಡ(ಹೆ.ಪ್ರ)


**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**


## ಕೈಪಿಡಿಯ ಕುರಿತು

2024 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ನಡೆಸುವ ವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ತರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿರುವುದು ತಮಗೆಲ್ಲಾ ತಿಳಿದಿರುವ ವಿಷಯವೇ ಆಗಿದೆ. ಈ ಬಗ್ಗೆ ಈಗಾಗಲೇ ನಡೆಸಿರುವ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ಸಭೆಗಳಲ್ಲಿ ವಿಸ್ತೃತವಾಗಿ ತಿಳಿಯಪಡಿಸಿದೆ. ಈ ಬದಲಾವಣೆಗಳೊಂದಿಗೆ ಶಿಕ್ಷಕರನ್ನು ಶೈಕ್ಷಣಿಕವಾಗಿ ಬಲಪಡಿಸಲು ಮತ್ತು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಬರೆಯುವಂತೆ ಮಾಡಲು ಪ್ರತಿ ವರ್ಷದಂತೆ ಈ ವರ್ಷವೂ 'ಉತ್ತರ ಉನ್ನತಿ–2' ಎಂಬ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಹಲವಾರು ಬದಲಾವಣೆಗಳೊಂದಿಗೆ ತಮ್ಮ ಮುಂದಿಡಲು ನಾವು ಹರ್ಷಿಸುತ್ತೇವೆ. ಇದು 'ಉತ್ತರ ಉತ್ತುಂಗ'ದ ಹೊಸ ಶೀರ್ಷಿಕೆಯ ಹೊಸ ಆವೃತ್ತಿ ಎಂಬುದನ್ನು ತಿಳಿಸಲು ಖುಷಿ ಎನಿಸುತ್ತದೆ.

ಹಿಂದಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪ್ರಸ್ತುತ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2019–20 ರಲ್ಲಿ ಪ್ರಕಟಿಸಿರುವ "ದೀವಿಗೆ" ಎಂಬ ಪ್ರಶ್ನೆಪತ್ರಿಕೆ ವಿನ್ಯಾಸ ಕೈಪಿಡಿ, ಮಂಡಳಿಯು ಈ ಹಿಂದಿನ ವರ್ಷಗಳಲ್ಲಿ ಪ್ರಕಟಿಸಿರುವ ಮಾದರಿ ಪ್ರಶ್ನೆಪತ್ರಿಕೆಗಳು ಮತ್ತು ಸದರಿ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸಿರುವ ಪರಿಷ್ಕೃತ ಅಧ್ಯಾಯಗಳ ಆಧಾರದ ಮೇಲೆ ಈ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಸಂಪನ್ಮೂಲ ಶಿಕ್ಷಕರ ತಂಡದಿಂದ ರಚಿಸಲಾಗಿದ್ದು, ಸದರಿ ಸಾಹಿತ್ಯವು 10 ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿದೆ. ವಿಶೇಷವಾಗಿ ಈ ವರ್ಷದ ನೂತನ ಆವೃತ್ತಿಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರಕಟಿಸಿರುವ ಮಾದರಿ ಉತ್ತರಗಳ ಮಾದರಿಯಲ್ಲಿ ಪ್ರತಿ ಪ್ರಶ್ನೆಪತ್ರಿಕೆಗಳಿಗೂ ಉತ್ತರ ಕೀಲಿಯನ್ನು ನೀಡಲಾಗಿದೆ. ಇದು ವಿದ್ಯಾರ್ಥಿಗಳ ಸ್ವ ಮೌಲ್ಯಮಾಪನಕ್ಕೆ ಹೆಚ್ಚು ಅನುಕೂಲಕರವಾಗಿದೆ.

ಸದರಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ವಿವಿಧ ಕಾರ್ಯತಂತ್ರಗಳನ್ನು ಬಳಕೆ ಮಾಡಿ ವಿದ್ಯಾರ್ಥಿಗೆ ಅಭ್ಯಾಸ ಮಾಡಿಸಬಹುದಾಗಿದ್ದು, ಪ್ರತಿ ಅಭ್ಯಾಸ ಪ್ರಶ್ನೆಪತ್ರಿಕೆಯ ಬಳಕೆಯ ನಂತರ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡಿ ಫಲಿತಾಂಶ ಸುಧಾರಣೆಗೆ ಶ್ರಮಿಸುವುದು.

ಸದರಿ "ಉತ್ತರ ಉನ್ನತಿ–2" ನೂತನ ಕೈಪಿಡಿಯು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಪ್ರಕಟಿಸುತ್ತಿರುವ ಅಭ್ಯಾಸ ಪ್ರಶ್ನೆಪತ್ರಿಕೆಗಳಾಗಿದ್ದು, ಈ ಸಾಹಿತ್ಯವನ್ನು ತರಲು ಸೂಕ್ತ ಮಾರ್ಗದರ್ಶನ ನೀಡಿದ ನಮ್ಮ ಜಿಲ್ಲೆಯ ಶೈಕ್ಷಣಿಕ ನಾಯಕರು ಆದಂತಹ ಶ್ರೀ ಲೋಹಿತೇಶ್ವರ ರೆಡ್ಡಿ ಕೆ.ಪಿ ರವರು, ಉಪನಿರ್ದೇಶಕರು (ಆಡಳಿತ)ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರಂತೆ ಈ ಕಾರ್ಯದ ಪ್ರತಿ ಹಂತದಲ್ಲೂ ಅಗತ್ಯ ಸಲಹೆ, ಸಹಕಾರ ನೀಡಿ ಈ ಸುಂದರ ಹೊತ್ತಿಗೆ ಹೊರತರಲು ಪರಿಶ್ರಮಿಸಿದ ನಮ್ಮ ಕಚೇರಿ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು ಆದಂತಹ ಶ್ರೀ ರಮೇಶ ವಿ ರವರಿಗೂ, ಮತ್ತೊಬ್ಬ ಶಿಕ್ಷಣಾಧಿಕಾರಿಗಳಾದ ಪಂಕಜ ಜಿ ಸಿ ರವರಿಗೂ ಧನ್ಯವಾದಗಳು. ಇನ್ನೂ ನಮ್ಮ ಈ ಪರಿಶ್ರಮದಲ್ಲಿ ಜೊತೆಯಲ್ಲಿದ್ದು, ಸಹಕರಿಸಿದ ನಮ್ಮ ಕಚೇರಿಯ ಎಲ್ಲಾ ವಿಷಯ ಪರಿವೀಕ್ಷಕರಿಗೂ ಮುಖ್ಯವಾಗಿ ಕಳೆದ ಐದು ವರ್ಷಗಳಿಂದ ನಮ್ಮ ಕಚೇರಿಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೈ ಜೋಡಿಸುತ್ತಿರುವ ಎಲ್ಲಾ ವಿಷಯ ಸಂಪನ್ಮೂಲ ಶಿಕ್ಷಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ಸಾಹಿತ್ಯವನ್ನು ತಮ್ಮ ಉಪಯೋಗಕ್ಕೆ ನೀಡಲು ಆನಂದವೆನಿಸುತ್ತದೆ.

ವಂದನೆಗಳೊಂದಿಗೆ,

01.01.2024

ಬೆಂಗಳೂರು

ಮಂಜುನಾಥ.ಎನ್.ಎಸ್

## ❁ ಪರಿಕಲ್ಪನೆ ಮತ್ತು ಮಾರ್ಗದರ್ಶನ ❁

ಶ್ರೀ ಲೋಹಿತೇಶ್ವರ ರೆಡ್ಡಿ ಕೆ ಪಿ
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಸಲಹೆ ಮತು ಸಹಕಾರ

ಶ್ರೀ ರಮೇಶ್ ವಿ
ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

ಶ್ರೀಮತಿ ಪಂಕಜ ಜಿ ಸಿ
ಶಿಕ್ಷಣಾಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಪರಿಶೀಲನೆ

ಮಂಜುನಾಥ.ಎನ್.ಎಸ್
ವಿಷಯ ಪರಿವೀಕ್ಷಕರು–ಸಮಾಜ ವಿಜ್ಞಾನ & ಕನ್ನಡ (ಹೆ.ಪ್ರ)
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಸಂಪನ್ಮೂಲ ರಚನಾ ಸಮಿತಿ

1. ವೀರೇಶ ಎಂ, ಸಹಶಿಕ್ಷಕರು,ಇಂದಿರಾನಗರ ಪ್ರೌಢಶಾಲೆ, ಇಂದಿರಾನಗರ, ಉತ್ತರ ವಲಯ-3
2. ಚಂದ್ರಯ್ಯ ಕೆ ಎಚ್, ಸಹಶಿಕ್ಷಕರು, ಕುವೈತುಲ್ಲಾ ಇಸ್ಲಾಂ ಪ್ರೌಢಶಾಲೆ, ಬೋರ್ ಬ್ಯಾಂಕ್ ರಸ್ತೆ, ಉತ್ತರ ವಲಯ-3

## ತಾಂತ್ರಿಕ ಸಹಕಾರ

ಶ್ರೀ ಉಸೈದ್ ಬೇಗ್, ಶಿಕ್ಷಣ ಸಂಯೋಜಕರು, ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ

# ಉತ್ತರ ಉತ್ತುಂಗ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

## ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| **1** | ಅಭ್ಯಾಸ ಪತ್ರಿಕೆ – 01 | 02 – 04 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 01 | 05– 13 |
| **2** | ಅಭ್ಯಾಸ ಪತ್ರಿಕೆ – 02 | 14 – 16 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 02 | 17 – 25 |
| **3** | ಅಭ್ಯಾಸ ಪತ್ರಿಕೆ – 03 | 26 – 28 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 03 | 29 - 37 |
| **4** | ಅಭ್ಯಾಸ ಪತ್ರಿಕೆ – 04 | 38 - 40 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 04 | 41 – 49 |
| **5** | ಅಭ್ಯಾಸ ಪತ್ರಿಕೆ – 05 | 50 - 52 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 05 | 53 – 61 |

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80** **ಮಾದರಿ ಪ್ರಶ್ನೆ ಪತ್ರಿಕೆ 1** **ಒಟ್ಟು ಪ್ರಶ್ನೆಗಳು : 38**

**ಸೂಚನೆಗಳು :**

- **ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.**
- **ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.**
- **ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ ಉತ್ತರಿಸಲು ನಿಗಧಿ ಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

1. ಸವರ್ಣದೀರ್ಘ ಸಂಧಿಗೆ ಉದಾಹರಣೆಯಾಗಿರುವ ಪದ.

ಎ) ಒಬ್ಬೊಬ್ಬರು ಬಿ) ಮಹಾನುಭಾವ ಸಿ) ಬಲಗಡಲು ಡಿ) ಬೇಟೆಯಾಡು

2. 'ಬಾಂದಳ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.

ಎ) ಮೂರು ಬಿ) ನಾಲ್ಕು ಸಿ) ಐದು ಡಿ) ಆರು

3. ಹೊಂಬಾಳೆ ಪದದಲ್ಲಿ ಕಂಡುಬರುವ ಸಮಾಸ.

ಎ) ದ್ವಿಗು ಸಮಾಸ ಬಿ) ಕ್ರಿಯಾಸಮಾಸ ಸಿ) ಕರ್ಮಧಾರೆಯ ಸಮಾಸ ಡಿ) ತತ್ಪುರುಷ ಸಮಾಸ

4. ಸಂಬಧಾರ್ಥಕ ಅವ್ಯಯಕ್ಕೆ ಉದಾಹರಣೆಯಾದ ಪದವಿದು.

ಎ) ಚೆನ್ನಾಗಿ ಬಿ) ಅಯ್ಯೋ ಸಿ) ನಾನೇ ಡಿ) ಮತ್ತು

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 12x1=12**

5. ಖಡ್ಗಕ್ಕಿಂತ ಹರಿತವಾದುದು ಯಾವುದು?
6. ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡರು?
7. ಹಕ್ಕಿಗಳು ಎಲ್ಲಿ ಆಶ್ರಯ ಪಡೆಯುತ್ತವೆ?
8. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?
9. ಥೇಮ್ಸ್ ನದಿಯ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?
10. ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?
11. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?
12. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?
13. ಅಳಿಯಾಸೆಗಳ ಸುಳಿಗೆ ಸಿಲುಕಿದರೆ ಮನಸ್ಸು ಹೇಗೆ ತೊಳಲುತ್ತದೆ?
14. ಅಡಿಗರು ಯಾವುದಕ್ಕೆ ಹಗಲಿರುಳು ಹೋರಾಡಬೇಕು ಎಂದಿದ್ದಾರೆ?
15. ತೋಡಿದ ಕೆರೆಗಳು ಯಾವಾಗ ನಿಷ್ಪ್ರಯೋಜಕ ಆಗುತ್ತವೆ?
16. ನೂರು ಯಾಗಗಳನ್ನು ಮಾಡುತ್ತಿದ್ದವರಿಗೆ ಯಾವ ಪದವಿ ದೊರೆಯುತ್ತಿತ್ತು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

17. ಲೇಖಕರು ಹೇಳುವಂತೆ ಸಾಮಾನ್ಯವಾದ ಲೋಕವರ್ತನೆ ಯಾವುದು?
18. ಪುಟ್ಟರಾಜರು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?
19. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ತರಹದ ಕಪ್ಪುಗಳಿದ್ದವು?

20. ಮಲಗಿದ್ದ ಗೋಪಾಲನನ್ನು ತಾಯಿ ಯಾವ ಮಾತುಗಳಿಂದ ಏಳಿಸಿದಳು?
21. ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?
22. ಅರ್ಜುನನು ಮನದಲಿ ಒಡಲು ಒಡೆವಂತೆ ನಗಲು ಕಾರಣವೇನು?
23. ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದ ವೈದ್ಯರ ಮಾತುಗಳನ್ನು ಕುರಿತು ಬರೆಯಿರಿ.
24. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 1x3=3**

25. ಅ.ರಾ. ಮಿತ್ರ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1x3=3**

26. ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1x3=3**

27. 'ಸೀತೆಯ ಮುಖ ಕಮಲ ಅರಳಿತು'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

28. ಆಳಾಗಿ ದುಡಿ ಅರಸನಾಗಿ ಉಣ್ಣು
ಅಥವಾ
ಮಾಡಿದ್ದುಣ್ಣೋ ಮಹರಾಯ

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5x3=15**

29. ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ
30. ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ
31. ಈ ಮೇಣದ ಬೊಂಬೆಗಳು ತದ್ರೂಪ ವ್ಯಕ್ತಿಯನ್ನೇ ಹೋಲುತ್ತವೆ
32. ಕಬ್ಬಕ್ಕಿ ಬಾಯ ಬಿಡುತ್ತಾವೆ
33. ನೆಲಮುಗಿಲ ವಾಲಗವೇ ನಡೆದಂತಿದೆ

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

34. ಏಕಾಂಗಿ ವೀರನಂತೆ ______________________
______________________
______________________
______________________ ನಡೆದನು.

ಅಥವಾ

ಕಾಡು ಕಾಡು ______________________
______________________
______________________
______________________ ಕಂಡಿತು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4**

35. 'ಸದ್ದು ಮಾಡದಿರು' ಕವಿತೆಯು ನೀಡುವ ಸಂದೇಶವನ್ನು ನೀವು ಮೆಚ್ಚುವ ಅಂಶಗಳೊಡನೆ ವಿವರಿಸಿ.

ಅಥವಾ

'ಸದ್ದು ಮಾಡದಿರು' ಪದ್ಯದಲ್ಲಿರುವ ಮಾನವೀಯ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ವಿವರಿಸಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲಾ ಆತ್ಮಸ್ವರೂಪರು ಆದ್ದರಿಂದ ನಾವೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಆದಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಅದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ಧಾರ ನಮ್ಮ ಕೈಯಲ್ಲೇ ಇದೆ.

36. ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?

ಆ) ನಮಸ್ಕಾರದ ಅರ್ಥ ವಿಶೇಷತೆಯೇನು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಗ್ರಂಥಾಲಯದ ಮಹತ್ವ

ಅಥವಾ

ಪರಿಸರ ಸಂರಕ್ಷಣೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಹೊಸಕೋಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ವೆಂಕಟ್' ಎಂದು ಭಾವಿಸಿಕೊಂಡು ನಿಮ್ಮ ನಗರದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆ 'ವಿಕ್ರಮ್' ಎಂದು ಭಾವಿಸಿಕೊಂಡು ನಿಮ್ಮ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಆಚರಣೆಯ ಕುರಿತು ಬಳ್ಳಾರಿಯ ನಿಮ್ಮ ಸ್ನೇಹಿತೆ 'ಲಕ್ಷ್ಮಿ'ಗೆ ಒಂದು ಪತ್ರ ಬರೆಯಿರಿ.

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80 ಮಾದರಿ ಪ್ರಶ್ನೋತ್ತರ ಪತ್ರಿಕೆ 1 ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

**1. ಸವರ್ಣದೀರ್ಘ ಸಂಧಿಗೆ ಉದಾಹರಣೆಯಾಗಿರುವ ಪದ.**

ಎ) ಒಬ್ಬೊಬ್ಬರು **ಬಿ) ಮಹಾನುಭಾವ** ಸಿ) ಬಲಗಡಲು ಡಿ) ಬೇಟೆಯಾಡು

**2. 'ಬಾಂದಳ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.**

ಎ) ಮೂರು **ಬಿ) ನಾಲ್ಕು** ಸಿ) ಐದು ಡಿ) ಆರು

**3. 'ಹೊಂಬಾಳೆ' ಪದದಲ್ಲಿ ಕಂಡುಬರುವ ಸಮಾಸ.**

ಎ) ದ್ವಿಗು ಸಮಾಸ ಬಿ) ಕ್ರಿಯಾಸಮಾಸ **ಸಿ) ಕರ್ಮಧಾರೆಯ ಸಮಾಸ** ಡಿ) ತತ್ಪುರುಷ ಸಮಾಸ

**4. ಸಂಬಧಾರ್ಥಕ ಅವ್ಯಯಕ್ಕೆ ಉದಾಹರಣೆಯಾದ ಪದವಿದು.**

ಎ) ಚೆನ್ನಾಗಿ ಬಿ) ಅಯ್ಯೋ ಸಿ) ನಾನೇ **ಡಿ) ಮತ್ತು**

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 12x1=12**

**5. ಖಡ್ಗಕ್ಕಿಂತ ಹರಿತವಾದುದು ಯಾವುದು?**

ಖಡ್ಗಕ್ಕಿಂತ ಹರಿತವಾದುದು ಪೆನ್ನು.

**6. ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡರು?**

ತಾಯಿ ಸಿದ್ದಮ್ಮ ಪಂಚಾಕ್ಷರ ಗವಾಯಿಗಳಲ್ಲಿ ತಮ್ಮ ಮಗ ಪುಟ್ಟರಾಜನನ್ನು ಮನೆಗೆ ಕಳುಹಿಸಿಕೊಡುವಂತೆ ಬೇಡಿಕೊಂಡರು.

**7. ಹಕ್ಕಿಗಳು ಎಲ್ಲಿ ಆಶ್ರಯ ಪಡೆಯುತ್ತವೆ?**

ಹಕ್ಕಿಗಳು ಗುಹೆ, ಪೊಟರೆ, ಗೂಡು, ಬಿಲದಂತಹ ಸ್ಥಳಗಳಲ್ಲಿ ಆಶ್ರಯ ಪಡೆಯುತ್ತವೆ.

**8. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?**

ಕಾಫೀಗಿಂತ ಕಾಫಿಯ ಕಪ್ಪಿಗೆ ಜನರು ಹೆಚ್ಚು ಮಹತ್ವ ಕೊಡುತ್ತಿರುವುದು ಹಾಗೂ ಮತ್ತೊಬ್ಬರ ಕಪ್ಪನ್ನು ನೋಡಿ ಅಸೂಯೆ ಪಡುವುದು ದುರ್ದೈವದ ಸಂಗತಿ ಎಂದು ಗುರುಗಳು ಬಣ್ಣಿಸಿದ್ದಾರೆ.

**9. ಥೇಮ್ಸ್ ನದಿಯ ದಡದಲ್ಲಿರುವ ಜನವಸತಿಯನ್ನು ಲೇಖಕರು ಯಾವುದಕ್ಕೆ ಹೋಲಿಸುತ್ತಾರೆ?**

ಥೇಮ್ಸ್ ನದಿಯ ದಡದಲ್ಲಿರುವ ಜನವಸತಿಯನ್ನು ಲೇಖಕರು ಮುಂಬಯಿಯ ಮೆರೀನ್ ಡ್ರೈವ್‌ಗೆ ಹೋಲಿಸಿದ್ದಾರೆ.

**10. ಗೋಪಾಲನಿಗೆ ಬಣ್ಣಬಣ್ಣದ ಹೂಗಳು ಹೇಗೆ ಕಾಣಿಸುತ್ತಿದ್ದವು?**

ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು.

**11. ಬೋಧಿವೃಕ್ಷದ ಹಾಡು ಯಾರ ಜೀವನವನ್ನು ಕುರಿತು ತಿಳಿಸುತ್ತದೆ?**

ಬೋಧಿವೃಕ್ಷದ ಹಾಡು ಸಿದ್ಧಾರ್ಥನ ಜೀವನವನ್ನು ಕುರಿತು ತಿಳಿಸುತ್ತದೆ.

**12. ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುವುದು ಯಾವಾಗ?**

ಚೈತ್ರಮಾಸ/ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

**13. ಅಳಿಯಾಸೆಗಳ ಸುಳಿಗೆ ಸಿಲುಕಿದರೆ ಮನಸ್ಸು ಹೇಗೆ ತೊಳಲುತ್ತದೆ?**

ಅಳಿಯಾಸೆಗಳ ಸುಳಿಗೆ ಸಿಲುಕಿದರೆ ಮನಸ್ಸು ನೆಲೆಯಿರದೆ ತೊಳಲುವುದು.

**14. ಅಡಿಗರು ಯಾವುದಕ್ಕೆ ಹಗಲಿರುಳು ಹೋರಾಡಬೇಕು ಎಂದಿದ್ದಾರೆ?**

ಅಡಿಗರು ಹಗಲಿರುಳು ಒಂದು ಹೆಗ್ಗುರಿಗಾಗಿ ಹೋರಾಡಬೇಕು ಎಂದಿದ್ದಾರೆ.

**15. ತೋಡಿದ ಕೆರೆಗಳು ಯಾವಾಗ ನಿಷ್ಪ್ರಯೋಜಕ ಆಗುತ್ತವೆ?**

ಪುಣ್ಯ ತೀರ್ಥಗಳು ಬರದಿದ್ದಾಗ ಕೆರೆಗಳು ನಿಷ್ಪ್ರಯೋಜಕ ಆಗುತ್ತವೆ.

**16. ನೂರು ಯಾಗಗಳನ್ನು ಮಾಡುತ್ತಿದ್ದವರಿಗೆ ಯಾವ ಪದವಿ ದೊರೆಯುತ್ತಿತ್ತು?**

ನೂರು ಯಾಗಗಳನ್ನು ಮಾಡುತ್ತಿದ್ದವರಿಗೆ ಇಂದ್ರ ಪದವಿ ದೊರೆಯುತ್ತಿತ್ತು.

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17. ಲೇಖಕರು ಹೇಳುವಂತೆ ಸಾಮಾನ್ಯವಾದ ಲೋಕವರ್ತನೆ ಯಾವುದು?**

"ಅನೇಕ ವರ್ಷಗಳಿಂದ ಆಶ್ರಯ ಕೊಟ್ಟವರನ್ನು ಅವರ ಕಷ್ಟದ ಸಮಯದಲ್ಲಿ ಕೈ ಬಿಡುವುದು, ಸುಖ–ಸಂಪತ್ತು ಇದ್ದಾಗ ಜೊತೆಗಿದ್ದು ಕಷ್ಟದಲ್ಲಿದ್ದಾಗ ದೂರವಾಗುವುದು, ಉಪಕಾರ ಸ್ಮರಣೆ ಮಾಡದಿರುವುದು ಇವು ಸಾಮಾನ್ಯವಾದ ಲೋಕವರ್ತನೆಯಾಗಿವೆ.

**18. ಪುಟ್ಟರಾಜರು ಯಾವ ಯಾವ ವಿದ್ಯೆಗಳಲ್ಲಿ ನಿಷ್ಣಾತರಾದರು?**

ಪುಟ್ಟರಾಜ ಗವಾಯಿಗಳು ಪಾಣಿನಿಯ 'ಅಷ್ಠಾಧ್ಯಾಯಿ', ಶರ್ವವರ್ಮನ 'ಕಾತಂತ್ರ', ಕೇಶೀರಾಜನ 'ಶಬ್ದಮಣಿ ದರ್ಪಣ', ನಿಜಗುಣ ಶಿಯೋಗಿಗಳ 'ಕೈವಲ್ಯ ಪದ್ಧತಿ' ಕೃತಿಗಳ ಅಧ್ಯಯನದ ಜೊತೆಗೆ ತರ್ಕಶಾಸ್ತ್ರ, ನ್ಯಾಯಶಾಸ್ತ್ರ, ಶಬ್ಧಾನುಶಾಸ್ತ್ರ, ಛಂದಶಾಸ್ತ್ರ ಹಾಗೂ ಕನ್ನಡ ವ್ಯಾಕರಣದಲ್ಲಿ ನಿಷ್ಣಾತರಾದರು.

**19. ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ ಯಾವ ತರಹದ ಕಪ್ಪುಗಳಿದ್ದವು?**

ಹೆಡ್ ಮಾಸ್ತರರು ತಂದಿಟ್ಟ ಟ್ರೇನಲ್ಲಿ 30–35 ಕಪ್ಪುಗಳಿದ್ದವು. ಅವುಗಳಲ್ಲಿ ಕೆಲವು ಅತ್ಯಂತ ಬೆಲೆಬಾಳುವ ಕಪ್ಪುಗಳು, ಚೈನಾ ಪಿಂಗಾಣಿಗಳು, ಗಾಜಿನವು, ಸ್ಟೀಲಿನವು, ಪ್ಲಾಸ್ಟಿಕ್‌ನವು, ಇನ್ನೂ ಕೆಲವು ಏನೂ ಬೆಲೆ ಬಾಳದ ಕಪ್ಪುಗಳಿದ್ದವು.

**20. ಮಲಗಿದ್ದ ಗೋಪಾಲನನ್ನು ತಾಯಿ ಯಾವ ಮಾತುಗಳಿಂದ ಎಳಿಸಿದಳು?**

ಮಲಗಿದ್ದ ಗೋಪಾಲನನ್ನು ತಾಯಿಯು "ಗೋಪಾಲ ಬೆಳಗಾಯ್ತು ಏಳು, ಸೂರ್ಯನು ಪ್ರಕಾಶಿಸುತ್ತಿದ್ದಾನೆ, ಹಕ್ಕಿಗಳು ಹಾಡುತ್ತಾ ಕರೆಯುತ್ತಿವೆ, ಬನದಲ್ಲಿ ಹೂಗಳು ಅರಳಿ ನಿನಗಾಗಿ ಕಾಯುತ್ತಿವೆ. ಎದ್ದೇಳು ಶಾಲೆಗೆ ಹೊತ್ತಾಗುತ್ತದೆ" ಎಂಬ ಮಾತುಗಳಿಂದ ಎಳಿಸಿದಳು.

**21. ಬಸವಣ್ಣನವರು ಜನರ ಯಾವ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ?**

ಜನರು ನೀರನ್ನು ಕಂಡಲ್ಲಿ ಮುಳುಗುತ್ತಾರೆ, ಮರವನ್ನು ಕಂಡರೆ ಸುತ್ತುತ್ತಾರೆ. ಬತ್ತುವ ಜಲವನ್ನು ಒಣಗುವ ಮರವನ್ನು ಮೆಚ್ಚುವವರು ಕೂಡಲ ಸಂಗಮನನ್ನು ಅರಿಯಲಾರರು, ಜನರು ಇಂತಹ ಅರ್ಥವಿಲ್ಲದ ಆಚರಣೆಗಳಿಂದ ದೂರವಿರಬೇಕು ಎಂದು ಹೇಳುತ್ತಾ ಬಸವಣ್ಣನವರು ಜನರ ಈ ಧಾರ್ಮಿಕ ನಂಬಿಕೆಗಳನ್ನು ಖಂಡಿಸಿದ್ದಾರೆ.

**22. ಅರ್ಜುನನು ಮನದಲಿ ಒಡಲು ಒಡೆವಂತೆ ನಗಲು ಕಾರಣವೇನು?**

ರಣರಂಗದಲ್ಲಿ ಕೌರವನ ವಿಶಾಲವಾದ ಸೇನೆಯನ್ನು ಕಂಡು ಹೆದರಿದ ಉತ್ತರನು ಮೆಲ್ಲನೆ ರಥದಿಂದ ಕೆಳಗೆ ಧುಮುಕಿದನು, ಕೂಡಲೆ ಬದುಕಿದೆ ಎಂದುಕೊಳ್ಳುತ್ತಾ ತಲೆಕೂದಲು ಕೆದರಿ ಹಾರಾಡುವಂತೆ ಓಡತೊಡಗಿದನು, ಇದನ್ನು ಕಂಡ ಅರ್ಜುನನು ಒಡಲು ಒಡೆವಂತೆ ನಗತೊಡಗಿದನು.

**23. ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದ ವೈದ್ಯರ ಮಾತುಗಳನ್ನು ಕುರಿತು ಬರೆಯಿರಿ.**

ವೈದ್ಯರು ಭಿಮನಾಯಕನನ್ನು ಕುರಿತು "ಕಾಯುವುದು ದೇವರ ಕೆಲಸ, ಕೊಲ್ಲುವುದು ರಾಕ್ಷಸರ ಕೆಲಸ, ಕಾಯುವ ಕೆಲಸಕ್ಕಾಗಿ ದುಡಿಯುವವರಿಗೆ ದೇವರ ಸಹಾಯ ಇದ್ದೇ ಇರುತ್ತದೆ" ಎಂದರು. ವೈದ್ಯರ ಈ ಮಾತುಗಳು ಭೀಮನಾಯಕನ ಮನಸ್ಸನ್ನು ಪರಿವರ್ತಿಸಿದವು.

**24. ಹೊಳೆಯ ದಂಡೆಯ ಸಾಲಿನಲ್ಲಿ ಹಿಂದಿನ ಯಾವ ನೆನಪುಗಳಿವೆ?**

ಹೊಳೆಯ ದಂಡೆಯ ಸಾಲಿನಲ್ಲಿ ಅನೇಕ ರಾಜ್ಯ-ಸಾಮ್ರಾಜ್ಯಗಳು ಹುಟ್ಟಿವೆ-ನಾಶವಾಗಿವೆ, ಶತಶತಮಾನಗಳಿಂದ ನೇಗಿಲ ಯೋಗಿಯಾದ ರೈತನು ಅನ್ನದಾತ ಎನ್ನಿಸಿಕೊಂಡಿದ್ದಾನೆ. ಅಂದಿನಿಂದಲೂ ಅದೇ ಸಂತೆ ಅದೇ ಜಾತ್ರೆಗಳು ನಡೆಯುತ್ತಾ ಬಂದಿವೆ.

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

**25. ಅ.ರಾ. ಮಿತ್ರ**

ಅ.ರಾ. ಮಿತ್ರ ಅವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ. ಇವರು 1935ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳುವಿನಲ್ಲಿ ಜನಿಸಿದರು. ಇವರು "ಕನ್ನಡ ಮೇಘದೂತ, ಒಳನೋಟಗಳು, ಮಹಾಭಾರತ ಪಾತ್ರ ಸಂಗತಿಗಳು" ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ನವರತ್ನರಾಂ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ದೊರೆತಿವೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ಮರವಿದ್ದು ಫಲವೇನು ನೆರಳಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**ಸಾರಾಂಶ :** ಈ ಪದ್ಯಭಾಗವನ್ನು ಅಕ್ಕಮಹಾದೇವಿಯವರ 'ವಚನಗಳು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಪ್ರಸ್ತುತ ವಚನದಲ್ಲಿ ತನ್ನ ಬದುಕು ಫಲದಾಯಕವಾಗುವುದನ್ನು ಹಲವು ನಿದರ್ಶನಗಳೊಂದಿಗೆ ಸಮರ್ಥಿಸುತ್ತಾಳೆ. ಮರವಿದ್ದ ಮೇಲೆ ನೆರಳಿರಬೇಕು, ಧನವಿದ್ದವರಲ್ಲಿ ದಾನಧರ್ಮ, ದಯಾಗುಣವಿರಬೇಕು, ಹಸುವಿದ್ದ ಮೇಲೆ ಹಾಲು ತುಪ್ಪವನ್ನು ನೀಡುವಂತಿರಬೇಕು, ಗುಣವಿಲ್ಲದ ರೂಪ ಫಲ ನೀಡದು. ರೂಪ ಇದ್ದರೆ ಸಾಲದು ಒಳ್ಳೆಯ ಗುಣವಿರಬೇಕು. ಬರಿದಾದ ಬಟ್ಟಲಿಗಿಂತ ಅನ್ನ ತುಂಬಿದ ಬಟ್ಟಲು ಶ್ರೇಷ್ಠ. ಹಾಗೆಯೇ ಚೆನ್ನಮಲ್ಲಿಕಾರ್ಜುನನ ಜ್ಞಾನ ತನಗೆ ದೊರೆತರೆ ಜೀವನ ಸಾರ್ಥಕವಾಗುತ್ತದೆ ಎಂದು ಅಕ್ಕಮಹಾದೇವಿ ಹೇಳುತ್ತಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1x3=3**

**27. 'ಸೀತೆಯ ಮುಖ ಕಮಲ ಅರಳಿತು'**

ಅಲಂಕಾರದ ಹೆಸರು : ರೂಪಕಾಲಂಕಾರ

ಲಕ್ಷಣ : ಎರಡು ವಸ್ತು ಸಾದೃಶ್ಯಗಳು ಹೋಲಿಕೆಯಾಗದೆ ಒಂದೇ ಎಂದು ವರ್ಣಿಸುವುದನ್ನು ರೂಪಕಾಲಂಕಾರ ಎನ್ನುತ್ತೇವೆ. ಇಲ್ಲಿ ಉಪಮಾನ ಮತ್ತು ಉಪಮೇಯಗಳ ನಡುವೆ ಭೇದ ಇರುವುದಿಲ್ಲ.

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಸಮನ್ವಯ : ಇಲ್ಲಿ ಉಪಮೇಯವಾದ ಸೀತೆಯ ಮುಖ ಹಾಗೂ ಉಪಮಾನವಾದ ಕಮಲ ಎರಡು ಬೇರೆ ಬೇರೆ ಎಂದು ಹೇಳದೆ ಒಂದೇ ಎಂದು ಹೇಳಿರುವುದರಿಂದ ಇದು ರೂಪಕಾಲಂಕಾರ.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

**28. ಆಳಾಗಿ ದುಡಿ ಅರಸನಾಗಿ ಉಣ್ಣು**

ಜನಪದ ವೇದಗಳೆಂದೆ ಹೆಸರಾದ ಗಾದೆಗಳನ್ನು ನಾಡಿನ ಹಿರಿಯರು ತಮ್ಮ ಬದುಕಿನ ಅನುಭವಗಳನ್ನು ಪದಗಳಲ್ಲಿ ಹೇಳಿದ್ದಾರೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು ಎಂಬ ಮಾತಿದೆ. ಇಂತಹ ಗಾದೆಗಳಲ್ಲಿ 'ಆಳಾಗಿ ದುಡಿ ಅರಸನಾಗಿ ಉಣ್ಣು' ಎಂಬ ಗಾದೆಯೂ ಒಂದು.

ಪ್ರತಿಯೊಬ್ಬನೂ ತನ್ನ ಜೀವನದಲ್ಲಿ ದುಡಿದು ಬದುಕಬೇಕು. ತನ್ನ ದುಡಿಮೆಯಿಂದ ಯಶಸ್ಸನ್ನು ಕಾಣಬೇಕು. ಯಾರು ಶ್ರಮವಹಿಸಿ ಒಬ್ಬ ಆಳಿನಂತೆ ತನ್ನ ಕೆಲಸವನ್ನು ಮಾಡುತ್ತಾನೋ ಅವನು ಉತ್ತಮ ಪ್ರತಿಫಲವನ್ನು ಪಡೆಯುತ್ತಾನೆ, ಅದು ರೈತ, ವೈದ್ಯ, ಶಿಕ್ಷಕ, ವ್ಯಾಪಾರಿಯೂ ಆಗಿರಬಹುದು. ಒಬ್ಬ ಆಳು ಚೆನ್ನಾಗಿ ದುಡಿದು ರಾಜನೂ ಆಗಬಹುದು ಎಂಬುದನ್ನು ಈ ಗಾದೆಯು ವಿವರಿಸುತ್ತದೆ. ನಾವು ದುಡಿದು ಬದುಕೋಣ ಬದುಕನ್ನು ಸುಂದರವಾಗಿಸೋಣ.

**ಅಥವಾ**

**ಮಾಡಿದ್ದುಣ್ಣೋ ಮಹರಾಯ**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾಗಬಹುದು ಆದರೆ ಗಾದೆ ಸುಳ್ಳಾಗುವುದಿಲ್ಲ ಎಂಬ ಮಾತಿದೆ. ನೂರು ಮಾತನಾಡುವುದಕ್ಕಿಂತ ಮಾತಿನ ಮಧ್ಯೆ ಒಂದು ಗಾದೆಯನ್ನು ಹೇಳಿದಾಗ ಅದು ಹರಿತವಾಗಿರುತ್ತದೆ. ಇಂತಹ ಗಾದೆಗಳಲ್ಲಿ ಮಾಡಿದ್ದುಣ್ಣೋ ಮಹರಾಯ ಎಂಬುದು ಒಂದು ಜನಪ್ರಿಯ ಗಾದೆಯಾಗಿದೆ.

ತಪ್ಪು ಮಾಡಿದವನು ಶಿಕ್ಷೆ ಅನುಭವಿಸಲೇಬೇಕು ಎಂಬುದು ಈ ಗಾದೆಯ ಅರ್ಥ. ಅದೇ ರೀತಿ ಜೀವನಪರ್ಯಂತ ಒಳ್ಳೆಯದನ್ನು ಬಯಸಿದವನಿಗೂ ಒಳ್ಳೆಯದೆ ಆಗುತ್ತದೆ ನಾವು ಮಾಡುವ ಒಳಿತು ಕೆಡಕುಗಳು ಅದರ ಫಲವನ್ನು ನಿರ್ಧರಿಸುತ್ತವೆ. ನಾವು ಮಾಡಿದ ಊಟವನ್ನು ನಾವೇ ಉಣಬೇಕು ಹಾಗೆಯೇ ನಾವು ಮಾಡುವ ಪಾಪ ಪುಣ್ಯಗಳು ಕರ್ಮ ಫಲವನ್ನು ನಾವೇ ಅನುಭವಿಸಬೇಕು ಎಂಬುದನ್ನು ಈ ಗಾದೆ ತಿಳಿಸುತ್ತದೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5x3=15**

29. **'ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆ'**

ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವ್ಯಕ್ತಿತ್ವ' ಎಂಬ ಪುಸ್ತಕದ 'ಅಸಿ-ಮಸಿ-ಕೃಷಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ. ರೈತರು ಎಷ್ಟೇ ಕಷ್ಟವನ್ನು ಅನುಭವಿಸಿದರೂ ಭೂಮಿತಾಯಿಯ ಮೇಲೆ ಇಟ್ಟಿರುವ ನಂಬಿಕೆಯಿಂದ ಉಳುಮೆಯನ್ನು ಮಾಡುತ್ತಿದ್ದಾರೆ. ಕೆಲವೊಮ್ಮೆ ಅತಿವೃಷ್ಟಿ, ಅನಾವೃಷ್ಟಿ, ಕಳಪೆ ಬೀಜಗಳು, ರಸಗೊಬ್ಬರದ ಕೊರತೆ, ಭೂಮಿ ಬರಡಾಗುತ್ತಿರುವುದು, ಬೆಳೆದ ಬೆಳೆಗೆ ಉತ್ತಮ ಬೆಲೆ ಸಿಗದೆ ಇರುವುದು ಮುಂತಾದ

ಸಮಸ್ಯೆಗಳನ್ನು ಎದುರಿಸುತ್ತಿದ್ದರೂ ರೈತರು ನಿರಾಶಾವಾದಿಗಳಾಗದೆ ಆಶಾವಾದಿಗಳಾಗಿ ಬಾಳನ್ನು ಸಾಗಿಸುತ್ತಿದ್ದಾರೆಂದು ಲೇಖಕರು ಹೇಳಿದ್ದಾರೆ.

30. **'ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ'**

ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಯವರು ಬರೆದ 'ಜೀವಜಾಲ' ಪುಸ್ತಕದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಪಾಠದಿಂದ ಆರಿಸಲಾಗುದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ. ವಿಕಾಸ ಪ್ರಕ್ರಿಯೆಯಲ್ಲಿ ಮೀನು, ಕಪ್ಪೆ, ಸರಿಸೃಪಗಳು ಅಸಂಖ್ಯಾತ ಮೊಟ್ಟೆಗಳನ್ನಿಟ್ಟರೂ ಅವುಗಳಲ್ಲಿ ಅನೇಕ ಮೊಟ್ಟೆಗಲು ನಾಶವಾಗುತ್ತವೆ ಎಂದು ಹೇಳುವಾಗ ಲೇಖಕರು "ಅವಕಾಶ ಮತ್ತು ಅದೃಷ್ಟಕ್ಕೆ ತಮ್ಮ ಸಂತತಿಯ ಉಳಿವನ್ನು ಒಡ್ಡುತ್ತವೆ" ಎಂದು ಹೇಳುತ್ತಾರೆ.

31. **'ಈ ಮೇಣದ ಬೊಂಬೆಗಳು ತದ್ರೂಪ ವ್ಯಕ್ತಿಯನ್ನೇ ಹೋಲುತ್ತವೆ'**

ಈ ವಾಕ್ಯವನ್ನು ಕೆ. ಸಿದ್ದಯ್ಯ ಸ್ವಾಮಿ ಮತ್ತು ಬಸವಪ್ರಭು ಪಾಟೀಲ ರವರು ಬರೆದಿರುವ 'ಯೂರೋಪಿನಲ್ಲಿ' ಎಂಬ ಪುಸ್ತಕದ 'ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂ' ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ. ಲಂಡನ್ನಿನ ಟುಸ್ಸೋಡ್ ವ್ಯಾಕ್ಸ್ ಮ್ಯೂಸಿಯಂನಲ್ಲಿರುವ ಮೇಣದ ಗೊಂಬೆಗಳನ್ನು ಮೊದಲು ಮಾಡಿದವರು ಮೇಡಂ ಟುಸ್ಸೋಡ್‌ರವರು ಈ ಮೇಣದ ಗೊಂಬೆಗಳು ತದ್ರೂಪ ವ್ಯಕ್ತಿಯನ್ನೇ ಹೋಲುತ್ತವೆ ಯಾವ ವ್ಯಕ್ತಿಯನ್ನು ಮೇಣದಲ್ಲಿ ಮಾಡಿರುತ್ತಾರೊ ಅವರನ್ನು. ವಿಶ್ವಪ್ರಸಿದ್ಧ ವ್ಯಕ್ತಿಗಳ ಪ್ರತಿಮೆಯನ್ನು ಅಲ್ಲಿ ಇಡಲಾಗಿದೆ ಆ ಗೊಂಬೆಗಳ ಪಕ್ಕದಲ್ಲಿ ನಿಂತು ಪೋಟೋ ತೆಗೆಸಿಕೊಂಡರೆ ನಿಜವಾದ ವ್ಯಕ್ತಿಯೊಂದಿಗೆ ಇದ್ದೆವೊ ಎನಿಸುತ್ತದೆ ಎಂದು ಲೇಖಕರು ಹೇಳಿದ್ದಾರೆ.

**32. 'ಕಬ್ಬಕ್ಕಿ ಬಾಯ ಬಿಡುತ್ತಾವೆ'**

ಈ ವಾಕ್ಯವನ್ನು ಜನಪದ ಗೀತೆ 'ಮೂಡಲ್ ಕುಣಿಗಲ್' ಕೆರೆ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಕುಣಿಗಲ್ ಕೆರೆಯನ್ನು ತುಂಬ ಸುಂದರವಾಗಿ ಕಟ್ಟಲಾಗಿದೆ. ನಿಂಬೆಯ ಹಣ್ಣಿನಂತೆ ತುಂಬಿರುವ ಈ ಕುಣಿಗಲ್ ಕೆರೆಯನ್ನು ನೋಡಲು ಶಿವನೇ ಬಂದಿದ್ದಾನೆ ಶಿವನನ್ನು ನೋಡಲು ಜಲಚರಗಳು ಮೇಲೆದ್ದಾಗ ಅಲ್ಲಿರುವ ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳು ಬಾಯಿ ಬಿಡುತ್ತಿದ್ದವು ಎಂದು ಜನಪದರು ವರ್ಣಿಸಿದ್ಧಾರೆ.

33. **'ನೆಲಮುಗಿಲ ವಾಲಗವೇ ನಡೆದಂತಿದೆ'**

ಈ ಪ್ರಸ್ತುತ ವಾಕ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಪುಸ್ತಕದ ಸವಿಚೈತ್ರ ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಗಳು ಹೇಳಿದ್ದಾರೆ. ಚೈತ್ರ ಮಾಸದಲ್ಲಿ ಪ್ರಕೃತಿಯು ಹಸಿರಿನಿಂದ ಕಂಗೊಳಿಸುತ್ತದೆ, ಆ ಸೌಂದರ್ಯವನ್ನು ಕಂಡು ಹಕ್ಕಿಗಳು ಮಧುರವಾಗಿ ಹಾಡುತ್ತವೆ. ಹಕ್ಕಿಗಳ ಹಾಡಿನ ಕಲರವವು ಆಕಾಶದಲ್ಲಿ ಪ್ರತಿಧ್ವನಿಸುತ್ತದೆ. ಇದರಿಂದಾಗಿ ನೆಲ ಮುಗಿಲ ನಡುವೆ ವಾಲಗ ನಡೆದಂತೆ ಭಾಸವಾಗುತ್ತದೆ ಎಂದು ಕವಿ ವರ್ಣಿಸಿದ್ದಾರೆ.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಏಕಾಂಗಿ ವೀರನಂತೆ ವೀರನಂತೆ ಮಧ್ಯರಾತ್ರಿ ಎದ್ದನು
ಮಡದಿ ಮಗುವ ತೊರೆದನವನು ಅಡವಿ ದಾರಿ ಹಿಡಿದನು
ಅರಮನೆಯ ಮೋಹವನ್ನು ಹರಿದು ಹಾಕಿ ಹೋದನು
ಗೊತ್ತು ಗುರಿಯು ಇಲ್ಲದಂತೆ ಕತ್ತಲಲ್ಲಿ ನಡೆದನು.

ಅಥವಾ

ಕಾಡು ಕಾಡು ಅಲೆದ ಅವಗೆ ನಾಡಿನರ್ಥ ಹೊಳೆಯಿತು
ಕೋಗಿಲೆಯ ಹಾಡದೊಂದು ದೂರದಿಂದ ಕೇಳಿತು
ಬೆಳ್ಳಿಚುಕ್ಕಿ ಬಾನಿನಲ್ಲಿ ಆಗತಾನೆ ಮೂಡಿತು
ಬೋಧಿವೃಕ್ಷದಲ್ಲಿ ಮಹಾಬೆಳಕೊಂದು ಕಂಡಿತು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4**

**35. 'ಸದ್ದು ಮಾಡದಿರು' ಕವಿತೆಯು ನೀಡುವ ಸಂದೇಶವನ್ನು ನೀವು ಮೆಚ್ಚುವ ಅಂಶಗಳೊಡನೆ ವಿವರಿಸಿ.**

ಆಡಂಭರ, ಪ್ರದರ್ಶನ ಇವುಗಳಿಗೆ ಜನ ಮನಸೋಲುವುದು ಸಾಮಾನ್ಯ ಹಣ, ಅಂತಸ್ತು, ಕೀರ್ತಿಯನ್ನು ಪಡೆಯುವುದೇ ಜೀವನದ ಪರಮ ಗುರಿಯೆಂದು ಕೆಲ ಜನರು ಭಾವಿಸಿದ್ದಾರೆ. ಆದರೆ ನಮ್ಮೆಲ್ಲರಿಗೂ ಆಧಾರವಾಗಿರುವ ಈ ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲಿರುತ್ತದೆ. ಆಕಾಶದಲ್ಲಿ ನಕ್ಷತ್ರಗಳು ಮಿನುಗುತ್ತಿರುವುದು, ಕಾಮನಬಿಲ್ಲು ಗೋಚರವಾಗುವುದು, ಪುಷ್ಪವು ಅರಳಿ ಪರಿಮಳ ಸೂಸುವುದು, ಕಾಯಿಗಳು ಮಾಗಿ ರಸಭರಿತ ಹಣ್ಣು ಆಗುವುದು ಇಂತಹ ನೂರಾರು ಅದ್ಭುತ ರಮ್ಯಗಳು ಪ್ರಕೃತಿಯಲ್ಲಿ ನಿತ್ಯ ನಿರಂತರವಾಗಿರುತ್ತವೆ. ಅವು ಎಂದಿಗೂ ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡಿದ್ದಿಲ್ಲ. ಆದರೆ ಮಾನವ ಸಣ್ಣ ಕೆಲಸವನ್ನೂ ದೊಡ್ಡದಾಗಿ ತನ್ನಿಂದಲೇ ಸಾಧ್ಯವಾಗಿದ್ದು ಎಂದು ಪ್ರಚಾರ ಮಾಡಿಕೊಳ್ಳುತ್ತಾನೆ. ಹೀಗಾಗಿ ಮಾನವ ತನ್ನ ಅಹಂ ತೊರೆದು ಶಾಂತಿ, ಸಹನೆ, ಪ್ರೀತಿಗಳಿಂದ ಕರ್ತವ್ಯವನ್ನು ಮೌನವಾಗಿ ಮಾಡಿ ಮುಗಿಸಬೇಕು ಎಂಬ ಸಂದೇಶ ಇಲ್ಲಿದೆ.

**ಅಥವಾ**

**'ಸದ್ದು ಮಾಡದಿರು' ಪದ್ಯದಲ್ಲಿರುವ ಮಾನವೀಯ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ವಿವರಿಸಿ.**

ಸದ್ದು ಮಾಡದಿರು ಕವಿತೆಯಲ್ಲಿ ಮಾನವೀಯ ಮೌಲ್ಯಗಳನ್ನು ಗಮನಿಸುವುದಾದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ಯಾವುದೇ ಸದ್ದುಗದ್ದಲವಿಲ್ಲದೆ ತನ್ನೆಲ್ಲಾ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುತ್ತಲೇ ಇದೆ. ಆದರೆ ಮಾನವ ಮಾತ್ರ ತನ್ನಲ್ಲಿರುವ ಅಹಂನಿಂದ ಪ್ರಕೃತಿಯನ್ನು ತನ್ನ ಸದ್ದುಗದ್ದಲದ ಮೂಲಕ ವಿನಾಶದತ್ತ ಕೊಂಡೊಯ್ಯುತ್ತಿದ್ದಾನೆ. ಮನುಷ್ಯರಾದ ನಾವು ಪ್ರಕೃತಿಯನ್ನು ನೋಡಿ ಕಲಿಯಬೇಕು, ಶಾಂತಿ, ಸಹನೆ, ಪ್ರೀತಿಗಳಿಂದ ನಮ್ಮ ಕರ್ತವ್ಯಗಳನ್ನು ಮೌನವಾಗಿ ಮಾಡಿ ಮುಗಿಸಬೇಕು. ದೀಪದಂತೆ ಬೆಳಗಬೇಕು ಇಬ್ಬನಿಯಂತೆ ಮೌನಿಯಾಗಿ ಬಾಳಬೇಕು. ಶಾಂತಿಯಿಂದ ಜೀವನ ನಡೆಸಿದಾಗ ಬದುಕು ಸುಖಮಯವಾಗುತ್ತದೆ. ಕೂಗಾಡಿ ಹಾರಾಡಿ ಫಲವಿಲ್ಲವೆಂದು ಹೇಳುವ ಮೂಲಕ ಈ ಪ್ರಕೃತಿಯನ್ನು ಕಾಪಾಡಬೇಕು ಎಂದು ಕವಿ ಹೇಳುತ್ತಾರೆ. ಈ ಮೂಲಕ ಮಾನವೀಯ ಮೌಲ್ಯಗಳನ್ನು ತಿಳಿಸಿದ್ದಾರೆ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ನಮಸ್ತೇ ಎನ್ನುತ್ತೇವೆ. ನಮಸ್ಕಾರ ಎನ್ನುತ್ತೇವೆ. ಆ ರೀತಿ ಹೇಳಿದಾಗ ಎರಡು ಅಂಗೈಗಳನ್ನು ಜೋಡಿಸಿ ಮೇಲೆ ಎತ್ತುತ್ತೇವೆ. ಆ ರೀತಿ ಎತ್ತಿದ್ದರ ಜೊತೆಗೆ ತಲೆಯನ್ನು ಬಾಗಿಸುತ್ತೇವೆ. ಈ ರೀತಿಯ ನಮಸ್ಕಾರ ಮಾಡುವುದರ ಅರ್ಥವಿಶೇಷತೆ ಏನೆಂದರೆ ನಾವೆಲ್ಲಾ ಆತ್ಮ ಸ್ವರೂಪರು ಆದ್ದರಿಂದ ನಾವೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ. ಈ ಅಡ್ಡಿಯನ್ನು ಆಗಿಂದಾಗ್ಗೆ ಪಕ್ಕಕ್ಕೆ ತಳ್ಳುವುದೇ ಈ ನಮಸ್ಕಾರ ವಿಧಿಯ ಉದ್ದೇಶ. ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಅದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ. ಈ ರೀತಿಯ ಜೀವನವನ್ನು ರೂಢಿಸಿಕೊಂಡು ನಮ್ಮ ವ್ಯಕ್ತಿತ್ವವನ್ನು ಇನ್ನಷ್ಟು ಸದೃಢವಾಗಿ ರೂಪಿಸಿಕೊಳ್ಳೋಣ. ನಮ್ಮ ಆತ್ಮೋದ್ಧಾರ ನಮ್ಮ ಕೈಯಲ್ಲೇ ಇದೆ.

**36. ಅ) ಆತ್ಮದ ನಿಜವಾದ ಸ್ವರೂಪವನ್ನು ಹೇಗೆ ವಿವರಿಸಬಹುದು?**

ನಾವೆಲ್ಲಾ ಆತ್ಮಸ್ವರೂಪರು ಆದ್ದರಿಂದ ನಾವೆಲ್ಲ ಅಣ್ಣ–ತಮ್ಮಂದಿರು, ಅಕ್ಕ–ತಂಗಿಯರು, ಆದ ಕಾರಣ ಪರಸ್ಪರವಾಗಿ ಪ್ರೇಮವನ್ನು ಕೊಟ್ಟು ಪಡೆದು ಬದುಕಬೇಕಾಗಿದೆ. ಏಕೆಂದರೆ ನಾವೆಲ್ಲ ಪ್ರೇಮ ಸ್ವರೂಪರು. ಪ್ರೇಮ ಆತ್ಮದ ನಿಜವಾದ ಸ್ವರೂಪವಾಗಿದೆ. ನಾವು ಪಡೆದಿರುವ ಬೇರೆ ಬೇರೆ ದೇಹಗಳು ಆತ್ಮದ ನಿಜವಾದ ಸ್ವರೂಪವನ್ನು ಅರಿಯಲು ಅಡ್ಡಿಯಾಗಿವೆ.

**ಆ) ನಮಸ್ಕಾರದ ಅರ್ಥವಿಶೇಷತೆಯೇನು?**

ನಾವು ಎರಡು ಕೈ ಜೋಡಿಸಿ ಮಾಡುವ ನಮಸ್ಕಾರದ ಅರ್ಥ ಒಂದು ಕೈ ನಾವು, ಇನ್ನೊಂದು ಕೈ ನಾವು ಯಾರಿಗೆ ನಮಸ್ಕಾರ ಹೇಳುತ್ತೇವೆಯೋ ಅವರು ನಮಸ್ಕಾರ ಮಾಡಿದಾಗ ನಮಗೂ ಅವರಿಗೂ ಅದು ನೆನಪಾಗುತ್ತದೆ. ನೆನಪಾಗಬೇಕು. ಎರಡು ಕೈ ಸೇರಿದರೆ ಚಪ್ಪಾಳೆಯಂತೆ. ಆದರೆ ನಮ್ಮ ನಮಸ್ಕಾರ ಚಪ್ಪಾಳೆಯಲ್ಲ. ಜೋಡಿಸಿದ ಕೈಯನ್ನು ಎತ್ತುವುದು 'ಆತ್ಮೋದ್ಧಾರ' ಎಂದು ನಾವು ತಿಳಿಯಬೇಕಾಗಿದೆ. ಗುರು ಹಿರಿಯರನ್ನು ಕಂಡಾಗ ಗೌರವದಿಂದ ತಲೆಬಾಗಿ ನಮಸ್ಕರಿಸುವುದು ನಮ್ಮ ಸಂಸ್ಕೃತಿಯ ಪ್ರತೀಕ, ಆತ್ಮೋದ್ಧಾರದ ಮಾರ್ಗ. ಜೀವನದಲ್ಲಿ ರೂಢಿಸಿಕೊಳ್ಳಬೇಕಾದ ಒಂದು ಮೌಲ್ಯ.

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಗ್ರಂಥಾಲಯದ ಮಹತ್ವ

**ಪೀಠಿಕೆ:** ವಿದ್ಯೆ ಎಂಬ ಸಾಗರದಲ್ಲಿ ಮುತ್ತುಗಳಂತೆ ಇರುವುದೇ ಗ್ರಂಥಾಲಯ. ಅನೇಕ ಪುಸ್ತಕಗಳನ್ನು ಒಂದೆಡೆ ಸಂಗ್ರಹಿಸಿ ಸ್ಥಳವೇ ಗ್ರಂಥಾಲಯ. ಮಾನವನ ದೇಹಕ್ಕೆ ಗಾಳಿ, ನೀರು, ಆಹಾರಗಳು ಅಗತ್ಯವಾಗಿರುವಂತೆ ನಮ್ಮ ಮನಸ್ಸೆಂಬ ಯಂತ್ರಕ್ಕೆ ಜ್ಞಾನ ಬೇಕೇ ಬೇಕು.

**ವಿಷಯ ನಿರೂಪಣೆ:** ಗ್ರಂಥಾಲಯದಲ್ಲಿ ಸಾರ್ವಜನಿಕ ಗ್ರಂಥಾಲಯ, ಶೈಕ್ಷಣಿಕ ಗ್ರಂಥಾಲಯ, ಸಂಚಾರಿ ಗ್ರಂಥಾಲಯ ಮೊದಲಾದ ವಿಧಗಳಿವೆ. ಜನಸಾಮಾನ್ಯರ ಓದಿನ ಅಭಿರುಚಿ ತಕ್ಕಂತೆ ಪುಸ್ತಕಗಳನ್ನು ಒದಗಿಸುವುದೇ ಸಾರ್ವಜನಿಕ ಗ್ರಂಥಾಲಯ. ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿಯೊಂದಿಗೆ ಪುಸ್ತಕಗಳನ್ನು ನೀಡುವುದೇ ಶೈಕ್ಷಣಿಕ ಗ್ರಂಥಾಲಯ. ವಾಹನಗಳ ಮೂಲಕ ಜನರಿಗೆ ಪುಸ್ತಕಗಳನ್ನು ಒದಗಿಸುವ ಗ್ರಂಥಾಲಯಗಳೇ ಸಂಚಾರಿ ಗ್ರಂಥಾಲಯ. ಇಂದು ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಗ್ರಂಥಾಲಯಗಳನ್ನು ಕಾಣಬಹುದು. ಇವು ಎಲ್ಲರಿಗೂ ಉಚಿತವಾಗಿ ಓದುವ ಅವಕಾಶವನ್ನು ಒದಗಿಸಿವೆ. ಜನರಿಗೆ ಜ್ಞಾನವನ್ನು ಹಂಚುತ್ತವೆ. ಶಾಲಾ ಕಾಲೇಜುಗಳಲ್ಲಿ ಮಕ್ಕಳ, ಶಿಕ್ಷಕರ ಪಾಲಿಗೆ ಹಣತೆಯಂತಿದೆ. ಇಲ್ಲಿ ವಿಜ್ಞಾನ, ಇತಿಹಾಸ, ಸಾಹಿತ್ಯ, ಧರ್ಮ, ಕ್ರೀಡೆ, ಸಂಸ್ಕೃತಿ, ಕಾನೂನು ಮೊದಲಾದ ವಿಷಯಗಳ ಪುಸ್ತಕಗಳಿರುತ್ತವೆ. ಜೊತೆಗೆ ದಿನಪತ್ರಿಕೆಗಳು ಇರುತ್ತವೆ.

**ಉಪಸಂಹಾರ :** ಗ್ರಂಥಾಲಯಗಳಿಲ್ಲದ ಶಾಲೆಗಳು ದೇವರಿಲ್ಲದ ಗುಡಿಯಂತಿರುತ್ತವೆ. ಈ ಮಾತು ಅಕ್ಷರ ಸಹ ಸತ್ಯವೆಂಬುದನ್ನು ನಾವೆಲ್ಲರೂ ಒಪ್ಪಲೇಬೇಕು. ಅವು ಸಿಹಿನೀರಿನ ಸರೋವರಗಳಂತಿವೆ ಎಂಬುದರಲ್ಲಿ ಎರಡು ಮಾತಿಲ್ಲ.

**ಅಥವಾ**

**ಪರಿಸರ ಸಂರಕ್ಷಣೆ**

ನಮ್ಮ ಸುತ್ತ ಮುತ್ತಇರುವ ಬೆಟ್ಟ ಗುಡ್ಡಗಳು ಮರಗಿಡಗಳು ನಾವಿರುವ ಭೂಮಿ, ಸಾಗರ–ಸರೋವರಗಳು, ಹಳ್ಳಕೊಳ್ಳಗಳು, ಪಶು ಪಕ್ಷಿಗಳು, ಅರಣ್ಯ, ಗಾಳಿ ಇವೆಲ್ಲವೂ ಸೇರಿ ಪರಿಸರವೆನಿಸಿದೆ.
ಪರಿಸರವನ್ನು ಪ್ರಾಕೃತಿಕ ಪರಿಸರ ಮತ್ತು ಮಾನವ ನಿರ್ಮಿತ ಪರಿಸರವೆಂದು ವಿಭಾಗಮಾಡುತ್ತೇವೆ.

ನದಿ, ಅರಣ್ಯ, ಬೆಟ್ಟ ಇವುಗಳು ಪ್ರಾಕೃತಿಕ ಪರಿಸರಕ್ಕೆ ಉದಾಹರಣೆಯಾದರೆ ನಗರಗಳು, ಅಣೆಕಟ್ಟೆ, ರಸ್ತೆಗಳು ಮಾನವ ನಿರ್ಮಿತ ಪರಿಸರಕ್ಕೆ ಉದಾಹರಣೆಯಾಗಿವೆ.

'ಮಾನವ ಪರಿಸರದ ಶಿಶು ಆದ್ದರಿಂದ ಪರಿಸರವನ್ನು ಬಿಟ್ಟು ಬದುಕಲಾರ. ಆದರೆಇಂದು ಅವನ ಸ್ವಾರ್ಥಸುಖಕ್ಕಾಗಿ ಪರಿಸರವನ್ನು ನಾಶ ಮಾಡುತ್ತಿದ್ದಾನೆ. ಇದರಿಂದ ಅನೇಕ ಸಮಸ್ಯೆಗಳು ಉಂಟಾಗುತ್ತಿವೆ. ಉದಾಹಾರಣೆಗೆ ಅತಿವೃಷ್ಟಿ ಅನಾವೃಷ್ಟಿ ಬರಗಾಲ, ಸುನಾಮಿ, ಪ್ರವಾಹ ಮುಂತಾದವುಗಳು.

ಸರಿಯಾದ ಸಮಾಯಕ್ಕೆ ಮಳೆ ಬಾರದೆ, ರೈತರು ಸಮಸ್ಯೆಗೆ ಒಳಗಾಗುತ್ತಿದ್ದಾರೆ ಹವಾಮಾನ ವೈಪರಿತ್ಯದಿಂದಾಗಿ ತಾಪಮಾನ ಹೆಚ್ಚಾಗುತ್ತಿದೆ. ಹಿಮಕರಗಿ ಸಮುದ್ರ ಮಟ್ಟ ಹೆಚ್ಚಾಗಿ ಕಡಲ್ಕೊರೆತ ಸುನಾಮಿ, ಭೂಕಂಪಗಳು ಸಂಭವಿಸುತ್ತವೆ. ಆದುದರಿಂದ ನಾವುಗಳು ಮುಂದಿನ ಸುಖ ಜೀವನಕ್ಕಾಗಿ ಪರಿಸರವನ್ನು ರಕ್ಷಿಸಬೇಕು, ಸರ್ಕಾರಗಳು ಈ ನಿಟ್ಟಿನಲ್ಲಿ ಕ್ರಮಕೈಗೊಂಡು ಕಾರ್ಯರೂಪಕ್ಕೆ ತಂದು ಮುಂದಿನ ಪೀಳಿಗೆಗೆ ನೆರವಾಗಬೇಕಿದೆ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

**38. ನಿಮ್ಮನ್ನು ಹೊಸಕೋಟೆ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ವೆಂಕಟ್' ಎಂದು ಭಾವಿಸಿಕೊಂಡು ನಿಮ್ಮ ನಗರದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ ಗ್ರಂಥಾಲಯ ಇಲಾಖೆಯ ಉಪನಿರ್ದೇಶಕರಿಗೆ ಒಂದು ಮನವಿ ಪತ್ರ ಬರೆಯಿರಿ.**

**ಇವರಿಂದ** **ದಿನಾಂಕ : 01–01–2024**

ವೆಂಕಟ್

ಸರ್ಕಾರಿ ಪ್ರೌಢಶಾಲೆ

ಹೊಸಕೋಟೆ

**ಇವರಿಗೆ**

ಉಪನಿರ್ದೇಶಕರು

ಗ್ರಂಥಾಲಯ ಇಲಾಖೆ

ಹೊಸಕೋಟೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮಾನ್ಯರೇ,

**ವಿಷಯ : ನಗರದಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸುವಂತೆ ಕೋರಿ.**

ಈ ಮೇಲ್ಕಂಡ ವಿಷಯಕ್ಕೆ ಸಂಭಂದಿಸಿದಂತೆ ನಮ್ಮ ನಗರದಲ್ಲಿ ಸಾವಿರಾರು ವಿದ್ಯಾರ್ಥಿಗಳು ಹಾಗೂ ಹಿರಿಯ ನಾಗರೀಕರು ಪ್ರಚಲಿತ ವಿದ್ಯಾಮಾನಗಳು ಹಾಗೂ ರಾಷ್ಟ್ರೀಯ ಅಂತರರಾಷ್ಟ್ರೀಯ ವಿಚಾರಗಳನ್ನು ತಿಳಿದುಕೊಳ್ಳಲು ಬಹಳ ಉತ್ಸುಕರಾಗಿದ್ದು ಹಾಗೂ ಸಾವಿರಾರು ವಿದ್ಯಾರ್ಥಿಗಳಿಗೆ ಪುಸ್ತಕಗಳ ಕೊರತೆಯಿದ್ದು, ದಿನಪತ್ರಿಕೆ ಹಾಗೂ ಇನ್ನಿತರ ಪುಸ್ತಕಗಳನ್ನು ಓದಲು ಉತ್ಸುಕರಾಗಿದ್ದಾರೆ. ಆದರೆ ಅದಕ್ಕೆ ಗ್ರಂಥಾಲಯದ ಕೊರತೆಯಿದೆ, ತಾವುಗಳು ದಯಮಾಡಿ ನಮ್ಮ ನಗರದಲ್ಲಿ ಒಂದು ಗ್ರಂಥಾಲಯವನ್ನು ಪ್ರಾರಂಭಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ

ಇಂತಿ ತಮ್ಮ ವಿಧೇಯ

ವೆಂಕಟ್

**ಅಥವಾ**

**<u>ನಿಮ್ಮನ್ನು ಚಿತ್ರದುರ್ಗದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ವಿಕ್ರಮ್' ಎಂದು ಭಾವಿಸಿಕೊಂಡು ನಿಮ್ಮ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮ ಆಚರಣೆಯ ಕುರಿತು ಬಳ್ಳಾರಿಯ ನಿಮ್ಮ ಸ್ನೇಹಿತೆ 'ಲಕ್ಷ್ಮಿ'ಗೆ ಒಂದು ಪತ್ರ ಬರೆಯಿರಿ.</u>**

**ಕ್ಷೇಮ** ಶ್ರೀ ದಿನಾಂಕ : 01–01–2024

ವಿಕ್ರಮ್
ಸರ್ಕಾರಿ ಪ್ರೌಢಶಾಲೆ
ಚಿತ್ರದುರ್ಗ

ಪ್ರೀತಿಯ ಸ್ನೇಹಿತೆ ಲಕ್ಷ್ಮಿಗೆ ವಿಕ್ರಮ್ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ, ನೀನು ಸಹ ಆರೋಗ್ಯವಾಗಿದ್ದೀಯ ಎಂದು ಭಾವಿಸುತ್ತೇನೆ. ಈ ಪತ್ರ ಬರೆದ ವಿಷಯವೇನೆಂದರೆ ನಮ್ಮ ಶಾಲೆಯಲ್ಲಿ ಈ ವರ್ಷ ಶಾಲಾ ವಾರ್ಷಿಕೋತ್ಸವವನ್ನು ಬಹಳ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮುಖ್ಯ ಅಥಿತಿಗಳಾಗಿ ಜಿಲ್ಲಾ ಶಿಕ್ಷಣಾಧಿಕಾರಿಗಳು ಆಗಮಿಸಿದ್ದರು ವಿದ್ಯಾರ್ಥಿಗಳೆಲ್ಲರೂ ಉನ್ನತ ಗುರಿಯೆಡೆಗೆ ಮುನ್ನಡೆಯಬೇಕು ಎಂದು ಹೇಳಿದರು. ವೇದಿಕೆ ಕಾರ್ಯಕ್ರಮ ಮುಗಿದ ಮೇಲೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ನಾನು ಸಹ ಜಾನಪದ ನೃತ್ಯವೊಂದಕ್ಕೆ ಹೆಜ್ಜೆ ಹಾಕಿದೆ, ವಿದ್ಯಾರ್ಥಿಗಳೆಲ್ಲರೂ ಉತ್ಸಾಹದಿಂದ ಕಾರ್ಯಕ್ರಮ ನಡೆಸಿಕೊಟ್ಟರು. ಸಾಹಿತಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಲಾಯಿತು, ಕನ್ನಡ ಶಿಕ್ಷಕರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ನಿಮ್ಮ ಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಕುರಿತು ಪತ್ರ ಬರೆದು ಕಳುಹಿಸು.

ಇಂತಿ ನಿನ್ನ ಸ್ನೇಹಿತ
ವಿಕ್ರಮ್

ರವರಿಗೆ
ಲಕ್ಷ್ಮಿ
ಸರ್ಕಾರಿ ಪ್ರೌಢಶಾಲೆ
ಬಳ್ಳಾರಿ

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80** | **ಮಾದರಿ ಪ್ರಶ್ನೆ ಪತ್ರಿಕೆ 2** | **ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. 'ಬಾಣವನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ.

ಎ) ಉ ಬಿ) ಅನ್ನು ಸಿ) ಇಂದ ಡಿ) ಗೆ

2. ಗುಣಸಂಧಿಗೆ ಉದಾಹರಣೆಯಾದ ಪದ.

ಎ) ಸರ್ವಾಧಿಕಾರಿ ಬಿ) ಬೆನ್ನೆಲುಬು ಸಿ) ಮೇಲೇರಿ ಡಿ) ವೀರೇಶ್ವರ

3. 'ತಂದಾನು' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.

ಎ) ಮೂರು ಬಿ) ನಾಲ್ಕು ಸಿ) ಆರು ಡಿ) ಐದು

4. 'ಕುಪ್ಪಳ್ಳಿ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ.

ಎ) ಸರ್ವನಾಮ ಬಿ) ರೂಢನಾಮ ಸಿ) ಅಂಕಿತನಾಮ ಡಿ) ಅನ್ವರ್ಥನಾಮ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12x1=12**

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?
6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?
7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?
8. ಗುರುಗಳು ಜೀವನವನ್ನು ಯಾವುದಕ್ಕೆ ಹೋಲಿಸಿದ್ದಾರೆ?
9. ಹೆಡ್ ಮಾಸ್ತರರು ಏಕೆ ಸಂತೋಷಗೊಂಡರು?
10. ಗೋಪಾಲನು ಶಾಲೆಯಿಂದ ಮರಳುವಾಗ ಏಕೆ ಭಯಪಡುತ್ತಿದ್ದನು?
11. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದರು?
12. ಸಿದ್ಧಾರ್ಥನು ಕಾಡಿನಿಂದ ನಾಡಿಗೆ ಹೊರಟಿದ್ದು ಏಕೆ?
13. ಜಗ ಖಗ ಪಕ್ಷಿ ಪ್ರಾಣಿಗಳು ಮೈಕೊಡವಿ ಎದ್ದು ಎಲ್ಲಿಗೆ ಹೊರಟಿವೆ?
14. ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ?
15. ಕುಣಿಗಲ್ ಕೆರೆಯು ಹೇಗೆ ಬಾಗಿದೆ?
16. ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಯಾವುದು?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ ಉಂಟಾಗುವ ಸಮಸ್ಯೆಗಳಾವುವು?
18. ಪುಟ್ಟರಾಜರಿಗೆ ಯಾವ ಯಾವ ಪ್ರಶಸ್ತಿಗಳು ದೊರೆತಿವೆ?
19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?
20. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ ?
21. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?
22. ಅಡಿಗರು ಯಾವುದನ್ನು ಹೇಡಿತನ ಹಾಗು ಹೆಣ್ತನ ಎಂದು ಕರೆದಿದ್ದಾರೆ?
23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ತಿಳಿಸಿ.
24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕೆಂದು ಕವಯಿತ್ರಿಯ ಆಶಯವಾಗಿದೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

25. ಸಿ.ಪಿ. ಕೃಷ್ಣಕುಮಾರ್

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

27. 'ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1x3=3**

28. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು

ಅಥವಾ

ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ
30. ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ
31. ಒಂದು ಜೀವನಕೇಕೆ ಹಲವು ಸಾಧ್ಯಗಳು
32. ಬಾವ ತಂದಾನೆ ಬಣ್ಣದ ಸೀರೆ
33. ನಾಡನರಿವೊಲು ಹಲುಗಿರಿಯ ಬಿಡುವೆನೆ

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ನೀರ ಕಂಡಲ್ಲಿ ______________________
______________________________
______________________________
____________________ಕೂಡಲಸಂಗಮದೇವ.

ಅಥವಾ

ಮರವಿದ್ದು ಫಲವೇನು ____________________
______________________________
______________________________
____________________ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಗಿಳಿಯ ವರ್ತನೆಯಲ್ಲಿ ನೀವು ಮೆಚ್ಚಿದ ಅಂಶಗಳನ್ನು ವರ್ಣಿಸಿ ಬರೆಯಿರಿ.

ಅಥವಾ

ಗಿಳಿ ಮತ್ತು ಇಂದ್ರನ ನಡುವಿನ ಸಂಭಾಷಣೆ ಸ್ವಾರಸ್ಯವನ್ನು ವರ್ಣಿಸಿ ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1x4=4(2+2)**

ಕಪಿಮಾನವನಿಗೆ ಚಿಂತನಶಕ್ತಿ ತುಂಬಾ ಕಡಿಮೆ. ಮೊದಲಲ್ಲಿ ಅವನಿಗೂ ಉಳಿದ ಪ್ರಾಣಿಗಳಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಪ್ರಕೃತಿಯ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವನಿಗಿರಲಿಲ್ಲ. ಒಂದು ವಿಧದಲ್ಲಿ ಅವನು ಸ್ಥಿತ ಪ್ರಜ್ಞ, ಹಸಿವಾದಾಗ ಬೇಟೆಯಾಡಿಕೊಂಡು, ಗೆಡ್ಡೆ ಗೆಣಸು ತಿಂದುಕೊಂಡು ಕಾಡುಮನುಷ್ಯನ ಹಾಗೆ ಬದುಕುತ್ತಿದ್ದನು. ಕಾಲಕ್ರಮೇಣ ಸ್ವಲ್ಪ ಕಣ್ಣುಬಿಟ್ಟು

ಸುತ್ತಮುತ್ತಣ ಚಟುವಟಿಕೆಗಳನ್ನು ಮನಸ್ಸಿಟ್ಟು ನೋಡಲು ಪ್ರಯತ್ನಪಟ್ಟನು. ಇಷ್ಟಾದರೂ ಪ್ರಕೃತಿಯ ಎಲ್ಲಾ ಕ್ರಿಯೆಗಳೂ ಸಹಜವೇ! ಕೈಯಿಂದ ಕಳಚಿಬಿದ್ದ ಕಲ್ಲು ಕೆಳಗೆ ಬೀಳಲೇಬೇಕು. ಮೇಲಕ್ಕೆ ಬಿಸಾಡಿದ ಕಲ್ಲಿನ ಅವಸ್ಥೆಯೂ ಅಷ್ಟೆ. ಏಕೆ?, ಹೇಗೆ? ಎನ್ನುವ ಪದಗಳು ಇನ್ನೂ ಹುಟ್ಟಿರಲಿಲ್ಲ. ಹುಟ್ಟಿದ ಮೇಲೂ ಇಂತಹ ಸಹಜ ಕ್ರಿಯೆಗಳಿಗೆ ಅವುಗಳ ಬಳಕೆ ತೀರಾ ಹಾಸ್ಯಾಸ್ಪದವಾಗಿದ್ದಿತು. ಈಗಲೂ ಸಂಪ್ರದಾಯವಾದಿಗಳಿಗೆ ಪ್ರಶ್ನೆ ಪತ್ರಿಕೆಗಳು ಅಷ್ಟಾಗಿ ಹಿಡಿಸುವುದಿಲ್ಲ.

ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸ ವಿವೇಚನೆ ಮತ್ತು ವಾಕ್ ಶಕ್ತಿ. ಉಳಿದ ಎಷ್ಟೋ ವಿಷಯಗಳಲ್ಲಿ ಮನುಷ್ಯ ಪ್ರಾಣಿಗಿಂತ ಕೀಳು. ಅನೇಕ ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿವೆ. ಆನೆಗೂ ಮನುಷ್ಯನಿಗೂ ಅಜಗಜಾಂತರ. ಜಿಂಕೆ ಕುದುರೆಗಳ ವೇಗವೆಲ್ಲಿಂದ ಬಂದೀತು ಮನುಷ್ಯನಿಗೆ. ಕೃತಜ್ಞತೆ ನಾಯಿಗೆ ಸಹಜ. ಕೃತಜ್ಞತೆಯ ಮೇಲೆ ಪುಂಖಾನುಪುಂಖವಾಗಿ ಭಾಷಣ ಮಾಡುವವನೂ ಕೂಡ ಈ ವಿಷಯದಲ್ಲಿ ನಾಯಿಗೆ ಸಮನಾಗುತ್ತಾನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕತ್ತೆಗಿರುವ ತಾಳ್ಮೆ ಮನುಷ್ಯನಿಗಿಲ್ಲ. ಹೀಗೆ ಮನುಷ್ಯ ಎಷ್ಟೋ ವಿಷಯಗಳಲ್ಲಿ ಯಃಕಶ್ಚಿತ್ ಜಂತು. ಆದಾಗ್ಯೂ ತನ್ನ ವಿಚಾರ ಶಕ್ತಿಯಿಂದ ಸರ್ವಶ್ರೇಷ್ಠ ಪ್ರಾಣಿಯಾಗಿದ್ದಾನೆ.

36. ಅ) ಕಪಿ ಮಾನವನ ವರ್ತನೆಗಳು ಹೇಗಿದ್ದವು?
    ಆ) ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿದ್ದವು ಹೇಗೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಸಮೂಹ ಮಾಧ್ಯಮದಲ್ಲಿ ದೂರದರ್ಶನದ ಪಾತ್ರ

ಅಥವಾ

ಸಾಂಕ್ರಾಮಿಕ ರೋಗ/ಕೊರೋನ (ಕೋವಿಡ್–19)

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಶಿವಮೊಗ್ಗ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ರವಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥಾಪಕರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ಪ್ರಣವ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ವಿಶ್ವಪರಿಸರ ದಿನಾಚರಣೆಯನ್ನು ಕುರಿತು ಮಂಗಳೂರಿನ ಕೀರ್ತಿ ಎಂಬ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.

**************

**ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ**

**ವಿಷಯ : 33K ದ್ವಿತೀಯ ಭಾಷೆ – ಕನ್ನಡ**

**ಗರಿಷ್ಠ ಅಂಕಗಳು : 80** **ಮಾದರಿ ಪ್ರಶ್ನೋತ್ತರ ಪತ್ರಿಕೆ 2** **ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

**1. 'ಬಾಣವನ್ನು' ಪದದಲ್ಲಿರುವ ವಿಭಕ್ತಿ ಪ್ರತ್ಯಯ.**

ಎ) ಉ ಬಿ) **ಅನ್ನು** ಸಿ) ಇಂದ ಡಿ) ಗೆ

**2. ಗುಣಸಂಧಿಗೆ ಉದಾಹರಣೆಯಾದ ಪದ.**

ಎ) ಸರ್ವಾಧಿಕಾರಿ ಬಿ) ಬೆನ್ನೆಲುಬು ಸಿ) ಮೇಲೇರಿ **ಡಿ) ವೀರೇಶ್ವರ**

**3. ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳು ಸಂಖ್ಯೆ.**

ಎ) ಮೂರು ಬಿ) ನಾಲ್ಕು ಸಿ) ಆರು **ಡಿ) ಐದು**

**4. 'ಕುಪ್ಪಳ್ಳಿ' ಪದವು ನಾಮಪದದ ಈ ಪ್ರಕಾರಕ್ಕೆ ಸೇರಿದೆ.**

ಎ) ಸರ್ವನಾಮ ಬಿ) ರೂಢನಾಮ **ಸಿ) ಅಂಕಿತನಾಮ** ಡಿ) ಅನ್ವರ್ಥನಾಮ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12x1=12**

**5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?**

ಗಿಳಿಗೆ ವರವನ್ನು ಕೊಡುವ ಮೂಲಕ ಇಂದ್ರನು ತನಗಾದ ಸಂತೋಷವನ್ನು ಪ್ರಕಟಿಸಿದನು.

**6. ಪುಟ್ಟರಾಜರು ಯಾವ ಯಾವ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು?**

ಪುಟ್ಟರಾಜರು ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಪಾಂಡಿತ್ಯಗಳಿಸಿದ್ದರು.

**7. ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?**

ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ ಬೇಟೆಗಳ ಸಂಬಂಧಗಳು ಇವು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳು.

**8. ಗುರುಗಳು ಜೀವನವನ್ನು ಯಾವುದಕ್ಕೆ ಹೋಲಿಸಿದ್ದಾರೆ?**

ಗುರುಗಳು ಜೀವನವನ್ನು ಕಾಫಿಗೆ ಹೋಲಿಸಿದ್ದಾರೆ.

**9. ಹೆಡ್ ಮಾಸ್ತರರು ಏಕೆ ಸಂತೋಷಗೊಂಡರು?**

ಮನೆಗೆ ಬಂದ ಹಳೆಯ ವಿದ್ಯಾರ್ಥಿಗಳನ್ನು ಕಂಡು ಹೆಡ್ ಮಾಸ್ತರರು ಸಂತೋಷಗೊಂಡರು.

**10. ಗೋಪಾಲನು ಶಾಲೆಯಿಂದ ಮರಳುವಾಗ ಏಕೆ ಭಯಪಡುತ್ತಿದ್ದನು?**

ಗೋಪಾಲನು ಶಾಲೆಯಿಂದ ಮನೆಗೆ ಮರಳುವಾಗ ಕಾಡಿನ ದಾರಿಯಲ್ಲಿ ಬರಬೇಕಿತ್ತು, ಆದುದರಿಂದ ಗೋಪಾಲನು ಭಯಪಡುತ್ತಿದ್ದನು.

**11. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದರು?**

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗಜಂಗಮ' ಎಂದು ಖ್ಯಾತರಾಗಿದ್ದರು.

**12. ಸಿದ್ಧಾರ್ಥನು ಕಾಡಿನಿಂದ ನಾಡಿಗೆ ಹೊರಟಿದ್ದು ಏಕೆ?**

ಸಿದ್ಧಾರ್ಥನು ಕಾಡಿನಿಂದ ನಾಡಿನತ್ತ ಪ್ರೀತಿಯನ್ನು ಹುಡುಕಿಕೊಂಡು ಹೊರಟನು.

**13. ಜಗ ಖಗ ಪಕ್ಷಿ ಪ್ರಾಣಿಗಳು ಮೈಕೊಡವಿ ಎದ್ದು ಎಲ್ಲಿಗೆ ಹೊರಟಿವೆ?**

ಜಗ ಖಗ ಪಕ್ಷಿ ಪ್ರಾಣಿಗಳು ಮೈಕೊಡವಿ ಎದ್ದು ಹೊರಟಿದ್ದು ದಗದಕ್ಕೆ(ಕೆಲಸ) ಹೊರಟಿವೆ.

**14. ಮನಸ್ಸು ಯಾವಾಗ ನೆಲೆಯಿರದೆ ತೊಳಲುತ್ತದೆ?**

ಮನಸ್ಸು ಅಳಿಯಾಸೆಗಳ ಸುಳಿಗೆ ಸಿಲುಕಿದರೆ ನೆಲೆಯಿರದೆ ತೊಳಲುತ್ತದೆ.

**15. ಕುಣಿಗಲ್ ಕೆರೆಯು ಹೇಗೆ ಬಾಗಿದೆ?**

ಕುಣಿಗಲ್ ಕೆರೆಯು ಬಾಳೆಯ ಹಣ್ಣಿನಂತೆ ಬಾಗಿದೆ.

**16. ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಯಾವುದು?**

ಉತ್ತರನಿಗೆ ಬಲಗಡಲಿನಂತೆ ಕಂಡ ಸೈನ್ಯ ಕೌರವ ಸೈನ್ಯ.

**III. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17. ರೈತರು ಉಳುವುದನ್ನು ಬಿಟ್ಟು ಸತ್ಯಾಗ್ರಹ ಮಾಡಿದರೆ ಉಂಟಾಗುವ ಸಮಸ್ಯೆಗಳಾವುವು?**

ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಯಾರೂ ಬದುಕಲು ಸಾಧ್ಯವಿಲ್ಲ. ಯಾವ ಕಾರ್ಖಾನೆಯಿಂದಲೂ ಟೊಮೊಟೊ, ಅಕ್ಕಿ, ರಾಗಿಯನ್ನು ಬೆಳೆಯಲು ಸಾಧ್ಯವಿಲ್ಲ. ಇದಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಹರಿಯಲೇಬೇಕು.

**18. ಪುಟ್ಟರಾಜರಿಗೆ ಯಾವ ಯಾವ ಪ್ರಶಸ್ತಿಗಳು ದೊರೆತಿವೆ?**

ನಾಡೋಜ ಪ್ರಶಸ್ತಿ, ಬಸವಶ್ರೀ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಗೌರವ ಡಾಕ್ಟರೇಟ್ ಪ್ರಶಸ್ತಿ ಇವು ಪುಟ್ಟರಾಜರಿಗೆ ದೊರೆತ ಗೌರವ ಪ್ರಶಸ್ತಿಗಳು.

**19. ಹಕ್ಕಿಗಳು ಗೂಡನ್ನು ನಿರ್ಮಿಸುವ ಉದ್ದೇಶವೇನು?**

ಹಕ್ಕಿಗಳು ಗೂಡನ್ನು ನಿರ್ಮಿಸುವ ಮುಖ್ಯ ಉದ್ದೇಶ ರಕ್ಷಣೆಗಾಗಿ, ಶೀತಗಾಳಿ, ಬಿರುಗಾಳಿ, ಮಳೆ, ಪ್ರವಾಹಗಳಿಂದ ಬದುಕಲು, ಹವಾಮಾನ ವೈಪರೀತ್ಯಗಳನ್ನು ಎದುರಿಸಲು, ಮೊಟ್ಟೆ-ಮರಿಗಳನ್ನು ರಕ್ಷಿಸಿಕೊಳ್ಳಲು, ಬೇಟೆಯಾಡುವ ಪ್ರಾಣಿಗಳಿಂದ ತಪ್ಪಿಸಿಕೊಳ್ಳಲು ಹಕ್ಕಿಗಳು ಗೂಡನ್ನು ನಿರ್ಮಿಸುತ್ತವೆ.

**20. ಟವರ್ ಆಫ್ ಲಂಡನ್ ಅನ್ನು ನಿಗೂಢ ಸ್ಥಳ ಎಂದು ಏಕೆ ಕರೆಯುತ್ತಾರೆ?**

ಟವರ್ ಆಫ್ ಲಂಡನ್ ಇದು ಹಿಂದೆ ರಾಜರು ತಮಗೆ ಆಗದವರನ್ನು ಕೊಲ್ಲಿಸುತ್ತಿದ್ದ ಜಾಗ. ರಾಜಮನೆತನಗಳಲ್ಲಿನ ವೈರತ್ವ, ಅಸೂಯೆ, ಕೊಲೆ, ಸುಲಿಗೆಗಳ ತಾಣವಿದು. ರಾಬರ್ಟ್ ಕ್ಲೈವ್ ಪ್ಲಾಸಿಕದನದಲ್ಲಿ ವಶಪಡಿಸಿಕೊಂಡಿದ್ದ ಶಸ್ತ್ರಾಸ್ತ್ರಗಳನ್ನು ಇಲ್ಲಿ ಇಡಲಾಗಿದೆಯಂತೆ. ಆದುದರಿಂದ 'ಟವರ್ ಆಫ್ ಲಂಡನ್' ಅನ್ನು ನಿಗೂಢ ಸ್ಥಳ ಎಂದು ಕರೆಯುತ್ತಾರೆ.

**21. ಗೋಪಾಲನ ತಾಯಿ ಬಡತನದಿಂದ ಹೇಗೆ ಜೀವನ ನಡೆಸುತ್ತಿದ್ದಳು?**

ಗೋಪಾಲನ ತಾಯಿ ಒಬ್ಬ ಬಡ ಹೆಂಗಸು, ಒಂದು ಚಿಕ್ಕ ಗುಡಿಸಲಿನಲ್ಲಿ ವಾಸಿಸುತ್ತಿದ್ದಳು. ಪ್ರತಿನಿತ್ಯ ಚರಕದ ಮುಂದೆ ಕುಳಿತು ನೂಲು ತೆಗೆಯುತ್ತಿದ್ದಳು. ನೂಲನ್ನು ಮಾರಿ ಬಂದ ಕಾಸಿನಲ್ಲಿ ತನ್ನ ಸಂಸಾರ ನಡೆಸಿಕೊಂಡು ಹೋಗುತ್ತಿದ್ದಳು.

**22. ಅಡಿಗರು ಯಾವುದನ್ನು ಹೇಡಿತನ ಹಾಗು ಹೆಣ್ತನ ಎಂದು ಕರೆದಿದ್ದಾರೆ?**

ಗಾಳಿ ಬಂದ ಕಡೆ ತಿರುಗುವುದು ಹೇಡಿತನ, ದಾಳಿ ಬಂದೊಡನೆ ಶರಣಾಗುವುದು ಹೆಣ್ತನ. ಹಿಡಿದ ದಾರಿಯಲ್ಲಿ ಕೊನೆಯವರೆಗೆ ನಡೆಯುವುದೇ ಪೌರುಷದ ಬಾಳ್ವೆ ಎಂದು ಅಡಿಗರು ಹೇಡಿತನ ಹಾಗೂ ಹೆಣ್ತನದ ಬಗ್ಗೆ ಹೇಳಿದ್ದಾರೆ.

**23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದ ಬಗೆಯನ್ನು ತಿಳಿಸಿ.**

ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ನೋಡಿ ಜ್ವರದ ರೀತಿಯನ್ನು ಗುರುತಿಸಿದರು, ಮಾತ್ರೆಯನ್ನು ಕುಡಿಸಿದರು, ಕಾಡಿಗೆ ಹೋಗಿ ಔಷಧಿಯ ಸಸ್ಯ ತಂದು ರಸ ತಯಾರಿಸಿ ಕುಡಿಸಿದರು. ಲೇಹವನ್ನು ಹಣೆಗೆ ಹಚ್ಚಿ ಶುಶ್ರೂಷೆ ಮಾಡಿದರು. ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು.

**24. ಮನುಕುಲದ ಭವ್ಯ ಬದುಕು ಯಾವ ರೀತಿ ಅರಳಬೇಕೆಂದು ಕವಯಿತ್ರಿಯ ಆಶಯವಾಗಿದೆ?**

ಮಾನವರು ಕಷ್ಟ ಪಟ್ಟು ಬೆವರು ಸುರಿಸಿ ದುಡಿಯಲಿ, ಮಾನವ ಶ್ರಮದಲ್ಲಿ ಅಮೃತವು ಅಡಗಿದೆ, ಮತ್ತೊಮ್ಮೆ ಎಲ್ಲೆಲ್ಲೂ ಹಸಿರು ಮೇಳ ನಡೆದು ಪ್ರಕೃತಿಯು ಹಸಿರಿನಿಂದ ತುಂಬಲಿ. ನಾಳೆ ಎಂಬ ಚಪ್ಪರದ ಕೆಳಗೆ ಮನುಕುಲದ ಮೊಳಕೆ ಒಡೆದು ಭವ್ಯ ಬದುಕು ಅರಳಿಲಿ ಎಂದು ಕವಯಿತ್ರಿ ಹೇಳುತ್ತಾರೆ.

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

**25. ಸಿ.ಪಿ. ಕೃಷ್ಣಕುಮಾರ್**

ಸಿ.ಪಿ. ಕೃಷ್ಣಕುಮಾರ್ ಅವರು 1939ರಲ್ಲಿ ಕೃಷ್ಣರಾಜನಗರ ತಾಲ್ಲೂಕಿನ ಚಿಕ್ಕನಾಯಕನಹಳ್ಳಿಯಲ್ಲಿ ಜನಿಸಿದರು. ಇವರು 'ಕಾವ್ಯಾರಾಧನಾ', 'ಬೊಗಸೆ', 'ಅನಂತಪ್ಲಥ್ವಿ', 'ಪರಿಭಾವನೆ' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ಬಸವ ಸಾಹಿತ್ಯ ಶ್ರೀ ಪ್ರಶಸ್ತಿ, ವಿದ್ವತ್ ಶಿರೋಮಣಿ, ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ

**ಸಾರಾಂಶ :** ಈ ಪದ್ಯಭಾಗವನ್ನು ಕವಿ ಬಸವರಾಜ ಸಾದರ ಅವರು ರಚಿಸಿರುವ 'ಸಿಸಿಫಸರ ಸುತ್ತು' ಎಂಬ ಕವನ ಸಂಕಲನದ 'ಸವಿಚೈತ್ರ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ. ಮಾಘಮಾಸದಲ್ಲಿ ಮರಗಿಡಗಳಲ್ಲಿರುವ ಹಣ್ಣೆಲೆ ಉದುರಿ ಹೋಗುತ್ತದೆ, ಚೈತ್ರಮಾಸದಲ್ಲಿ ಹೊಸ ಚಿಗುರಿನೊಂದಿಗೆ ಮರಗಿಡಗಳು ಚೈತನ್ಯ ಶಕ್ತಿಯೊಂದಿಗೆ ಕಾಣಿಸುತ್ತವೆ, ಹೂಗಳು ಅರಳಿ ಮರಗಿಡಗಳಲ್ಲಿ ಹೊಸ ಚಿತ್ತಾರ ಮೂಡಿದೆ. ಮರಗಿಡಗಳು ಚಿಗುರಿದಾಗ ಕೋಗಿಲೆಗಳು ಹಾಡಲು ಪ್ರಾರಂಭಿಸುತ್ತದೆ. ಹಕ್ಕಿಗಳ ಚಿಲಿಪಿಲಿಯ ಗಾನಕ್ಕೆ ಕೋಗಿಲೆಯ ಹಾಡು ಮತ್ತೇರಿಸಿದಂತಿದೆ ಎಂದು ಕವಿ ಹೇಳಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

**27. 'ಪುಟ್ಟರಾಜರು ಕೋಗಿಲೆಯಂತೆ ಸುಮಧುರವಾಗಿ ಹಾಡುತ್ತಿದ್ದರು'**

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.

ಉಪಮೇಯ : ಪುಟ್ಟರಾಜರು

ಉಪಮಾನ : ಕೋಗಿಲೆ

ಉಪಮಾವಾಚಕ : ಅಂತೆ

ಸಮಾನಧರ್ಮ : ಮಧುರವಾಗಿ ಹಾಡುವುದು

ಸಮನ್ವಯ : ಇಲ್ಲಿ 'ಪುಟ್ಟರಾಜರು' ಎಂಬ ಉಪಮೇಯವನ್ನು 'ಕೋಗಿಲೆ' ಎಂಬ ಉಪಮಾನದಿಂದ 'ಮಧುರವಾಗಿ ಹಾಡುವುದು' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

**28. ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು**

ಜನಪದ ವೇದಗಳೆಂದೆ ಹೆಸರಾದ ಗಾದೆಗಳನ್ನು ನಾಡಿನ ಹಿರಿಯರು ತಮ್ಮ ಬದುಕಿನ ಅನುಭವಗಳನ್ನು ಪದಗಳಲ್ಲಿ ಹೇಳಿದ್ದಾರೆ. ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು ಎಂಬ ಮಾತಿದೆ. ಇಂತಹ ಗಾದೆಗಳಲ್ಲಿ ಕೂತು ಉಣ್ಣುವವನಿಗೆ ಕುಡಿಕೆ ಹೊನ್ನು ಸಾಲದು ಎಂಬ ಗಾದೆಯೂ ಒಂದು.

ಕುಳಿತು ಉಂಡರೆ ಗಳಿಸಿದ ಸಂಪತ್ತು ಕೂಡಿಟ್ಟ ಹಣ ಒಂದಲ್ಲ ಒಂದು ದಿನ ಕರಗುತ್ತದೆ ಎಂಬ ಮಾತಿದೆ. ಆದರೆ ನಿರಂತರ ದುಡಿದು ಅದನ್ನು ಸುಳ್ಳಾಗಿಸಬಹುದು. ನಮ್ಮ ದುಡಿಮೆಯೇ ನಮ್ಮ ಜೀವನ ಆಗಬೇಕು. ಸೋಮಾರಿಗಳಾಗಿ ದುಡಿಯದೆ ತಿನ್ನುತ್ತಾ ಕುಳಿತರೆ ನಮ್ಮ ಸಂಪತ್ತೆಲ್ಲ ಕರಗುತ್ತದೆ. ಕುಡಿಕೆಯಲ್ಲಿ ಕೂಡಿಟ್ಟ ಹಣವೂ ಸಾಕಾಗುವುದಿಲ್ಲ. ದುಡಿಮೆಯೇ ನಮ್ಮ ದೇವರಾಗಬೇಕು ಎಂಬ ಸತ್ಯವನ್ನು ಈ ಗಾದೆಯು ತಿಳಿಸುತ್ತದೆ.

**ಅಥವಾ**

**ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು**

ಗಾದೆಗಳು ವೇದಕ್ಕೆ ಸಮಾನ ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ಗಾದೆಗಳು ಅನುಭವಿಗಳು ತಮ್ಮ ಅನುಭವದಿಂದ ಹೇಳಿರುವ ನುಡಿಮುತ್ತುಗಳೇ ಗಾದೆಗಳು.

ಸರ್ವಜ್ಞ ಕವಿಯು ಕೃಷಿಯ ಬಗ್ಗೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕಡೆಗುಂ" ಎಂದಿದ್ದಾರೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು, ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಅರ್ಥ. ಜಗತ್ತಿನಲ್ಲಿ ಉತ್ತಮವಾದ ಕೆಲಸವೆಂದರೆ ವ್ಯವಸಾಯ, ರೈತ ಜಗತ್ತಿಗೆ ಅನ್ನ ನೀಡಿ ಅನ್ನದಾತನಾಗಿದ್ದಾನೆ. ಮಳೆ ಬಿಸಿಲೆನ್ನದೆ ರೈತ ದುಡಿಯುತ್ತಾನೆ, ಭೂಮಿಯನ್ನು ಹದ ಮಾಡಿ ಬೀಜ ಬಿತ್ತಿ ನೀರು ಗೊಬ್ಬರ ಹಾಕಿ ವರ್ಷವಿಡೀ ಕೆಲಸ ಮಾಡುವ ರೈತ 'ನಾಡಿನ ಬೆನ್ನೆಲುಬು' ಆಗಿದ್ದಾನೆ. ಸರ್ವಜ್ಞ ಹೇಳಿದಂತೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಎಂಬ ಮಾತು ಸರ್ವ ಸತ್ಯವೆನಿಸಿದೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5x3=15**

**29. 'ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ'**

ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಎಂಬ ಪುಸ್ತಕದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. 'ಭಗವಂತ ನಮಗೆ ಜೀವನ ಎನ್ನುವ ಕಾಫಿ ಕೊಟ್ಟಿದ್ದಾನೆ, ಕಪ್ಪುಗಳನ್ನಲ್ಲ ಆದುದರಿಂದ ಕಾಫಿ ಎಂಬ ಜೀವನವನ್ನು ಆಸ್ವಾಧಿಸಿ, ಕಪ್ಪುಗಳೆಂಬ ಅಲಂಕಾರಗಳ ಬೆನ್ನತ್ತಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದೇ ಸಿಕ್ಕಿರುವುದಿಲ್ಲ, ಆದರೆ ಸಿಕ್ಕಿರುವುದನ್ನು ಹೇಗೆ ಆಸ್ವಾದಿಸಬೇಕು ಎನ್ನುವುದು ಅವರಿಗೆ ತಿಳಿದಿದೆ.

**30. 'ಈ ನೇರಿಲ ಹಣ್ಣು ಎಷ್ಟು ಕಪ್ಪಾಗಿವೆ'**

ಈ ವಾಕ್ಯವನ್ನು ಕುವೆಂಪು ಅವರು ಬರೆದಿರುವ ನನ್ನ 'ಗೋಪಾಲ' ಎಂಬ ನಾಟಕದಿಂದ ಆರಿಸಲಾಗಿದೆ

ಈ ಮಾತನ್ನು ಗೋಪಾಲನು ತನ್ನಲ್ಲೆ ಹೇಳಿಕೊಳ್ಳುತ್ತಾನೆ. ಗೋಪಾಲನು ಸಂಜೆ ಶಾಲೆಯಿಂದ ಮರಳುವಾಗ ಕಾಡಿನ ದಾರಿಯಲ್ಲಿ ಬಂದನು. ಅಲ್ಲಿ ಗಿಡಮರಗಳಲ್ಲಿದ್ದ ಹೂಗಳು, ಹಣ್ಣುಗಳು ಅವನ ಮನಸೆಳೆಯಿತು. ತನ್ನ ಪುಸ್ತಕಗಳನ್ನು ಬದಿಗಿಟ್ಟು ಅಲ್ಲಿದ್ದ ಕಪ್ಪಾದ ನೇರಿಲ ಹಣ್ಣನ್ನು ಆಯ್ದು ತಿನ್ನುತ್ತಾನೆ. ಅದರ ಸ್ವಾದ ಇಷ್ಟವಾಗಿ ಈ ಮೇಲಿನಂತೆ ಹೇಳುತ್ತಾನೆ.

**31. 'ಒಂದು ಜೀವನಕೇಕೆ ಹಲವು ಸಾಧ್ಯಗಳು'**

ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಪುಸ್ತಕದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ಒಂದು ಬಾಣಕ್ಕೆ ಒಂದೇ ಗುರಿ ಇರುವಂತೆ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ, ಒಂದು ಜೀವನಕ್ಕೆ ಒಂದೇ ಗುರಿ ಇರಬೇಕು. ಬದುಕಿಗೊಂದು ಗುರಿ ಇಲ್ಲದಿದ್ದರೆ ಬದುಕೇ ವ್ಯರ್ಥವಾದಂತೆ. ಗುರಿ ಸಾಧನೆಯಲ್ಲಿ ಎದುರಾಗುವ ತೊಂದರೆಗಳನ್ನು ನಿವಾರಿಸಿಕೊಂಡು ಗುರಿ ಸೇರಬೇಕು. ಎಂದು ಕವಿ ಹೇಳಿದ್ದಾರೆ.

**32. 'ಬಾವ ತಂದಾನೆ ಬಣ್ಣದ ಸೀರೆ'**

ಈ ವಾಕ್ಯವನ್ನು ಜನಪದ ಗೀತೆ 'ಮೂಡಲ್ ಕುಣಿಗಲ್ ಕೆರೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಕೆರೆ ತುಂಬಿದಾಗ ಬಾಗಿನ ಅರ್ಪಿಸುವುದು ವಾಡಿಕೆ. ಈ ಸಂದರ್ಭದಲ್ಲಿ ಪೂಜಾ ಸಾಮಗ್ರಿಗಳೊಂದಿಗೆ ಸೀರೆ, ಕುಪ್ಪಸ ಹಾಗು ಹಣ್ಣು ಹಂಪಲನ್ನು ಮೊರದಲ್ಲಿಟ್ಟು ನೀರಿಗೆ ಬಿಡುತ್ತಾರೆ. ಕುಣಿಗಲ್ ಕೆರೆ ತುಂಬಿದಾಗ ಅದನ್ನು ನೋಡಲು ಬಂದ ಭಾವನು ಬಾಗಿನ ಅರ್ಪಿಸಲು ಬಣ್ಣದ ಸೀರೆಯನ್ನು ತಂದನು.

**33. 'ನಾಡನರಿವೊಲು ಹಲುಗಿರಿಯ ಬಿಡುವೆನೆ'**

ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಪುಸ್ತಕದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಅರ್ಜುನನು ಉತ್ತರನಿಗೆ ಹೇಳುತ್ತಾನೆ. ಉತ್ತರನು ಅರಮನೆಯಲ್ಲಿ ಹೆಂಗಸರ ಮುಂದೆ ಕೌರವರ ಸೇನೆಯನ್ನು ಸುಲಭವಾಗಿ ಸೋಲಿಸಬಹುದೆಂದು ಜಂಬ ಕೊಚ್ಚಿದನು, ಆದರೆ ರಣರಂಗದಲ್ಲಿ ಕೌರವನ ವಿಶಾಲವಾದ ಸೇನೆಯನ್ನು ಕಂಡು ಹೆದರಿದ ಉತ್ತರನು ರಣರಂಗದಿಂದ ಓಡತೊಡಗಿದನು. ಆಗ ಅರ್ಜುನನು ಅವನನ್ನು ತಡೆದು ಅಂಜುಬುರುಕ ನರಿಯಂತೆ ಓಡಬೇಡ ಕಾದುನಡೆ ಎಂದು ಹೇಳಿದನು.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ನೀರ ಕಂಡಲ್ಲಿ ಮುಳುಗುವರಯ್ಯ
ಮರನ ಕಂಡಲ್ಲಿ ಸುತ್ತುವರಯ್ಯ
ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು
ನಿಮ್ಮನ್ನೆತ್ತ ಬಲ್ಲರು ಕೂಡಲಸಂಗಮದೇವ.

ಅಥವಾ

ಮರವಿದ್ದು ಫಲವೇನು ಫಲವೇನು ನೆಳಲಿಲ್ಲದನ್ನಕ್ಕ
ಧನವಿದ್ದು ಫಲವೇನು ದಯವಿಲ್ಲದನ್ನಕ್ಕ
ಹಸುವಿದ್ದು ಫಲವೇನು ಹಯನಿಲ್ಲದನ್ನಕ್ಕ
ರೂಪಿದ್ದು ಫಲವೇನು ಗುಣವಿಲ್ಲದನ್ನಕ್ಕ
ಅಗಲಿದ್ದು ಫಲವೇನು ಬಾನವಿಲ್ಲದನ್ನಕ್ಕ
ನಾನಿದ್ದು ಫಲವೇನು ನಿಮ್ಮ ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4**

**35. ಗಿಳಿಯ ವರ್ತನೆಯಲ್ಲಿ ನೀವು ಮೆಚ್ಚಿದ ಅಂಶಗಳನ್ನು ವರ್ಣಿಸಿ ಬರೆಯಿರಿ.**

ಒಣಮರದ ಗಿಳಿ ಪಾಠದಲ್ಲಿ ಗಿಳಿಯ ವರ್ತನೆಯು ಎಲ್ಲರಿಗೂ ಮಾದರಿಯಾಗಿದೆ. ತನಗೆ ಆಶ್ರಯ ನೀಡಿದ ಮರವು ವಿಷದ ಬಾಣಕ್ಕೆ ತುತ್ತಾಗಿ ಒಣಗಿ ಹೋಗಿತ್ತು, ಅಲ್ಲಿ ಆಶ್ರಯ ಪಡೆಯುತ್ತಿದ್ದ ಗಿಳಿಯೊಂದು ಬೇರೆಡೆ ಹಾರಿ ಹೋಗದೆ ಮರಕ್ಕೆ ಒಳ್ಳೆಯ ದಿನಗಳು ಬರಲೆಂದು ಹಾರೈಸಿತು. ಒಣಮರದಲ್ಲಿ ವಾಸವಾಗಿರುವ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. ಒಣಮರದಲ್ಲೇ ವಾಸಿಸಲು ಕಾರಣವೇನೆಂದು ತಿಳಿಯಲು ಇಂದ್ರನು ಮುಂದಾದಾಗ ಗಿಳಿಯು "ಹಲವಾರು ವರ್ಷಗಳಿಂದ ಈ ಮರ ತನಗೆ ಆಶ್ರಯ ನೀಡಿರುವುದನ್ನು ವಿವರಿಸಿ ಹೇಳಿತು. ಗಿಳಿಯ ತತ್ವನಿಷ್ಠೆಯ ಗುಣವನ್ನು ಮೆಚ್ಚಿಕೊಂಡ ಇಂದ್ರನು ಏನಾದರು ವರವನ್ನು ಕೊಡಲು ನಿರ್ಧರಿಸಿದನು. ಆಗ ಗಿಳಿಯು ತನಗಾಗಿ ಯಾವ ವರವನ್ನು ಬೇಡದೆ ಮರಕ್ಕೆ ಮೊದಲಿನ ರೂಪವನ್ನು ಕೊಡುವಂತೆ ಬೇಡಿಕೊಂಡಿತು. ಈ ಮೂಲಕ ತಾನು ಪರಹಿತಾಕಾಂಕ್ಷಿ ಎನಿಸಿಕೊಂಡಿತು. ಸ್ವಾರ್ಥರಹಿತ ಗುಣವನ್ನು ಗಿಳಿಯ ಮೂಲಕ ನಾವು ಕಲಿಯಬಹುದು. ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ಕಷ್ಟಕಾಲದಲ್ಲೂ ಕೂಡ ಅವರ ಜೊತೆಗಿದ್ದು ಉಪಕಾರ ಸ್ಮರಣೆ ಮಾಡಬೇಕೆಂದು ಗಿಳಿಯ ವರ್ತನೆಯಿಂದ ಕಲಿಯಬೇಕು.

**ಅಥವಾ**

**ಗಿಳಿ ಮತ್ತು ಇಂದ್ರನ ನಡುವಿನ ಸಂಭಾಷಣೆ ಸ್ವಾರಸ್ಯವನ್ನು ವರ್ಣಿಸಿ ಬರೆಯಿರಿ.**

ಗಿಳಿಯೊಂದು ಒಣಮರದಲ್ಲಿ ವಾಸವಾಗಿರುವುದನ್ನು ಕಂಡ ಇಂದ್ರನು 'ಇಂಥ ಒಣಮರದಲ್ಲಿ ಏಕೆ ವಾಸವಾಗಿದ್ದೀಯಾ?' ಎಂದು ಗಿಳಿಗೆ ಕೇಳಿದನು. ಆಗ ಗಿಳಿಯು ಹಲವಾರು ವರ್ಷಗಳಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ, ಹಣ್ಣು ಕೊಟ್ಟಿದೆ, ಹಸಿರು ಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೆರಳು ನೀಡಿದೆ. ಆದರೆ ಈಗ ದುರದೃಷ್ಟದಿಂದ ಅದಕ್ಕೆ ರೋಗ ಬಡತನಗಳು ಕಿತ್ತು ತಿನ್ನುತ್ತಿವೆ. ಹಾಗೆಂದು ಈ ಸ್ಥಿತಿಯಲ್ಲಿ ಬಿಟ್ಟು ಬೇರೆ ಕಡೆ ಹೋಗಲೇ? ಎಲ್ಲೋ ಹೋಗಿ ಆಹಾರ ಸಂಪಾದಿಸಿಕೊಂಡು ಬರುತ್ತೇನೆ ಆದರೆ ವಾಸ ಇಲ್ಲೇ. ಸುಖಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ಕೆಟ್ಟ ಗಳಿಗೆಯಲ್ಲೂ ಜೊತೆಗಿರಬೇಕು. ಉಪಕಾರ ಸ್ಮರಣೆ ಮಾಡಬೇಕು ಎಂದಿತು. ಆಗ ಇಂದ್ರನಿಗೆ ಗಿಳಿಯ ತತ್ವನಿಷ್ಠೆಯ ಗುಣವನ್ನು ಮೆಚ್ಚಿಕೊಂಡು ಏನಾದರೂ ವರವನ್ನು ಕೊಡಬೇಕೆಂದು ನಿರ್ಧರಿಸಿದನು. ಆದು ಎಂತಹ ಜನ್ಮವನ್ನು ಬಯಸಿದ್ದರೂ ಸಿದ್ಧನಿದ್ದನು. ಆದರೆ ಗಿಳಿಯು ತನಗಾಗಿ ಯಾವ ವರವನ್ನು ಬೇಡದೆ "ದೇವರಾಜ ವರವನ್ನು ಕೊಡುವ ಇಚ್ಚೆ ಇದ್ದರೆ ಈ ಮರಕ್ಕೆ ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳು ಕೊಡುವ ವರವನ್ನು ದಯಪಾಲಿಸು ಆದರ ಈಗಿನ ಅವಸ್ಥೆಯನ್ನು ನೋಡಲಾರೆ" ಎಂದು ಗಿಳಿಯು ಇಂದ್ರನಿಗೆ ವರವನ್ನು ಕೇಳಿತು. ಇದೆ ಗಿಳಿ ಮತ್ತು ಇಂದ್ರನ ನಡುವೆ ನಡೆದ ಸಂಭಾಷಣೆ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ಕಪಿಮಾನವನಿಗೆ ಚಿಂತನಶಕ್ತಿ ತುಂಬಾ ಕಡಿಮೆ. ಮೊದಲಲ್ಲಿ ಅವನಿಗೂ ಉಳಿದ ಪ್ರಾಣಿಗಳಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಪ್ರಕೃತಿಯ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವನಿಗಿರಲಿಲ್ಲ. ಒಂದು ವಿಧದಲ್ಲಿ ಅವನು ಸ್ಥಿತ ಪ್ರಜ್ಞ, ಹಸಿವಾದಾಗ ಬೇಟೆಯಾಡಿಕೊಂಡು, ಗೆಡ್ಡೆ ಗೆಣಸು ತಿಂದುಕೊಂಡು ಕಾಡು ಮನುಷ್ಯನ ಹಾಗೆ ಬದುಕುತ್ತಿದ್ದನು. ಕಾಲಕ್ರಮೇಣ ಸ್ವಲ್ಪ ಕಣ್ಣುಬಿಟ್ಟು ಸುತ್ತಮುತ್ತಣ ಚಟುವಟಿಕೆಗಳನ್ನು ಮನಸ್ಸಿಟ್ಟು ನೋಡಲು ಪ್ರಯತ್ನಪಟ್ಟನು. ಇಷ್ಟಾದರೂ ಪ್ರಕೃತಿಯ ಎಲ್ಲಾ ಕ್ರಿಯೆಗಳೂ ಸಹಜವೇ! ಕೈಯಿಂದ ಕಳಚಿಬಿದ್ದ ಕಲ್ಲು ಕೆಳಗೆ ಬೀಳಲೇಬೇಕು. ಮೇಲಕ್ಕೆ ಬಿಸಾಡಿದ ಕಲ್ಲಿನ ಅವಸ್ಥೆಯೂ ಅಷ್ಟೆ. ಏಕೆ?, ಹೇಗೆ? ಎನ್ನುವ ಪದಗಳು ಇನ್ನೂ ಹುಟ್ಟಿರಲಿಲ್ಲ. ಹುಟ್ಟಿದ ಮೇಲೂ ಇಂತಹ ಸಹಜ ಕ್ರಿಯೆಗಳಿಗೆ ಅವುಗಳ ಬಳಕೆ ತೀರಾ ಹಾಸ್ಯಾಸ್ಪದವಾಗಿದ್ದಿತು. ಈಗಲೂ ಸಂಪ್ರದಾಯವಾದಿಗಳಿಗೆ ಪ್ರಶ್ನೆ ಪತ್ರಿಕೆಗಳು ಅಷ್ಟಾಗಿ ಹಿಡಿಸುವುದಿಲ್ಲ.

ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸ ವಿವೇಚನೆ ಮತ್ತು ವಾಕ್‌ಶಕ್ತಿ. ಉಳಿದ ಎಷ್ಟೋ ವಿಷಯಗಳಲ್ಲಿ ಮನುಷ್ಯ ಪ್ರಾಣಿಗಿಂತ ಕೀಳು. ಅನೇಕ ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿವೆ. ಆನೆಗೂ ಮನುಷ್ಯನಿಗೂ ಅಜಗಜಾಂತರ. ಜಿಂಕೆ ಕುದುರೆಗಳ ವೇಗವೆಲ್ಲಿಂದ ಬಂದೀತು ಮನುಷ್ಯನಿಗೆ. ಕೃತಜ್ಞತೆ ನಾಯಿಗೆ ಸಹಜ. ಕೃತಜ್ಞತೆಯ ಮೇಲೆ ಪುಂಖಾನುಪುಂಖವಾಗಿ ಭಾಷಣ ಮಾಡುವವನೂ ಕೂಡ ಈ ವಿಷಯದಲ್ಲಿ ನಾಯಿಗೆ ಸಮನಾಗುತ್ತಾನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕತ್ತೆಗಿರುವ ತಾಳ್ಮೆ ಮನುಷ್ಯನಿಗಿಲ್ಲ. ಹೀಗೆ ಮನುಷ್ಯ ಎಷ್ಟೋ ವಿಷಯಗಳಲ್ಲಿ ಯಃಕಶ್ಚಿತ್ ಜಂತು. ಆದಾಗ್ಯೂ ತನ್ನ ವಿಚಾರ ಶಕ್ತಿಯಿಂದ ಸರ್ವಶ್ರೇಷ್ಠ ಪ್ರಾಣಿಯಾಗಿದ್ದಾನೆ.

**36. ಅ) ಕಪಿ ಮಾನವನ ವರ್ತನೆಗಳು ಹೇಗಿದ್ದವು?**

ಕಪಿಮಾನವನಿಗೆ ಚಿಂತನಶಕ್ತಿ ತುಂಬಾ ಕಡಿಮೆ. ಮೊದಲಲ್ಲಿ ಅವನಿಗೂ ಉಳಿದ ಪ್ರಾಣಿಗಳಿಗೂ ಹೆಚ್ಚು ವ್ಯತ್ಯಾಸವಿರಲಿಲ್ಲ. ಪ್ರಕೃತಿಯ ಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವ ಶಕ್ತಿ ಅವನಿಗಿರಲಿಲ್ಲ. ಒಂದು ವಿಧದಲ್ಲಿ ಅವನು ಸ್ಥಿತ ಪ್ರಜ್ಞ. ಹಸಿವಾದಾಗ ಬೇಟೆಯಾಡಿಕೊಂಡು, ಗೆಡ್ಡೆ ಗೆಣಸು ತಿಂದುಕೊಂಡು ಕಾಡು ಮನುಷ್ಯನ ಹಾಗೆ ಬದುಕುತ್ತಿದ್ದನು. ಕಾಲಕ್ರಮೇಣ ಸ್ವಲ್ಪ ಕಣ್ಣುಬಿಟ್ಟು ಸುತ್ತಮುತ್ತಣ ಚಟುವಟಿಕೆಗಳನ್ನು ಮನಸ್ಸಿಟ್ಟು ನೋಡಲು ಪ್ರಯತ್ನಪಟ್ಟನು.

**ಆ) ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿದ್ದವು ಹೇಗೆ?**

ಪ್ರಾಣಿಗಳಿಗೂ ಮತ್ತು ಮನುಷ್ಯನಿಗೂ ಇರುವ ಮುಖ್ಯ ವ್ಯತ್ಯಾಸ ವಿವೇಚನೆ ಮತ್ತು ವಾಕ್‌ಶಕ್ತಿ. ಉಳಿದ ಎಷ್ಟೋ ವಿಷಯಗಳಲ್ಲಿ ಮನುಷ್ಯ ಪ್ರಾಣಿಗಿಂತ ಕೀಳು. ಅನೇಕ ಪ್ರಾಣಿಗಳು ಮನುಷ್ಯನಿಗಿಂತ ಬಲಿಷ್ಠವಾಗಿವೆ. ಆನೆಗೂ ಮನುಷ್ಯನಿಗೂ ಅಜಗಜಾಂತರ. ಜಿಂಕೆ ಕುದುರೆಗಳ ವೇಗವೆಲ್ಲಿಂದ ಬಂದೀತು ಮನುಷ್ಯನಿಗೆ. ಕೃತಜ್ಞತೆ ನಾಯಿಗೆ ಸಹಜ. ಕೃತಜ್ಞತೆಯ ಮೇಲೆ ಪುಂಖಾನುಪುಂಖವಾಗಿ ಭಾಷಣ ಮಾಡುವವನೂ ಕೂಡ ಈ ವಿಷಯದಲ್ಲಿ ನಾಯಿಗೆ ಸಮನಾಗುತ್ತಾನೆ ಎಂದು ಹೇಳುವುದಕ್ಕೆ ಆಗುವುದಿಲ್ಲ. ಕತ್ತೆಗಿರುವ ತಾಳ್ಮೆ ಮನುಷ್ಯನಿಗಿಲ್ಲ. ಹೀಗೆ ಮನುಷ್ಯ ಎಷ್ಟೋ ವಿಷಯಗಳಲ್ಲಿ ಯಃಕಶ್ಚಿತ್ ಜಂತು. ಆದಾಗ್ಯೂ ತನ್ನ ವಿಚಾರ ಶಕ್ತಿಯಿಂದ ಸರ್ವಶ್ರೇಷ್ಠ ಪ್ರಾಣಿಯಾಗಿದ್ದಾನೆ.

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

**37. ಸಮೂಹ ಮಾಧ್ಯಮದಲ್ಲಿ ದೂರದರ್ಶನದ ಪಾತ್ರ**

**ಪೀಠಿಕೆ:** ಸಮೂಹ ಮಾಧ್ಯಮಗಳಲ್ಲಿ ಒಂದಾದ ದೂರದರ್ಶನವು ದೃಕ್‌ಶ್ರವ್ಯ ಮಾಧ್ಯಮವಾಗಿದೆ. ವಿಜ್ಞಾನ ಜಗತ್ತಿನ ಅದ್ಭುತ ಕೊಡುಗೆಯಾದ ದೂರದರ್ಶನದ ಸಂಶೋಧಕ ಜಾನ್ ಬಯಾರ್ಡ್. ದೂರದದೃಶ್ಯ–ಸಂಗತಿಗಳನ್ನು ದರ್ಶನ ಮಾಡಿಸುವ ಸಾಧನವೇ ದೂರದರ್ಶನ.

**ವಿಷಯ ನಿರೂಪಣೆ:** ದೂರದರ್ಶನದಿಂದ ಮನರಂಜನೆಯನ್ನು ಪಡೆಯಬಹುದು. ಶಿಕ್ಷಣ, ಕ್ರೀಡೆ, ಕಲೆ, ಸಾಹಿತ್ಯ, ವಿಜ್ಞಾನ, ಧಾರ್ಮಿಕ, ಇತಿಹಾಸ ಮೊದಲಾದ ಕ್ಷೇತ್ರಗಳ ಬಗ್ಗೆ ತಿಳಿಯಬಹುದು. ದೇಶ ವಿದೇಶಗಳ ಸುದ್ಧಿ–ಸಂಗತಿಗಳನ್ನು ತಿಳಿಯಬಹುದು. ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ಆನಂದಿಸಬಹುದು. ಕೈಗಾರಿಕೆ, ವೈದ್ಯಕೀಯ, ಕೃಷಿ, ರಾಜಕೀಯ ಮೊದಲಾದ ಕ್ಷೇತ್ರಗಳ ಮಾಹಿತಿ ದೂರದರ್ಶನದಿಂದ ಸಿಗುತ್ತದೆ. ರಸಪ್ರಶ್ನೆ ಕಾರ್ಯಕ್ರಮಗಳಿಂದ ಜ್ಞಾನವಿಕಾಸವಾಗುತ್ತದೆ. ರಾಷ್ಟ್ರೀಯ ಭಾವೈಕ್ಯತೆ ಬೆಳೆಸುವಲ್ಲಿ ದೂರದರ್ಶನದ ಪಾತ್ರದೊಡ್ಡದು. ದೂರದರ್ಶನದಿಂದ ಕಾಲದ ಅಪವ್ಯಯವಾಗುತ್ತದೆ. ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮಾರಕವಾಗಿದೆ. ಜನರ ಸಂಪರ್ಕ ಸಂಬಂಧಗಳು ನಾಶವಾಗುತ್ತಿವೆ. ಕಣ್ಣು, ಕಿವಿ ಹಾಗೂ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ.

**ಉಪಸಂಹಾರ:** ದೂರದರ್ಶನವನ್ನು ನೋಡುವುದು ಹವ್ಯಾಸವಾಗಬಾರದು. ಅದು ಜ್ಞಾನದ ಸಾಧನವಾಗಬೇಕು. ದೂರದರ್ಶನ ಮುಳ್ಳಿರುವ ಗುಲಾಬಿಯಂತೆ ಸುಂದರವಾಗಿ ಕಂಡರೂ ಅದು ಒಳಿತು–ಕೆಡುಕಗಳ ಮಿಶ್ರಣವಾಗಿದೆ. ಈ ಯುಗದ ವರವಾಗಿರುವ ದೂರದರ್ಶನವನ್ನು, ಶಾಪವಾಗದಂತೆ ಬಹಳ ಎಚ್ಚರಿಕೆ ಬಳಸಿದರೆ ಯಾವ ಅಪಾಯವಿರುವುದಿಲ್ಲ.

**ಅಥವಾ**

**ಸಾಂಕ್ರಾಮಿಕ ರೋಗ/ಕೊರೋನ (ಕೋವಿಡ್–19)**

ಕೊರೋನ ಎಂಬ ವೈರಸ್ ರೋಗವು ಪ್ರಪಂಚದ ಎಲ್ಲಾ ದೇಶಗಳ ಜನತೆಯನ್ನು ಭಯಗೊಳಿಸುತ್ತಿರುವ ಹಾಗೂ ಲಕ್ಷಾಂತರ ಜನತೆಯ ಪ್ರಾಣವನ್ನು ತೆಗೆದ ಈ ರೋಗವು ಒಬ್ಬರಿಂದ ಮತ್ತೊಬ್ಬರಿಗೆ ಹರಡುತ್ತದೆ. ಈ ವೈರಸ್ಸಿಂದಾಗಿ ಜಗತ್ತಿನ ಜನಜೀವನದ ಮೇಲೆ ಕೆಟ್ಟ ಪರಿಣಾಮ ಉಂಟಾಗುತ್ತಿದೆ. ದೇಶದ ಆರ್ಥಿಕ ವ್ಯವಸ್ಥೆಯನ್ನು ಪಾತಾಳಕ್ಕೆ ಕುಸಿಯುವಂತೆ ಮಾಡಿದೆ.

ಈ ರೋಗದಿಂದ ದೂರವಿರಲು ಪ್ರತಿಯೊಬ್ಬರೂ ಮುಖಕ್ಕೆ ಮಾಸ್ಕ್ ಧರಿಸುವುದು, ಅಂತರ ಕಾಪಾಡುವುದು, ಸಾಬೂನಿನಿಂದ ಆಗಾಗ ಕೈ ತೊಳೆಯುವುದು ಮುಂತಾದ ಮುಂಜಾಗ್ರತೆಯಿಂದ ತಡೆಗಟ್ಟಬಹುದು. ಮುನ್ನೆಚ್ಚರಿಕೆ ಇದ್ದರೆ ಭಯಪಡುವ ಅವಶ್ಯಕತೆಯಿಲ್ಲ. ಆದುದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಜವಾಬ್ದಾರಿಯನ್ನು ಅರಿತು ನಡೆದುಕೊಂಡರೆ ರೋಗದಿಂದ ವಿಮುಕ್ತಿ ಪಡೆಯಬಹುದು.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

**38. ನಿಮ್ಮನ್ನು ಶಿವಮೊಗ್ಗ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ರವಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ ಕನ್ನಡ ಸಾಹಿತ್ಯ ಪರಿಷತ್ತಿನ ವ್ಯವಸ್ಥಾಪಕರಿಗೆ ಒಂದು ಮನವಿ ಪತ್ರ ಬರೆಯಿರಿ.**

**ಇವರಿಂದ** **ದಿನಾಂಕ : 01–01–2024**

ರವಿ

ಸರ್ಕಾರಿ ಪ್ರೌಢಶಾಲೆ

ಶಿವಮೊಗ್ಗ ಜಿಲ್ಲೆ

**ಇವರಿಗೆ**

ವ್ಯವಸ್ಥಾಪಕರು

ಕನ್ನಡ ಸಾಹಿತ್ಯ ಪರಿಷತ್ತು

ಚಾಮರಾಜಪೇಟೆ

ಬೆಂಗಳೂರು

ಮಾನ್ಯರೇ,

**ವಿಷಯ : ಶಾಲೆಯ ಗ್ರಂಥಾಲಯಕ್ಕೆ ಕನ್ನಡ ಪುಸ್ತಕಗಳನ್ನು ಕಳುಹಿಸಿಕೊಡುವಂತೆ ಕೋರಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ 250 ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದು ಬಿಡುವಿನ ವೇಳೆಯಲ್ಲಿ ಅವರು ಓದಲು ನಮ್ಮ ಶಾಲಾ ಗ್ರಂಥಾಲಯದಲ್ಲಿ ಕನ್ನಡ ಪುಸ್ತಕಗಳ ಕೊರತೆಯಿದೆ. ಪರೀಕ್ಷಾ ದೃಷ್ಟಿಯಿಂದಲೂ ಕೆಲವು ಪುಸ್ತಕಗಳ ಅಗತ್ಯವಿದೆ. ಈ ಕಾರಣ ತಾವು ಕನ್ನಡ ಪ್ರಸಿದ್ಧ ಕವಿಗಳ ಕಥಾ ಸಂಕಲನ, ಕವನ ಸಂಕಲನ, ಕಾದಂಬರಿ, ನಾಟಕ ಪುಸ್ತಕಗಳು, ಕನ್ನಡ ವ್ಯಾಕರಣ ಹಾಗೂ ಛಂದಸ್ಸಿನ ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿ. ಪುಸ್ತಕಗಳ ಹಣ ರೂಪಾಯಿ ಐದು ಸಾವಿರ ರೂಗಳನ್ನು ಡಿಡಿ ಮೂಲಕ ತಮಗೆ ಕಳುಹಿಸುತ್ತಿದ್ದೇನೆ. ಆದಷ್ಟು ಬೇಗ ಪುಸ್ತಕಗಳನ್ನು ಕಳುಹಿಸಿಕೊಡಬೇಕಾಗಿ ವಿನಂತಿ.

ಧನ್ಯವಾದಗಳೊಂದಿಗೆ.

ಇಂತಿ ತಮ್ಮ ವಿಧೇಯ

**ರವಿ**

**ಅಥವಾ**

**<u>ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ಪ್ರಣವ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ವಿಶ್ವಪರಿಸರ ದಿನಾಚರಣೆಯನ್ನು ಕುರಿತು ಮಂಗಳೂರಿನ ಕೀರ್ತಿ ಎಂಬ ನಿಮ್ಮ ಗೆಳತಿಗೆ ಒಂದು ಪತ್ರ ಬರೆಯಿರಿ.</u>**

**ಕ್ಷೇಮ** **ಶ್ರೀ** **ದಿನಾಂಕ : 01–01–2024**

**ಇವರಿಂದ**

ಪ್ರಣವ್

ಸರ್ಕಾರಿ ಪ್ರೌಢಶಾಲೆ

ಮೈಸೂರು

ಪ್ರೀತಿಯ ಗೆಳತಿ ಕೀರ್ತಿಗೆ ನಿನ್ನ ಸ್ನೇಹಿತ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ, ನೀನು ಸಹ ಆರೋಗ್ಯವಾಗಿದ್ದೀಯ ಎಂದು ಭಾವಿಸುತ್ತೇನೆ. ಜೂನ್ 5ರಂದು ನಮ್ಮ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಹಮ್ಮಿಕೊಂಡಿದ್ದೇವೆ "ಗಿಡ ಮರ ಬೆಳಸಿ ಪರಿಸರ ಉಳಿಸಿ" ಎಂಬ ಘೋಷ ವಾಕ್ಯದೊಂದಿಗೆ ಶಾಲಾ ವಿದ್ಯಾರ್ಥಿಗಳೆಲ್ಲ ತುಂಬ ಉತ್ಸಾಹದಿಂದ ಪಾಲ್ಗೊಂಡೆವು. ಶಾಲಾ ಮೈದಾನದಲ್ಲಿ ಶಿಕ್ಷಕರೊಂದಿಗೆ ವಿದ್ಯಾರ್ಥಿಗಳೆಲ್ಲ ವಿವಿಧ ಬಗೆಯ ಹಣ್ಣಿನ ಹೂವಿನ ಗಿಡಗಳನ್ನು ನೆಟ್ಟೆವು. ನೀರು ಗೊಬ್ಬರ ಹಾಕಿ ಗಿಡಗಳ ಸುತ್ತಲೂ ಬೇಲಿಯನ್ನು ಹಾಕಿ ಸಂರಕ್ಷಿಸಿದೆವು. ಪ್ರತಿ ಎರಡು ದಿನಕ್ಕೊಮ್ಮೆ ಆ ಗಿಡಗಳ ಹಾರೈಕೆ ಮಾಡಲೆಂದೇ ವಿದ್ಯಾರ್ಥಿ ತಂಡಗಳನ್ನು ರಚಿಸಲಾಯಿತು. ಈ ತಂಡಗಳ ಮೇಲುಸ್ತುವಾರಿಯನ್ನು ನಮ್ಮ ವಿಜ್ಞಾನ ಶಿಕ್ಷಕರು ತೆಗೆದುಕೊಳ್ಳುವುದಾಗಿ ಹೇಳಿದರು. ಪರಿಸರ ಇಂದಿನ ಅಗತ್ಯ ಏನೆಂಬುದನ್ನು ಗುರುಗಳು ವಿವರಿಸಿದರು, ನಾವೆಲ್ಲರೂ ಪರಿಸರವನ್ನು ಉಳಿಸುವುದಾಗಿ ಪ್ರತಿಜ್ಞೆ ಮಾಡಿದೆವು. ನಿಮ್ಮ ಶಾಲೆಯಲ್ಲಿ ನಡೆದ ಪರಿಸರ ದಿನಾಚರಣೆಯನ್ನು ಕುರಿತು ಒಂದು ಪತ್ರ ಬರೆದು ತಿಳಿಸು.

ಇಂತಿ ನಿನ್ನ ಗೆಳೆಯ
ಪ್ರಣವ್

**ರವರಿಗೆ**
ಕೀರ್ತಿ
ಸರ್ಕಾರಿ ಪ್ರೌಢಶಾಲೆ
ಬೀಚ್ ರಸ್ತೆ
ಮಂಗಳೂರು

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80** **ಮಾದರಿ ಪ್ರಶ್ನೆಪತ್ರಿಕೆ – 3** **ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. 'ಬರ್ತಾನೆ' ಪದದ ಗ್ರಾಂಥಿಕ ರೂಪ.

ಎ) ಬತ್ತಾನೆ ಬಿ) ಬಂದು ಸಿ) ಬಂದನು ಡಿ) ಬರುತ್ತಾನೆ

2. ಕ್ರಿಯಾಸಮಾಸಕ್ಕೆ ಉದಾಹರಣೆಯಾಗಿರುವ ಪದ.

ಎ) ಅರಮನೆ ಬಿ) ಹೊಸರಾಗ ಸಿ) ಗಂಜಿಯುಂಡು ಡಿ) ಮಧ್ಯರಾತ್ರಿ

3. 'ಬೈಗು' ಪದವು ನೀಡುವ ಅರ್ಥ.

ಎ) ಬೇಗ ಬಿ) ಬೆಳಕು ಸಿ) ಸಂಜೆ ಡಿ) ಬೆಳಗ್ಗೆ

4. 'ಸತೀಶನು ಬರೆದನು' ಈ ವಾಕ್ಯವಿರುವ ಕಾಲ.

ಎ) ಭೂತಕಾಲ ಬಿ) ವರ್ತಮಾನಕಾಲ ಸಿ) ಗುಳಿಕಕಾಲ ಡಿ) ಭವಿಷ್ಯತ್ ಕಾಲ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12x1=12**

5. ಇಂದ್ರನಿಗೆ ಮೆಚ್ಚುಗೆಯಾದ ಗಿಳಿಯ ಗುಣ ಯಾವುದು?
6. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?
7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
8. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?
9. ಲಂಡನ್ ನಲ್ಲಿರುವ ವಿಶ್ವವಿದ್ಯಾಲಯಗಳು ಯಾವುವು?
10. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣುತ್ತಿದ್ದವು?
11. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?
12. ಯುಗಾದಿ ಹಬ್ಬದಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?
13. ನೆಲದಮ್ಮ ನವವಧುವಾಗುವುದು ಯಾವಾಗ?
14. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ ಯವರು ಹೇಳುತ್ತಾರೆ?
15. ಅಡಿಗರು ಹೇಳುವಂತೆ ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?
16. ಕುಣಿಗಲ್ ಕೆರೆ ಹೇಗೆ ತುಂಬಿದೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ಇಂದ್ರನ ಬಳಿ ಗಿಳಿಯು ಕೇಳಿದ ವರ ಯಾವುದಾಗಿತ್ತು?
18. ನಮ್ಮ ದೇಶದ ರಕ್ಷಣಾ ಪಡೆ ಪ್ರಬಲವಾಗಿರಬೇಕು ಏಕೆ?
19. ಗುರುಗಳು ಸುಖಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ಹೇಳಿದರು?
20. ಲಂಡನ್ ಟವರ್ ಬ್ರಿಜ್ ನ ವೈಶಿಷ್ಟ್ಯಗಳೇನು ?
21. ಸದ್ದು ಮಾಡದೆ ಬಾಳಬೇಕು ಎಂಬುದನ್ನು ಕವಿ ನೀಡಿರುವ ಹೋಲಿಕೆಗಳಾವುವು?
22. ಕುಣಿಗಲ್ ಕೆರೆಯಲ್ಲಿ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
23. ಭೀಮನಾಯಕನು ವೈದ್ಯರ ವಸ್ತುಗಳನ್ನು ಏಕೆ ಹಿಂದಿರುಗಿಸಿದನು?
24. 'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಕವಯಿತ್ರಿಗೆ ಯಾವ ಬಗೆಯ ಅಳುಕು ಇದೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

25. ಕೆ.ವಿ. ಪುಟ್ಟಪ್ಪ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ನರನೊಳಗೆ ನಾರಾಯಣ ರೂಪು ಕಂಡು
ತಿರೆಯೊಳಗೆ ಸುರಪುರದ ಮೈಸಿರಿಯನುಂಡು
ಪರಹಿತಕೆ ಬಳಲುತಿರಲದುವೆ ಜೀವನವು
ಪೆರತೇನನೆಸಗಿದರು ನಮಗೆ ಲಾಂಛನವು

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

27. ಕಾಡಿನ ತುಂಬಾ ಪ್ರೀತಿಯ ಹೊಳೆ ಕೋಡಿಯಂತೆ ಹರಿಯಿತು.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1x3=3**

28. ಕೈ ಕೆಸರಾದರೆ ಬಾಯಿ ಮೊಸರು

ಅಥವಾ

ಪೆನ್ನು ಖಡ್ಗಕ್ಕಿಂತ ಹರಿತ

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ.
30. ಅವನು ಬಂದರೆ ಕರೆದುಕೊಂಡು ಹೋಗು ತಾಯಿ
31. ನೀವೆ ಕಾಫಿ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ.
32. ವೇದಾಂತವನೋದಿ ಫಲವೇನಯ್ಯ
33. ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಕಡೆಗೆ ಹಾಯವು ______________________
______________________________
______________________________
______________________ನಮೋಯೆಂದ.

ಅಥವಾ

ಎಂದೊಡರ್ಜುನ ______________________
______________________________
______________________________
______________________ಬಿಟ್ಟಮಂಡೆಯಲಿ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕಂಡು ಬಂದ ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

ಅಥವಾ

'ಬೋಧಿವೃಕ್ಷದ ಹಾಡು' ಪದ್ಯದಲ್ಲಿರುವ ಜೀವನ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ನಮ್ಮ ಶರೀರದ ಎಲ್ಲಾ ಅಂಗಾಂಗಗಳನ್ನು ನಿರ್ದೇಶೀಸುವ, ಎಲ್ಲಾ ಕಾರ್ಯಚಟುವಟಿಕೆಗಳನ್ನು ರೂಪಿಸುವ ಹಾಗೂ ನಮ್ಮ ಮನಸ್ಸಿನ ಕ್ರಿಯೆಗಳಾದ ಆಲೋಚನೆ, ಭಾವನೆ, ಸಂವಹನ, ಸಂವೇದನೆ, ಕಲಿಕೆಯ ನೆನಪು, ಬುದ್ಧಿವಂತಿಕೆ, ನೈತಿಕ ಮೌಲ್ಯಗಳನ್ನು ನಿರ್ವಹಿಸುವ ಪರಮೋಚ್ಚ ವ್ಯವಸ್ಥೆಯೇ ಮಿದುಳು ಮತ್ತು ನರಮಮಂಡಲ. ಸುಮಾರು ಒಂದು ಕಾಲು ಕಿಲೋ ಗ್ರಾಂ ತೂಗುವ ಮಿದುಳು ನಮ್ಮ ತಲೆ ಬುರುಡೆಯೊಳಗೆ ಸುರಕ್ಷಿತವಾಗಿ ಕುಳಿತಿದೆ. ದೊಡ್ಡ ಮಿದುಳು, ಸಣ್ಣ ಮಿದುಳು, ಮಿದುಳು ಕಾಂಡ, ಮಿದುಳು ಬಳ್ಳಿ, ಹನ್ನೆರಡು ಜೊತೆ ತಲೆನರಗಳು, ಮಿದುಳ ಬಳ್ಳಿಯಿಂದ ಕತ್ತು, ಬೆನ್ನು ಸೊಂಟದಿಂದ ಹೊರಡುವ ಮುವತ್ತೊಂದು ಜೊತೆ ಬೆನ್ನು ನರಗಳು ಸೇರಿ ಮಾಡಲ್ಪಟ್ಟ ಈ ವ್ಯವಸ್ಥೆಯ ರಚನೆ ಮತ್ತು ಕಾರ್ಯವೈಖರಿ ಅದ್ಭುತ ಮತ್ತು ಅಪೂರ್ವ. ಜೀವಾಂಕುರವಾಗಿ, ಮೂರನೇ ವಾರದ ಕೊನೆಯ ವೇಳೆಗೆ, ಒಂದು ಲಕ್ಷ ಜೀವಕೋಶಗಳುಳ್ಳ ನರತಟ್ಟೆಯನ್ನು ಗುರುತಿಸಬಹುದು. ಇದು ಒಂದು ಕೊಳವೆಯಾಗಿ ಮಾರ್ಪಟ್ಟು, ಪ್ರತಿ ನಿಮಿಷ ಎರಡುವರೆ ಲಕ್ಷ ಜೀವಕೋಶಗಳ ಸೇರ್ಪಡೆಯಾಗುತ್ತಾ ಮಿದುಳಿನ ವಿವಿಧ ಭಾಗಗಳು ರೂಪುಗೊಳ್ಳುತ್ತವೆ. ನರಕೋಶಗಳ ಜೊತೆ ಜೊತೆಗೆ ಮಿದುಳಿನ ಗಾತ್ರಕ್ಕೆ ತಮ್ಮ ಕೊಡುಗೆಯನ್ನು ನೀಡುವ ಗ್ಲೇಯಲ್ ಜೀವಕೋಶಗಳ ಸಂಖ್ಯಾಭಿವೃದ್ಧಿಯು ಆಗತೊಡಗುತ್ತದೆ.

36. ಅ) ಜೀವರಾಶಿಯ ಮಿದುಳಿನ ವಿವಿಧ ಭಾಗಗಳು ಹೇಗೆ ರೂಪುಗೊಳ್ಳುತ್ತವೆ?
    ಆ) ಮಿದುಳು ಮತ್ತು ನರಮಂಡಲದ ವ್ಯವಸ್ಥೆ ಹೇಗೆ ರೂಪುಗೊಂಡಿದೆ?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಸಂಪರ್ಕ ಮಾಧ್ಯಮ ಉಪಯೋಗ–ದುಷ್ಪರಿಣಾಮ

ಅಥವಾ

ರಾಷ್ಟ್ರೀಯ ಏಕತೆ / ಭಾವೈಕ್ಯತೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ಮೋಹನ್' ಎಂದು ಭಾವಿಸಿಕೊಂಡು ಶಾಲೆಯ ಗ್ರಂಥಾಲಯಕ್ಕೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಪುಸ್ತಕಗಳನ್ನು ತರಿಸಿಕೊಡುವಂತೆ ಕೋರಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಿಗೆ ಮನವಿ ಪತ್ರವನ್ನು ಬರೆಯಿರಿ.

ಅಥವಾ

ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ 'ಸ್ವರ್ಣ' ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ತಯಾರಿಯನ್ನು ವಿವರಿಸಿ ತುಮಕೂರಿನ ಗಾಂಧೀನಗರದ ನಿವಾಸಿ ರಾಮಕೃಷ್ಣ ಎಂಬ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ.

*******************

# ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80 ಮಾದರಿ ಪ್ರಶ್ನೋತ್ತರ ಪತ್ರಿಕೆ – 3 ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

**1. 'ಬರ್ತಾನೆ' ಪದದ ಗ್ರಾಂಥಿಕ ರೂಪ.**

ಎ) ಬತ್ತಾನೆ ಬಿ) ಬಂದು ಸಿ) ಬಂದನು **ಡಿ) ಬರುತ್ತಾನೆ**

**2. ಕ್ರಿಯಾಸಮಾಸಕ್ಕೆ ಉದಾಹರಣೆಯಾಗಿರುವ ಪದ.**

ಎ) ಅರಮನೆ ಬಿ) ಹೊಸರಾಗ **ಸಿ) ಗಂಜಿಯುಂಡು** ಡಿ) ಮಧ್ಯರಾತ್ರಿ

**3. 'ಬೈಗು' ಪದವು ನೀಡುವ ಅರ್ಥ.**

ಎ) ಬೇಗ ಬಿ) ಬೆಳಕು **ಸಿ) ಸಂಜೆ** ಡಿ) ಬೆಳಗ್ಗೆ

**4. 'ಸತೀಶನು ಉತ್ತರ ಬರೆದನು' ಈ ವಾಕ್ಯವಿರುವ ಕಾಲ.**

**ಎ) ಭೂತಕಾಲ** ಬಿ) ವರ್ತಮಾನಕಾಲ ಸಿ) ಗುಳಿಕಕಾಲ ಡಿ) ಭವಿಷ್ಯತ್ ಕಾಲ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 12x1=12**

**5. ಇಂದ್ರನಿಗೆ ಮೆಚ್ಚುಗೆಯಾದ ಗಿಳಿಯ ಗಣ ಯಾವುದು?**

ಇಂದ್ರನಿಗೆ ಗಿಳಿಯ ತತ್ವನಿಷ್ಠೆಯ ಗುಣ ಮೆಚ್ಚುಗೆಯಾಯಿತು.

**6. ದೇಶದ ಉದ್ಧಾರ ಯಾರು ಯಾರನ್ನು ಅವಲಂಬಿಸಿದೆ ಎಂದು ಲೇಖಕರು ಹೇಳಿದ್ದಾರೆ?**

ದೇಶದ ಉದ್ಧಾರ ಅಸಿ–ಮಸಿ–ಕೃಷಿಯನ್ನು ಅವಲಂಬಿಸಿದೆ.

**7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?**

ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದುವ ಹಾಗೂ ಅವರ ಅಭಿಲಾಷೆಗೆ ತಕ್ಕಂತೆ ಜ್ಞಾನ ಕೊಡುವ ಶಕ್ತಿ ಇರುತ್ತದೆ.

**8. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?**

ವಿದ್ಯಾರ್ಥಿಗಳು ಕಾಫಿ ಕುಡಿಯಲು ಅತ್ಯಂತ ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

**9. ಲಂಡನ್ ನಲ್ಲಿರುವ ವಿಶ್ವವಿದ್ಯಾಲಯಗಳು ಯಾವುವು?**

ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್.

**10. ಗೋಪಾಲನಿಗೆ ಬಣ್ಣ ಬಣ್ಣದ ಹೂಗಳು ಹೇಗೆ ಕಾಣುತ್ತಿದ್ದವು?**

ಗೋಪಾಲನಿಗೆ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು.

**11. ಸುರರ ಸತಿಯರ ಸ್ಥಾನವನ್ನು ಯಾರು ತುಂಬುತ್ತಾರೆ?**

ಸುರರ ಸತಿಯರ ಸ್ಥಾನವನ್ನು ಅರಮನೆಯ ನಾರಿಯರು ತುಂಬುತ್ತಾರೆ.

**12. ಯುಗಾದಿ ಹಬ್ಬದಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?**

ಯುಗಾದಿಯಲ್ಲಿ ಬೇವು ಬೆಲ್ಲ ಹಂಚುವ ಸಂಪ್ರದಾಯವಿದೆ.

**13. ನೆಲದಮ್ಮ ನವವಧುವಾಗುವುದು ಯಾವಾಗ?**

ಯುಗಾದಿಯ ಸಮಯದಲ್ಲಿ ನೆಲದಮ್ಮ ನವ ವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

**14. ನಮ್ಮ ಕರ್ತವ್ಯಗಳನ್ನು ಹೇಗೆ ಮುಗಿಸಬೇಕೆಂದು ಕವಿ ಸಿ.ಪಿ.ಕೆ ಯವರು ಹೇಳುತ್ತಾರೆ?**

ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಕರಗುವಂತೆ ನಾವು ಸಹ ನಮ್ಮ ಕರ್ತವ್ಯಗಳನ್ನು ಮುಗಿಸಬೇಕೆಂದು ಕವಿ ಹೇಳಿದ್ದಾರೆ.

**15. ಅಡಿಗರು ಹೇಳುವಂತೆ ನಮ್ಮ ದುಡಿಮೆಯ ಹೂವು ಫಲಿಸುವುದು ಯಾವಾಗ?**

ಜೀವನದಲ್ಲಿ ಗುರಿ ಇದ್ದರೆ ನಮ್ಮ ದುಡಿಮೆಯ ಹೂವು ಫಲಿಸುವುದು.

**16. ಕುಣಿಗಲ್ ಕೆರೆ ಹೇಗೆ ತುಂಬಿದೆ?**

ಕುಣಿಗಲ್ ಕೆರೆ ನಿಂಬೆಯ ಹಣ್ಣಿನಂತೆ ತುಂಬಿದೆ.

**III. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17. ಇಂದ್ರನ ಬಳಿ ಗಿಳಿಯು ಕೇಳಿದ ವರ ಯಾವುದಾಗಿತ್ತು?**

ಗಿಳಿಯು ಇಂದ್ರನನ್ನು "ದೇವರಾಜ, ನಾನು ವಾಸವಾಗಿರುವ ಈ ಮರವು ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳನ್ನು ಕೊಡುವ ಮರವನ್ನಾಗಿ ಮಾಡು" ಎಂದು ವರವನ್ನು ಕೇಳಿತು.

**18. ನಮ್ಮ ದೇಶದ ರಕ್ಷಣಾ ಪಡೆ ಪ್ರಬಲವಾಗಿರಬೇಕು ಏಕೆ?**

ಸೈನಿಕರು ಪ್ರಬಲರಾಗಿದ್ದರೆ ಮಾತ್ರ ದೇಶದ ರಕ್ಷಣೆ ಮಾಡಲು ಸಾಧ್ಯ, ಇಲ್ಲದಿದ್ದರೆ ಶಕ್ತಿಶಾಲಿ ದೇಶ ನಮ್ಮನ್ನು ಹೊಡೆದು ಹಾಕಿ ಗುಲಾಮರನ್ನಾಗಿ ಮಾಡಿಕೊಳ್ಳುತ್ತದೆ. ಆದುದರಿಂದ ನಮ್ಮ ದೇಶದ ರಕ್ಷಣಾ ಪಡೆ ಪ್ರಬಲವಾಗಿರಬೇಕು.

**19. ಗುರುಗಳು ಸುಖ ಜೀವನದ ಪಾಠವನ್ನು ವಿದ್ಯಾರ್ಥಿಗಳಿಗೆ ಹೇಗೆ ಹೇಳಿದರು?**

'ಭಗವಂತ ನಮಗೆ ಜೀವನ ಎನ್ನುವ ಕಾಫೀ ಕೊಟ್ಟಿದ್ದಾನೆ, ಕಪ್ಪುಗಳನ್ನಲ್ಲ. ಆದುದರಿಂದ ಕಾಫೀ ಎಂಬ ಜೀವನವನ್ನು ಆಸ್ವಾದಿಸಿ. ಕಪ್ಪುಗಳೆಂಬ ಅಲಂಕಾರಗಳ ಬೆನ್ನತ್ತಿ ಜೀವನವನ್ನು ಮರೆಯಬೇಡಿ. ಸಂತೋಷವಾಗಿರುವವರಿಗೆ ಜೀವನದಲ್ಲಿ ಎಲ್ಲವೂ ಚೆನ್ನಾಗಿರುವುದೇ ಸಿಕ್ಕಿರುವುದಿಲ್ಲ, ಆದರೆ ಸಿಕ್ಕಿರುವುದನ್ನು ಹೇಗೆ ಆಸ್ವಾದಿಸಬೇಕು ಎನ್ನುವುದು ಅವರಿಗೆ ತಿಳಿದಿದೆ ಎಂದು ಹೇಳಿದರು.

**20. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯಗಳೇನು?**

ಲಂಡನ್ನಿನಲ್ಲಿ ಹರಿಯುವ ಥೇಮ್ಸ್ ನದಿಯ ಮೇಲೆ 13 ಬ್ರಿಜ್‌ಗಳಿವೆ. ಅವುಗಳಲ್ಲಿ ಟವರ್ ಬ್ರಿಜ್ ಪ್ರಮುಖವಾದುದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಇದು ಎರಡು ನಿಮಿಷದಲ್ಲಿ ಮೇಲಕ್ಕೆದ್ದು ಹಡಗುಗಳು ಹೋಗಲು ದಾರಿ ಮಾಡಿಕೊಡುತ್ತದೆ. ಇದು ಲಂಡನ್ ಟವರ್ ಬ್ರಿಜ್‌ನ ವಿಶೇಷತೆ.

**21. ಸದ್ದು ಮಾಡದೆ ಬಾಳಬೇಕು ಎಂಬುದನ್ನು ಕವಿ ನೀಡಿರುವ ಹೋಲಿಕೆಗಳಾವುವು?**

ಸದ್ದು ಮಾಡದೆ ಬಾಳಬೇಕು ಎಂಬುದಕ್ಕೆ ಕವಿ ತಟ್ಟೆಯಲ್ಲಿ ಕರ್ಪೂರ ಮೌನವಾಗಿ ಕರಗುವ, ದೀಪದ ಎದುರು ತಿಮಿರ ಸದ್ದು ಮಾಡದೆ ಸರಿಯುವ, ರವಿ ಕಿರಣಕೆ ಇಬ್ಬನಿ ಕರಗಿ ನೀರಾಗುವ ಹೋಲಿಕೆಗಳನ್ನು ನೀಡಿದ್ದಾರೆ.

**22. ಕುಣಿಗಲ್ ಕೆರೆಯಲ್ಲಿ ಬಾಳೆಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?**

ಕೃಷಿಕರ ಉಪಕಸುಬು ಮೀನುಗಾರಿಕೆ, ಅದು ಅವರ ಬದುಕಿಗೆ ಊರುಗೋಲು. ಕುಣಿಗಲ್ ಕೆರೆಯಲ್ಲಿ ಮೀನು ಹಿಡಿಯುವಾಗ ಬಲೆಯಲ್ಲಿ ಸಿಲುಕಿಕೊಂಡ ಬಾಳೆ ಮೀನುಗಳು ವಿಲವಿಲನೆ ಒದ್ದಾಡುತ್ತವೆ. ಮೀನುಗಳ ಒದ್ದಾಟದ ಪರಿಯನ್ನು ಬೊಬ್ಬೆ ಹೊಡೆಯುತ್ತವೆ ಎನ್ನಲಾಗಿದೆ.

**23. ಭೀಮನಾಯಕನು ವೈದ್ಯರ ವಸ್ತುಗಳನ್ನು ಏಕೆ ಹಿಂದಿರುಗಿಸಿದನು?**

ಒಮ್ಮೆ ಕಳ್ಳರ ಗುರು ಭೀಮನಾಯಕನ ಮಗ ಜ್ವರದಿಂದ ಬಳಲುತಿದ್ದಾಗ ವೈದ್ಯರು ಚಿಕಿತ್ಸೆ ನೀಡಿ ಭೀಮನಾಯಕನ ಮಗನ ಪ್ರಾಣ ಉಳಿಸಿದ್ದರು. ಇದರಿಂದ ಮನಃ ಪರಿವರ್ತನೆಗೊಂಡ ಭೀಮನಾಯಕನು ವೈದ್ಯರ ಮನೆಯಲ್ಲಿ ಕದ್ದಿದ್ದ ಎಲ್ಲ ವಸ್ತುಗಳನ್ನು ಹಿಂದಿರುಗಿಸಿದನು.

**24. 'ಹೊಂಗೆ ಬೇವುಗಳ ಹಾಡು' ಕವಿತೆಯಲ್ಲಿ ಕವಯಿತ್ರಿಗೆ ಯಾವ ಬಗೆಯ ಅಳುಕು ಇದೆ?**

ನಾಗರೀಕತೆಯ ಬೆಳವಣಿಗೆಯ ಬಗ್ಗೆ ಕವಯಿತ್ರಿಯು, ನಗರವು ಎಲ್ಲವನ್ನು ತಿಂದು ತೇಗುತ್ತಿದೆ, ನಗರದಲ್ಲಿ ಬಗೆ ಬಗೆಯ ಕಾರುಗಳ, ಮೋಟಾರುಗಳ ಓಡಾಟವಿದೆ, ವಿಮಾನಗಳ ಹಾರಾಟವಿದೆ. ಇದರಿಂದಾಗಿ ಇಂಧನ, ಹಕ್ಕಿ–ಪಕ್ಷಿಗಳು, ಹಸಿರು ಕಾಡುಗಳು ನಾಶವಾಗುತ್ತಿವೆ. ನಾಳೆಯ ಬಗ್ಗೆ ಭಯ ಅಳುಕು ಕಾಡುತ್ತಿದೆ ಎಂದು ಕವಯಿತ್ರಿ ಹೇಳಿದ್ದಾರೆ.

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 1x3=3**

**25. ಕೆ.ವಿ. ಪುಟ್ಟಪ್ಪ**

ಕುವೆಂಪು ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು 1904ರಲ್ಲಿ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು. ಇವರು ನವಿಲು, ಪಕ್ಷಿಕಾಶಿ, ಬೆರಳ್‌ಗೆ ಕೊರಳ್, ಶೂದ್ರತಪಸ್ವಿ, ಜಲಗಾರ, ನನ್ನ ಗೋಪಾಲ ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ರಾಷ್ಟ್ರಕವಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಪಂಪ ಪ್ರಶಸ್ತಿ ಇನ್ನೂ ಮುಂತಾದ ಪ್ರಶಸ್ತಿಗಳು ದೊರೆತಿವೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ. 1x3=3**

26. ನರನೊಳಗೆ ನಾರಾಯಣ ರೂಪು ಕಂಡು

ತಿರೆಯೊಳಗೆ ಸುರಪುರದ ಮೈಸಿರಿಯನುಂಡು

ಪರಹಿತಕೆ ಬಳಲುತಿರಲದುವೆ ಜೀವನವು

ಪೆರತೇನನೆಸಗಿದರು ನಮಗೆ ಲಾಂಛನವು

**ಸಾರಾಂಶ :** ಈ ಪದ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಪುಸ್ತಕದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ. ಪ್ರತಿಯೊಬ್ಬರ ಜೀವನಕ್ಕೊಂದು ಗುರಿ ಇರಬೇಕು. ಆ ಗುರಿ ಸಾಧನೆಯಲ್ಲಿ ತೊಡಗಿದಾಗ ಕಷ್ಟಗಳು ಎದುರಾಗುತ್ತವೆ. ಅದನ್ನು ಧೈರ್ಯದಿಂದ ಎದುರಿಸಿ ಮುನ್ನಡೆಯಬೇಕು, ಮನುಷ್ಯರಲ್ಲಿ ನಾರಾಯಣನ ರೂಪ ಕಾಣಬೇಕು. ಇರುವಾಗಲೆ ಭೂಮಿಯೊಳಗೆ ಸ್ವರ್ಗ ಸುಖವನ್ನು ಅನುಭವಿಸಬಿಡಬೇಕು, ಸ್ವಹಿತದೊಂದಿಗೆ ಬೇರೆಯವರ ಹಿತವನ್ನು ಬಯಸಬೇಕು. ಆಗಲೇ ಜೀವನ ಸಮೃದ್ಧವಾಗುತ್ತದೆ, ಅದನ್ನು ಹೊರತುಪಡಿಸಿ ಬೇರೆ ಯಾವುದೇ ಕೇಡು ಬಯಸಿದರೂ ನಮಗೆ ಅಪಕೀರ್ತಿಯು ಬರುತ್ತದೆಂದು ಕವಿ ಈ ಪದ್ಯದಲ್ಲಿ ಹೇಳಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1x3=3**

**27. ಕಾಡಿನ ತುಂಬಾ ಪ್ರೀತಿಯ ಹೊಳೆ ಕೋಡಿಯಂತೆ ಹರಿಯಿತು.**

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.

ಉಪಮೇಯ : ಕಾಡಿನ ಪ್ರೀತಿ

ಉಪಮಾನ : ಹೊಳೆಯ ಕೋಡಿ

ಉಪಮಾವಾಚಕ : ಅಂತೆ

ಸಮಾನಧರ್ಮ : ಹರಿಯುವಿಕೆ.

ಸಮನ್ವಯ : ಇಲ್ಲಿ 'ಕಾಡಿನ ಪ್ರೀತಿ' ಎಂಬ ಉಪಮೇಯವನ್ನು 'ಹೊಳೆಯ ಕೋಡಿ' ಎಂಬ ಉಪಮಾನದಿಂದ 'ಹರಿಯುವಿಕೆ' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

**28. ಕೈ ಕೆಸರಾದರೆ ಬಾಯಿ ಮೊಸರು**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು. ಗಾದೆಗಳು ಜನಪದರ ಅನುಭವದ ನುಡಿಗಳು. ಕನ್ನಡದ ಪ್ರಮುಖ ಗಾದೆಗಳಲ್ಲಿ ಈ ಗಾದೆ ಪ್ರಮುಖವಾದುದು.

ಇದೊಂದು ಜನಪ್ರಿಯ ಗಾದೆ 'ಕಷ್ಟಪಟ್ಟರೆ ಫಲವುಂಟು' 'ಆಳಾಗಿದುಡಿ, ಅರಸನಾಗಿ ಉಣ್ಣು' ಎನ್ನುವ ಗಾದೆಗಳು ಈ ಗಾದೆಗೆ ಪರ್ಯಾಯ ಗಾದೆಗಳಾಗಿವೆ. ಪ್ರತಿಯೊಬ್ಬರೂ ದುಡಿದು ತಿನ್ನಬೇಕು. ಏಕೆಂದರೆ ಬದುಕು ಸಾರ್ಥಕವಾಗುವುದು ದುಡಿಮೆಯಿಂದ. 'ಕಾಯಕವೇ ಕೈಲಾಸ' ಎಂಬ ಮಾತಿನಂತೆ ಕೆಲಸದಲ್ಲಿ ಭಗವಂತನನ್ನು ಕಾಣಬೇಕು. ಮನಸ್ಸು ಮಾಡಿದರೆ ಯಾವ ಕೆಲಸವನ್ನಾದರೂ ಮಾಡಬಹುದು. ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಯಾವ ಕೆಲಸವೂ ಆಗದು. ರೈತರು ಕಷ್ಟಪಟ್ಟು ಬೆವರು ಸುರಿಸಿ ಬೆಳೆ ಬೆಳೆದರೆ ಮಾತ್ರ ನಾವೆಲ್ಲರೂ ಕುಳಿತು ತಿನ್ನಬಹುದು. ಕೈ ಕೆಸರಾದರೆ ಮಾತ್ರ ಬಾಯಿ ಮೊಸರಾಗುವುದು.

**ಅಥವಾ**

**ಪೆನ್ನು ಖಡ್ಗಕ್ಕಿಂತ ಹರಿತ**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು. ಗಾದೆಗಳು ಜನಪದರ ಅನುಭವದ ನುಡಿಗಳು. ಕನ್ನಡದ ಪ್ರಮುಖ ಗಾದೆಗಳಲ್ಲಿ ಈ ಗಾದೆ ಪ್ರಮುಖವಾದುದು.

ಪೆನ್ನು ಖಡ್ಗಕ್ಕಿಂತ ಹರಿತವಾದುದು, ಏಕೆಂದರೆ ಖಡ್ಗದಿಂದ ಸಾಧಿಸಲು ಸಾಧ್ಯವಾಗದ್ದನ್ನು ಪೆನ್ನಿನ ಮೂಲಕ ಸಾಧಿಸಬಹುದು. ಪತ್ರಿಕೆಯ ಒಂದು ಲೇಖನ, ಕಾದಂಬರಿ, ಕತೆ, ಕವನ ಹಲವರ ಬದುಕನ್ನು ಬದಲಾಯಿಸಬಲ್ಲದು. ಒಂದು ಸರ್ಕಾರವನ್ನು ಉರುಳಿಸಿ ಮತ್ತೊಂದು ಸರ್ಕಾರವನ್ನು ತರಬಲ್ಲದು. ಹೀಗಾಗಿ ಪೆನ್ನು ಖಡ್ಗಕ್ಕಿಂತ ಹರಿತವಾಗಿದೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5x3=15**

**29. 'ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ'.**

ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಯವರು ಬರೆದಿರುವ 'ಜೀವಜಾಲ' ಎಂಬ ಪುಸ್ತಕದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ. ಹಕ್ಕಿಗಳು ಕೀಟ, ಉರಗ, ಮತ್ತು ಸಸ್ತನಿಗಳಂತೆ ಸುಂದರವಾಗಿ ಗೂಡು ಕಟ್ಟುತ್ತವೆ. ಹಕ್ಕಿಗಳ ಗೂಡಿನಲ್ಲಿ ಅನೇಕ ವಸ್ತುಗಳ ಸಮನ್ವಯತೆ ಇರುತ್ತದೆ. ಅವು ಸಿಮೆಂಟ್, ಗಾರೆಯಂಥಹ ವಸ್ತುಗಳಿಗಿಂತಲೂ

ಭಿನ್ನವಾದ ವಸ್ತುಗಳನ್ನು ಬಳಸುತ್ತವೆ, ಒಳಗೋಡೆಯನ್ನು ಪ್ಲಾಸ್ಟರ್ ಮಾಡುತ್ತವೆ ಎಂದು ಹೇಳುವಾಗ ಲೇಖಕರು "ಇಲ್ಲಿ ವಾಸ್ತುಶಿಲ್ಪಿಯ ಕಲ್ಪನೆ ಸಾಕಾರಗೊಳ್ಳುತ್ತದೆ" ಎಂದು ಹೇಳಿದ್ದಾರೆ.

**30. 'ಅವನು ಬಂದರೆ ಕರೆದುಕೊಂಡು ಹೋಗು ತಾಯಿ'**

ಈ ವಾಕ್ಯವನ್ನು ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ರವರು ಬರೆದಿರುವ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಪಂಚಾಕ್ಷರಿ ಗವಾಯಿಗಳು ಪುಟ್ಟರಾಜರ ತಾಯಿ ಸಿದ್ಧಮ್ಮಳಿಗೆ ಹೇಳುತ್ತಾರೆ. ಪಂಚಾಕ್ಷರಿ ಗವಾಯಿಗಳ ಸಂಚಾರಿ ಸಂಗೀತ ಪಾಠಶಾಲೆ ಹೊಳೆ ಆಲೂರಿಗೆ ಬಂದಾಗ ಮಗನನ್ನು ಕಾಣಲು ಬಂದ ತಾಯಿ ಗುರುಗಳಲ್ಲಿ ಮಗನನ್ನು ಮನೆಗೆ ಕಳುಹಿಸಿ ಕೊಡುವಂತೆ ಕೇಳಿಕೊಳ್ಳುತ್ತಾಳೆ. ಆಗ ಗುರುಗಳು "ಅವನು ಬಂದರೆ ಕರೆದುಕೊಂಡು ಹೋಗಿ" ಎನ್ನುತ್ತಾರೆ.

**31. 'ನೀವೆ ಕಾಫಿ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ'.**

ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಎಂಬ ಪುಸ್ತಕದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಹಿರಿಯ ವಿದ್ಯಾರ್ಥಿಗಳು ಹೆಡ್ ಮಾಸ್ತರರ ಮನೆಗೆ ಬಂದು ತಮ್ಮ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವ ಸಂದರ್ಭದಲ್ಲಿ ಹೆಡ್ ಮಾಸ್ತರರು ವಿದ್ಯಾರ್ಥಿಗಳಿಗೆ ಕಾಫೀ ಮಾಡಿಕೊಂಡು ಬಂದು ನೀವೆ ಕಾಫಿ ಹಾಕಿಕೊಳ್ಳಿ, ಆಮೇಲೆ ಕುಳಿತು ಮಾತನಾಡೋಣ ಎಂದು ಹೇಳಿದರು.

**32. 'ವೇದಾಂತವನೋದಿ ಫಲವೇನಯ್ಯ'**

ಈ ವಾಕ್ಯವನ್ನು ಸೊನ್ನಲಿಗೆ ಸಿದ್ದರಾಮನವರ ವಚನಗಳಿಂದ ಆರಿಸಲಾಗಿದೆ.

ಈ ಮಾತನ್ನು ಸೊನ್ನಲಿಗೆ ಸಿದ್ಧರಾಮ ಹೇಳಿದ್ದಾರೆ. ವೇಷದಂತೆ ಆಚರಣೆ ಇರಬೇಕು, ವೇದಾಂತವನು ಓದಿದವನು ಬ್ರಹ್ಮನಂತೆ ಇರಬೇಕು ಎಂದು ಹೇಳುವಾಗ ಸೊನ್ನಲಿಗೆ ಸಿದ್ದರಾಮ ವೇದಾಂತವನೋದಿ ಫಲವೇನಯ್ಯಾ ಎಂದು ಹೇಳಿದ್ದಾರೆ.

**33. 'ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು'**

ಈ ವಾಕ್ಯವನ್ನು ಸಿ.ಪಿ.ಕೆ ಯವರು ಬರೆದಿರುವ 'ಬೊಗಸೆ' ಎಂಬ ಪುಸ್ತಕದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿಗಳು ಹೇಳುತ್ತಾರೆ. ಪೂಜೆ ಹಾಗು ಇತರೆ ಪವಿತ್ರವಾದ ಕಾರ್ಯಗಳಲ್ಲಿ ಕರ್ಪೂರವನ್ನು ಬಳಸುತ್ತಾರೆ. ಕರ್ಪೂರವು ತಟ್ಟೆಯೊಳಗೆ ಮೌನವಾಗಿ ಕರಗುತ್ತದೆ. ಸದ್ದು ಗದ್ದಲವಿಲ್ಲದೆ ಬೆಳಗಿ ತನ್ನ ಕೆಲಸವನ್ನು ಪೂರೈಸುತ್ತದೆ. ಮಾನವನು ಸಹ ಕರ್ಪೂರದಂತೆ ಸದ್ದು ಗದ್ದಲವಿಲ್ಲದೆ ತನ್ನ ಕೆಲಸವನ್ನು ಪೂರೈಸಿ ಗುರಿ ಸೇರಬೇಕು. ಎಂದು ಹೇಳುವಾಗ ಕವಿಗಳು ಶಾಂತಿಯಲಿ ಬದುಕಿ ನೀ ಕರ್ತವ್ಯವನು ಮುಗಿಸು ಎಂದು ಹೇಳುತ್ತಾರೆ.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

34. ಕಡೆಗೆ ಹಾಯವು ಕಂಗಳೀ ಬಲ

ಗಡಲ ಮನವೀಸಾಡಲಾರದು

ವೊಡಲುವಿಡಿದಿರಲೇನ ಕಾಣಲು ಬಾರದದ್ಭುತವ

ಪೊಡವಿಯೀದುದೊ ಮೋಹರವನಿದ

ರೊಡನೆ ಕಾದುವನಾವನಾತನೆ

ಮೃಡನು ಶಿವಶಿವ ಕಾದಿಗೆಲಿದೆವು ಬಲಕೆ ನಮೋಯೆಂದ.

ಅಥವಾ

ಎಂದೊಡರ್ಜುನ ನಗುತ ರಥವನು
ಮುಂದೆ ನಾಲ್ಕೆಂಟಡಿಯ ನೂಕಲು
ಕೊಂದನೀ ಸಾರಥಿಯೆನುತ ಸಂವರಿಸಿ ಮುಂಜೆರಗ
ಬಂದು ಮೆಲ್ಲನೆ ರಥದ ಹಿಂದಕೆ
ನಿಂದು ಧುಮ್ಮಿಕ್ಕಿದನು ಬದುಕಿದೆ
ನೆಂದು ನಿಟ್ಟೋಟದಲಿ ಹಾಯ್ದನು ಬಿಟ್ಟಮಂಡೆಯಲಿ.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1x4=4**

**35. ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿ ಕಂಡು ಬಂದ ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.**

ಸಿದ್ಧಾರ್ಥನು ಬುದ್ಧನಾದ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಮರವು ಬಳ್ಳಿಯ ಹೂವನ್ನು ಮುಡಿದು ಅಪ್ಪಿಕೊಂಡಂತೆ ನಗುತ್ತಿತ್ತು. ಹಕ್ಕಿಯು ಸುಂದರವಾಗಿ ಹಾರಾಡುತ್ತಿತ್ತು. ಇರುವೆಗಳು ಹುತ್ತದಿಂದ ಹೊರಬಂದು ಗುಂಪಾಗಿ ಸಾಲುಗಟ್ಟಿ ನಡೆಯುತ್ತಿತ್ತು. ಬೆಳ್ಳಕ್ಕಿಯು ಸಾಲಾಗಿ ಬಾನಿಗೆ ಏಣಿಯನ್ನು ಹಾಕುವಂತೆ ಹಾರಿದವು. ಕಾಡ ತುಂಬ ಪ್ರೀತಿಯ ಹೊಳೆಯು ಕ್ವರೆಯ ಕೋಡಿ ಹರಿಯುವಂತೆ ಕಾಣುತ್ತಿತ್ತು. ಗೂಡಿನಲ್ಲಿ ಹೊಸರಾಗ ಕೇಳಿ ಬಂದಿತು. ದುಂಬಿಯು ಮಕರಂದ ಸವಿಯನ್ನು ಸವಿಯಲೆಂದೆ ಹೂವಿನಿಂದ ಹೂವಿಗೆ ಹಾರುತ್ತಿತ್ತು. ಎಲ್ಲಾ ಗಿಡಗಳು ಒಂದನ್ನೊಂದು ಅಪ್ಪಿಕೊಂಡು ಕುಣಿಯುವಂತೆ ಕಂಡಿತು. ಎಂದು ಕವಿ ಪ್ರಕೃತಿಯು ಕಂಡುಬಂದ ರೀತಿಯನ್ನು ವರ್ಣಿಸಿದ್ದಾರೆ.

**ಅಥವಾ**

**'ಬೋಧಿವೃಕ್ಷದ ಹಾಡು' ಪದ್ಯದಲ್ಲಿರುವ ಜೀವನ ಮೌಲ್ಯಗಳನ್ನು ಕವಿಯ ಆಶಯದೊಂದಿಗೆ ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಜಗತ್ತಿನ ಸಕಲ ಚರಾಚರಗಳಲ್ಲಿ ಮಾನವನ ಜೀವನ ಅತ್ಯಂತ ಶ್ರೇಷ್ಠವಾದುದು. ಮಾನವನ ಜೀವನ ಸಾರ್ಥಕತೆ ಪಡೆಯಬೇಕಾದರೆ ಮೊದಲು ತನ್ನನ್ನು ತಾನು ಅರಿತುಕೊಳ್ಳಬೇಕು. ಆತ್ಮಸಾಕ್ಷಾತ್ಕಾರ ಹೊಂದಬೇಕು. ನಂತರ ಸಮಾಜದ ಅಂಕುಡೊಂಕುಗಳನ್ನು ತಿದ್ದುವ, ಜನರ ದುಃಖವನ್ನು ಪರಿಹರಿಸುವ ದಿಕ್ಕಿನಲ್ಲಿ ಜೀವನವನ್ನು ಮುಡುಪಾಗಿರಿಸಬೇಕು. ಈ ರೀತಿ ಬಾಳಿಬದುಕಿದವರಲ್ಲಿ ಗೌತಮಬುದ್ಧನು ಒಬ್ಬನು. ಲೌಖಿಕ ಸುಖಭೋಗಗಳಿಂದ ಜೀವನದ ಗುರಿ ಸಾಧಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತ ಬುದ್ಧನು ಗೃಹಸ್ಥ ಜೀವನವನ್ನು ತ್ಯಜಿಸಿ, ಬದುಕಿನ ಸತ್ಯ ಕಾಣಲು ಕಾಡನ್ನು ಅಲೆದು, ಬೋಧಿವೃಕ್ಷದ ಕೆಳಗೆ ತಪಸ್ಸನ್ನು ಆಚರಿಸಿ, ಮಹಾಜ್ಞಾನಿಯಾಗಿ, ಜೀವನ ಪ್ರೀತಿಯತ್ತ ಸಾಗಿದ ರೀತಿಯೇ ಕವನದ ತಿರುಳಾಗಿದೆ. ಬುದ್ಧನಂತೆಯೇ ಪ್ರತಿಯೊಬ್ಬರೂ ತನ್ನ ತಾನು ಅರಿಯುವುದರೊಂದಿಗೆ ಬದುಕಿನ ನಿಜವಾದ ಅರ್ಥ ತಿಳಿದು, ಜೀವನ ಮೌಲ್ಯಗಳನ್ನು ರೂಢಿಸಿಕೊಂಡು, ಸಮಾಜದಲ್ಲಿ ಒಂದಾಗಿ ಬಾಳಬೇಕು.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ನಮ್ಮ ಶರೀರದ ಎಲ್ಲಾ ಅಂಗಾಂಗಗಳನ್ನು ನಿರ್ದೇಶಿಸುವ, ಎಲ್ಲಾ ಕಾರ್ಯ ಚಟುವಟಿಕೆಗಳನ್ನು ರೂಪಿಸುವ ಹಾಗೂ ನಮ್ಮ ಮನಸ್ಸಿನ ಕ್ರಿಯೆಗಳಾದ ಆಲೋಚನೆ, ಭಾವನೆ, ಸಂವಹನ, ಸಂವೇದನೆ, ಕಲಿಕೆಯ ನೆನಪು, ಬುದ್ಧಿವಂತಿಕೆ, ನೈತಿಕ ಮೌಲ್ಯಗಳನ್ನು ನಿರ್ವಹಿಸುವ ಪರಮೋಚ್ಚ ವ್ಯವಸ್ಥೆಯೇ ಮಿದುಳು ಮತ್ತು ನರಮಮಂಡಲ. ಸುಮಾರು ಒಂದು ಕಾಲು ಕಿಲೋ ಗ್ರಾಂ ತೂಗುವ ಮಿದುಳು ನಮ್ಮ ತಲೆ ಬುರುಡೆಯೊಳಗೆ ಸುರಕ್ಷಿತವಾಗಿ ಕುಳಿತಿದೆ. ದೊಡ್ಡ ಮಿದುಳು, ಸಣ್ಣ ಮಿದುಳು, ಮಿದುಳು ಕಾಂಡ, ಮಿದುಳು ಬಳ್ಳಿ, ಹನ್ನೆರಡು ಜೊತೆ ತಲೆನರಗಳು, ಮಿದುಳ ಬಳ್ಳಿಯಿಂದ ಕತ್ತು, ಬೆನ್ನು ಸೊಂಟದಿಂದ ಕೊರಡುವ ಮುವತ್ತೊಂದು ಜೊತೆ ಬೆನ್ನು ನರಗಳು ಸೇರಿ ಮಾಡಲ್ಪಟ್ಟ ಈ ವ್ಯವಸ್ಥೆಯ ರಚನೆ ಮತ್ತು ಕಾರ್ಯವೈಖರಿ ಅದ್ಭುತ ಮತ್ತು ಅಪೂರ್ವ. ಜೀವಾಂಕುರವಾಗಿ, ಮೂರನೇ ವಾರದ ಕೊನೆಯ ವೇಳೆಗೆ, ಒಂದು ಲಕ್ಷ ಜೀವಕೋಶಗಳುಳ್ಳ ನರತಟ್ಟೆಯನ್ನು ಗುರುತಿಸಬಹುದು. ಇದು ಒಂದು ಕೊಳವೆಯಾಗಿ ಮಾರ್ಪಟ್ಟು, ಪ್ರತಿ ನಿಮಿಷ ಎರಡುವರೆ ಲಕ್ಷ ಜೀವಕೋಶಗಳ ಸೇರ್ಪಡೆಯಾಗುತ್ತಾ ಮಿದುಳಿನ ವಿವಿಧ ಭಾಗಗಳು ರೂಪುಗೊಳ್ಳುತ್ತವೆ. ನರಕೋಶಗಳ ಜೊತೆ ಜೊತೆಗೆ ಮಿದುಳಿನ ಗಾತ್ರಕ್ಕೆ ತಮ್ಮ ಕೊಡುಗೆಯನ್ನು ನೀಡುವ ಗ್ಲೇಯಲ್ ಜೀವಕೋಶಗಳ ಸಂಖ್ಯಾಭಿವೃದ್ಧಿಯು ಆಗತೊಡಗುತ್ತದೆ.

**36. ಅ) ಜೀವರಾಶಿಯ ಮಿದುಳಿನ ವಿವಿಧ ಭಾಗಗಳು ಹೇಗೆ ರೂಪುಗೊಳ್ಳುತ್ತವೆ?**

ಸುಮಾರು ಒಂದು ಕಾಲು ಕಿಲೋ ಗ್ರಾಂ ತೂಗುವ ಮಿದುಳು ನಮ್ಮ ತಲೆ ಬುರುಡೆಯೊಳಗೆ ಸುರಕ್ಷಿತವಾಗಿ ಕುಳಿತಿದೆ. ದೊಡ್ಡ ಮಿದುಳು, ಸಣ್ಣ ಮಿದುಳು, ಮಿದುಳು ಕಾಂಡ, ಮಿದುಳು ಬಳ್ಳಿ, ಹನ್ನೆರಡು ಜೊತೆ ತಲೆನರಗಳು, ಮಿದುಳ ಬಳ್ಳಿಯಿಂದ ಕತ್ತು, ಬೆನ್ನು ಸೊಂಟದಿಂದ ಕೊರಡುವ ಮುವತ್ತೊಂದು ಜೊತೆ ಬೆನ್ನು ನರಗಳು ಸೇರಿ ಮಾಡಲ್ಪಟ್ಟ ಈ ವ್ಯವಸ್ಥೆಯ ರಚನೆ ಮತ್ತು ಕಾರ್ಯವೈಖರಿ ಅದ್ಭುತ ಮತ್ತು ಅಪೂರ್ವ. ಜೀವಾಂಕುರವಾಗಿ, ಮೂರನೇ ವಾರದ ಕೊನೆಯ ವೇಳೆಗೆ, ಒಂದು ಲಕ್ಷ ಜೀವಕೋಶಗಳುಳ್ಳ ನರತಟ್ಟೆಯನ್ನು ಗುರುತಿಸಬಹುದು. ಇದು ಒಂದು ಕೊಳವೆಯಾಗಿ ಮಾರ್ಪಟ್ಟು, ಪ್ರತಿ ನಿಮಿಷ ಎರಡುವರೆ ಲಕ್ಷ ಜೀವಕೋಶಗಳ ಸೇರ್ಪಡೆಯಾಗುತ್ತಾ ಮಿದುಳಿನ ವಿವಿಧ ಭಾಗಗಳು ರೂಪುಗೊಳ್ಳುತ್ತವೆ.

**ಆ) ಮಿದುಳು ಮತ್ತು ನರಮಂಡಲದ ವ್ಯವಸ್ಥೆ ಹೇಗೆ ರೂಪುಗೊಂಡಿದೆ?**

ನಮ್ಮ ಶರೀರದ ಎಲ್ಲಾ ಅಂಗಾಂಗಗಳನ್ನು ನಿರ್ದೇಶಿಸುವ, ಎಲ್ಲಾ ಕಾರ್ಯ ಚಟುವಟಿಕೆಗಳನ್ನು ರೂಪಿಸುವ ಹಾಗೂ ನಮ್ಮ ಮನಸ್ಸಿನ ಕ್ರಿಯೆಗಳಾದ ಆಲೋಚನೆ, ಭಾವನೆ, ಸಂವಹನ, ಸಂವೇದನೆ, ಕಲಿಕೆಯ ನೆನಪು, ಬುದ್ಧಿವಂತಿಕೆ, ನೈತಿಕ ಮೌಲ್ಯಗಳನ್ನು ನಿರ್ವಹಿಸುವ ಪರಮೋಚ್ಚ ವ್ಯವಸ್ಥೆಯೇ ಮಿದುಳು ಮತ್ತು ನರಮಮಂಡಲ.

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

**37. ಸಂಪರ್ಕ ಮಾಧ್ಯಮ ಉಪಯೋಗ–ದುಷ್ಪರಿಣಾಮ**

**ಪೀಠಿಕೆ:** ಹಿಂದೆ ಒಬ್ಬರನ್ನು ಮತ್ತೊಬ್ಬರು ಸಂಪರ್ಕಿಸಬೇಕಾದರೆ ಬಹಳ ಕಷ್ಟವಾಗುತ್ತಿತ್ತು. ಒಳ್ಳೆಯದಾಗಲಿ, ಕೆಟ್ಟದ್ದಾಗಲಿ ಸುದ್ದಿ ಕಳುಹಿಸಬೇಕಾದರೆ ಯಾರ ಮೂಲಕವಾದರು ಹೇಳಿ ಕಳುಹಿಸಬೇಕಿತ್ತು. ಸ್ವಲ್ಪ ಕಾಲದ ನಂತರ ಅಂಚೆ ಇಲಾಖೆ ಅಸ್ತಿತ್ವಕ್ಕೆ ಬಂತು. ಟೆಲಿಗ್ರಾಂ ಮೂಲಕ ಜನರಿಗೆ ಸುದ್ದಿ ತಲುಪುತ್ತಿತ್ತು.

**ವಿಷಯ ನಿರೂಪಣೆ:** ಟಿ.ವಿ, ಮೊಬೈಲ್, ಇಮೇಲ್, ಟೆಲಿಫೋನ್, ದಿನಪತ್ರಿಕೆಗಳು, ರೇಡಿಯೋ ಮೊದಲಾದ ಸಂಪರ್ಕ ಸಾಧನಗಳು ಕ್ಷಣಮಾತ್ರದಲ್ಲಿ ಸುದ್ದಿ ಹರಡುತ್ತವೆ. ದೇಶದಿಂದ ದೇಶಕ್ಕೆ ಸುದ್ದಿ ಕಳುಹಿಸುವ ಮತ್ತು ಪಡೆಯುವ ವ್ಯವಸ್ಥೆ ಇವುಗಳಿಂದ ಸಾಧ್ಯವಾಗಿದೆ. ಮೊಬೈಲ್‌ನಿಂದ ಕ್ಷಣಾರ್ಧದಲ್ಲಿ ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ವಿಚಾರ ವಿನಿಮಯ ಮಾಡಿಕೊಳ್ಳಬಹುದು. ಫೋಟೋಕೂಡ ತೆಗೆದುಕೊಳ್ಳಬಹುದು. ಪ್ರತಿಯೊಂದು ವಸ್ತುವಿನಲ್ಲಿ ಕೆಟ್ಟದ್ದು ಒಳ್ಳೆಯದು ಎರಡು ಇರುತ್ತದೆ. ಮೊಬೈಲ್ ಎಷ್ಟು ಉಪಯುಕ್ತವೋ ಅಷ್ಟೆ ಕೆಟ್ಟದ್ದು. ಅಶ್ಲೀಲ ಚಿತ್ರಗಳು, ಅಸಭ್ಯ ಸುದ್ದಿ, ಅಶ್ಲೀಲ ನಗೆಹನಿಗಳು ಇತ್ಯಾದಿ ಮನಸ್ಸಿನ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ. ಜನರಲ್ಲಿ ವಿರಸ, ದ್ವೇಷ ಬೆಳೆಯಲು ಕಾರಣವಾಗಿದೆ. ಹಾಗಾಗಿ ದುಷ್ಟರಿಂದ ಹೇಗೆ ದೂರವಿರಬೇಕೋ ಹಾಗೆಯೇ ಕೆಟ್ಟ ಆಲೋಚನೆ ಬೆಳೆಸುವ ವಸ್ತುಗಳಿಂದ ನಾವು ದೂರವಿರಬೇಕು.

**ಉಪಸಂಹಾರ:** ಮೊಬೈಲ್ ಸಂಪರ್ಕ ಸಾಧನಗಳಲ್ಲಿ ಜನಪ್ರಿಯವೂ, ಅಗತ್ಯವೂ ಆಗಿದೆ. ಆದರೆ ಅದನ್ನು ಒಳ್ಳೆಯ ಕೆಲಸಗಳಿಗೆ ಮಾತ್ರ ಬಳಸಿ ನೆಮ್ಮದಿಯಿಂದ ಬಾಳಬೇಕು ಅಷ್ಟೆ ಎಂಬುದನ್ನು ಯುವಜನತೆಗೆ ತಿಳಿಸಬೇಕಾದ ಜವಾಬ್ದಾರಿ ನಮ್ಮ ಮೇಲಿದೆ ಎಂಬುದನ್ನು ನಾವು ಮರೆಯುವಂತಿಲ್ಲ.

**ಅಥವಾ**

**ರಾಷ್ಟ್ರೀಯ ಏಕತೆ / ಭಾವೈಕ್ಯತೆ**

**ಪೀಠಿಕೆ:** ವಿವಿಧತೆ ಏಕತೆಯನ್ನು ಹೊಂದಿರುವ ದೇಶ ನಮ್ಮ ಭಾರತ. ನಾವೆಲ್ಲರೂ ಒಂದೇ ಎಂಬ ಏಕತಾ ಭಾವನೆಯೇ ರಾಷ್ಟ್ರೀಯ ಭಾವೈಕ್ಯತೆ. ಜಾತಿ, ಮತ, ಭಾಷೆ, ಉಡುಗೆ ಬೇರೆ ಬೇರೆ ಆಗಿದ್ದರೂ ನಾವೆಲ್ಲ ಭಾರತಾಂಬೆಯ ಮಕ್ಕಳು ಎಂಬುದನ್ನು ಎಂದಿಗೂ ಮರೆಯಬಾರದು. ದೇಶದ ಒಳಿತಿಗಾಗಿ ಒಟ್ಟಾಗಿ ಶ್ರಮಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು.

**ವಿಷಯ ನಿರೂಪಣೆ:** ನಮ್ಮ ದೇಶವನ್ನು ಅನೇಕ ವರ್ಷಗಳ ಕಾಲ ಬ್ರಿಟಿಷರು ಆಳ್ವಿಕೆ ಮಾಡಿದರು. ಬ್ರಿಟಿಷರಿಂದ ಸ್ವತಂತ್ರ ಪಡೆಯಲು ಅನೇಕ ಮಹನೀಯರಾದ ಮಹಾತ್ಮಗಾಂಧಿ, ಲಾಲಲಜಪತರಾಯ್, ಸುಭಾಷ್‌ಚಂದ್ರಬೋಸ್, ಸರ್ದಾರ್ ವಲ್ಲಭ ಬಾಯ್ ಪಟೇಲ್ ಮುಂತಾದವರು ತಮ್ಮ ಪ್ರಾಣವನ್ನೇ ಮುಡಿಪಾಗಿಟ್ಟು ಹೋರಾಡಿದರು. ಅಂತಹ ಮಹಾನ್ ವ್ಯಕ್ತಿಗಳ ದೇಶಭಕ್ತಿಯ ಬಗ್ಗೆ ತಿಳಿಯಬೇಕು. ಭಾರತೀಯರಾದ ನಾವೆಲ್ಲರೂ ದ್ವೇಷ, ಅಸೂಯೆಗಳನ್ನು ಮರೆತು ಸ್ನೇಹಭಾವದಿಂದ ಇದ್ದರೆ ದೇಶದ ಜನರೆಲ್ಲರೂ ನೆಮ್ಮದಿಯಿಂದ ಇರಬಹುದು.'ರಾಷ್ಟ್ರೀಯ ಹಬ್ಬಗಳ ಆಚರಣೆ ದೇಶದ ಭಾವೈಕ್ಯತೆಯ ಸಂಕೇತ.' ಸ್ವತಂತ್ರ ದಿನಾಚರಣೆ, ಗಣರಾಜ್ಯೋತ್ಸವಗಳಂತಹ ರಾಷ್ಟ್ರೀಯ ಹಬ್ಬಗಳನ್ನು ಒಟ್ಟಾಗಿ ಆಚರಿಸಿದಾಗ ದೇಶದ ಬಗ್ಗೆ ಪ್ರೀತಿ,

ಅಭಿಮಾನ, ಏಕತೆಯ ಭಾವ ಮೂಡುತ್ತದೆ. ಕ್ರೀಡಾ ಸ್ಪರ್ಧೆಗಳು ಜನರಲ್ಲಿ ಭಾವೈಕ್ಯತೆಯನ್ನು ಬೆಳೆಸುತ್ತದೆ. ಬೇರೆಬೇರೆ ರಾಜ್ಯದ ಜನರೆಲ್ಲ ಒಟ್ಟಾಗಿ ಕ್ರೀಡೆಗಳಲ್ಲಿ ಪಾಲ್ಗೊಂಡಾಗ 'ನಾವೆಲ್ಲರೂ ಒಂದೇ' ಎಂಬ ಭಾವನೆ ಮೂಡುತ್ತದೆ.

**ಉಪಸಂಹಾರ:** ಭಾರತೀಯರೆಲ್ಲರೂ ಭೇದ ಭಾವವಿಲ್ಲದೆ ಒಂದಾಗಿ ರಾಷ್ಟ್ರದ ಏಳಿಗೆಗಾಗಿ ಶ್ರಮಿಸುವ ಏಕತಾ ಮನೋಭಾವನೆ' ಬೆಳೆಸಿಕೊಳ್ಳಬೇಕು. ಅನೇಕತೆಯಲ್ಲಿ ಏಕತೆಯನ್ನು ಸಾಧಿಸುವುದು ನಮ್ಮ ದೇಶದ ಮೂಲ ಮಂತ್ರವಾಗಬೇಕು. ನಮ್ಮ ಆಂತರಿಕ ಕಲಹವನ್ನು ಮರೆತು ದೇಶದ ಪ್ರಗತಿಗೆ ನಾವು ದುಡಿಯಬೇಕು. ಆಗ ಮಾತ್ರ ಈ ಮಣ್ಣಿನ ಋಣವನ್ನು ತೀರಿಸಲು ಸಾಧ್ಯವಾಗುತ್ತದೆ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

**38. ನಿಮ್ಮನ್ನು ಬೀದರಿನ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿ 'ಮೋಹನ್' ಎಂದು ಭಾವಿಸಿಕೊಂಡು 10ನೇ ತರಗತಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕಲ್ಪಿಸಿಕೊಡುವಂತೆ ಕೋರಿ ಶಿಕ್ಷಣ ಸಚಿವರಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.**

**ಇವರಿಂದ** **ದಿನಾಂಕ : 01–01–2024**

ಮೋಹನ್

ಸರ್ಕಾರಿ ಪ್ರೌಢಶಾಲೆ

ಬೀದರ್

**ಇವರಿಗೆ**

ಶಿಕ್ಷಣ ಸಚಿವರು

ಶಿಕ್ಷಣ ಇಲಾಖೆ

ಬೆಂಗಳೂರು

**ಮಾನ್ಯರೇ,**

**ವಿಷಯ : ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು ಕಲ್ಪಿಸಿಕೊಡುವಂತೆ ಕೋರಿ.**

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ಇತ್ತೀಚೆಗೆ ನಡೆದ ಎಸ್ ಎಸ್ ಎಲ್ ಸಿ ಮುಖ್ಯ ಪರೀಕ್ಷೆಯಲ್ಲಿ ಸುಮಾರು ಮುವತ್ತು ವಿದ್ಯಾರ್ಥಿಗಳು ಶೇಕಡ 95ಕ್ಕಿಂತ ಹೆಚ್ಚಿನ ಅಂಕಗಳನ್ನು ಪಡೆದು ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿದ್ದಾರೆ. ಇವರೆಲ್ಲರೂ ಪ್ರತಿಭಾವಂತ ವಿದ್ಯಾರ್ಥಿಗಳಾಗಿದ್ದು ಮನೆಯಲ್ಲಿ ಬಡತನ ಸ್ಥಿತಿ ಇರುವ ಕಾರಣ ಮುಂದಿನ ವಿದ್ಯಾಭ್ಯಾಸ ನಡೆಸಲು ಸಾಧ್ಯವಾಗುತ್ತಿಲ್ಲ. ಈ ಕಾರಣ ತಾವು ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಹೆಚ್ಚಿನ ವಿದ್ಯಾಭ್ಯಾಸ ಕೈಗೊಳ್ಳಲು ಅನುಕೂಲವಾಗುವಂತೆ ವಿದ್ಯಾರ್ಥಿ ವೇತನವನ್ನು ಕಲ್ಪಿಸಿಕೊಡುವಂತೆ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ.

**ತಮ್ಮ ವಿಶ್ವಾಸಿ**

**ಮೋಹನ್**

**ಅಥವಾ**

**<u>ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ 'ಸ್ವರ್ಣ' ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ತಯಾರಿಯನ್ನು ವಿವರಿಸಿ ತುಮಕೂರಿನ ಗಾಂಧೀನಗರದ ನಿವಾಸಿಯಾದ ರಾಮಕೃಷ್ಣ ಎಂಬ ನಿಮ್ಮ ತಂದೆಗೆ ಒಂದು ಪತ್ರ ಬರೆಯಿರಿ.</u>**

**ಕ್ಷೇಮ** **ಶ್ರೀ** **ದಿನಾಂಕ : 01–01–2024**

**ಸ್ವರ್ಣ**

**ಸರ್ಕಾರಿ ಪ್ರೌಢಶಾಲೆ**

**ಮೈಸೂರು**

ತೀರ್ಥರೂಪುರವರಿಗೆ ನಿಮ್ಮ ಮಗಳು ಸ್ವರ್ಣ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ ನೀವು ಸಹ ಆರೋಗ್ಯವಾಗಿದ್ದೀರ ಎಂದು ಭಾವಿಸುತ್ತೇನೆ. ನನ್ನ ವಿದ್ಯಾಭ್ಯಾಸವು ಉತ್ತಮವಾಗಿ ನಡೆಯುತ್ತಿದ್ದು ಶಾಲೆಯಲ್ಲಿ ನಡೆದ ನಾಲ್ಕು ರೂಪಣಾತ್ಮಕ ಮೌಲ್ಯಮಾಪನ ಸಾಧನ ಪರೀಕ್ಷೆಯಲ್ಲಿ ಗರಿಷ್ಠ ಅಂಕಗಳನ್ನು ಪಡೆದಿದ್ದೇನೆ. ಮುಂಬರುವ ಪೂರ್ವಭಾವಿ ಹಾಗೂ ಮುಖ್ಯ ಪರೀಕ್ಷೆಗಳಿಗೆ ಸರ್ವ ರೀತಿಯಲ್ಲೂ ಸಿದ್ದವಾಗುತ್ತಿದ್ದೇನೆ. ತರಗತಿಯಲ್ಲಿ ಗುರುಗಳು ಹೇಳಿರುವ ಮುಖ್ಯ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡಿದ್ದೇನೆ. ತರಗತಿಯಲ್ಲಿ ಸ್ನೇಹಿತರೊಂದಿಗೆ ಜೊತೆಗೂಡಿ ಗುಂಪು ಚರ್ಚೆಯಲ್ಲಿ ತೊಡಗಿ ಉತ್ತರಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಿದ್ದೇವೆ. ಪರೀಕ್ಷಾ ವೇಳಾಪಟ್ಟಿಯು ಪ್ರಕಟವಾಗಿದ್ದು ಗುರುಗಳ ಸಲಹೆಯಂತೆ ಅಧ್ಯಯನ ವೇಳಾಪಟ್ಟಿಯನ್ನು ಮಾಡಿಕೊಂಡಿದ್ದೇನೆ. ಈ ಬಾರಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗುತ್ತೇನೆ. ಮನೆಯವರೆಲ್ಲರ ಬಗ್ಗೆ ಒಂದು ಪತ್ರವನ್ನು ಬರೆದು ಕಳುಹಿಸಿ.

**ಇಂತಿ ನಿಮ್ಮ ಮಗಳು**

**ಸ್ವರ್ಣ**

**ರವರಿಗೆ**

ರಾಮಕೃಷ್ಣ
5ನೇ ಅಡ್ಡ ರಸ್ತೆ
ಗಾಧೀನಗರ
ತುಮಕೂರು

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80 ಮಾದರಿ ಪ್ರಶ್ನೆ ಪತ್ರಿಕೆ – 4 ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

1. ಕೆಳಗಿನವುಗಳಲ್ಲಿ ದ್ವಿರುಕ್ತಿ ಪದವಿದು.

ಅ) ಮೊಟ್ಟಮೊದಲು ಆ) ಕಾಡುಮೇಡು ಇ) ಕಿಲಕಿಲ ಈ) ಬೆನ್ತಟ್ಟು

2. 'ವಿದ್ಯಾರ್ಥಿ' ಪದದ ಅನ್ಯಲಿಂಗ ರೂಪವಿದು.

ಅ) ವಿದ್ಯಾರ್ಥಿಗಳು ಆ) ವಿದ್ಯಾರ್ಥಿಗೆ ಇ) ವಿದ್ಯಾರ್ಥಿನಿ ಈ) ವಿದ್ಯಾರ್ಥಿಯರು

3. 'ಬವಣೆ' ಪದಕ್ಕೆ ಅರ್ಥವಿದು.

ಅ) ಬಣವೆ ಆ) ಒಣಗಿ ಇ) ಮಂದಾರ ಈ) ಕಷ್ಟ

4. 'ಮೂವತ್ತು, ನಲವತ್ತು' ಪದಗಳು ನಾಮಪದದ ಈ ಪ್ರಕಾರಕ್ಕೆ ಉದಾಹರಣೆ.

ಅ) ಸಂಖ್ಯಾವಾಚಕ ಆ) ನಾಮವಾಚಕ ಇ) ವಸ್ತು ವಾಚಕ ಈ) ಗುಣವಾಚಕ

**II.ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 12 x1=12**

5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು ?
6. ಈ ನಾಡಿನ ಬೆನ್ನೆಲಬು ಯಾರು ?
7. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು ?
8. ಹಕ್ಕಿಗಳು ಗೂಡುಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು ?
9. ಅಸ್ಪೃಶ್ಯತೆ ಆಚರಿಸುವ ಮನುಷ್ಯನಿಗೆ ಹಕ್ಕಿಗಳು ಯಾವ ಪಾಠ ಹೇಳುತ್ತವೆ ?
10. ಬನದ ಗೋಪಾಲ ಯಾರು ?ಕಾಡಿನಲ್ಲಿ ಅವನ ಕೆಲಸವೇನು ?
11. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?
12. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು ?
13. ತಿಮಿರಕ್ಕೆ ವೈರಿ ಯಾವುದು ?
14. ಅಡಿಗರು ಹಗಲಿರಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ ?
15. ಕುಣಿಗಲ್ ಕೆರೆಯಲ್ಲಿ ಎಂತಹ ಮೀನುಗಳಿದ್ದವು ?
16. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು ?

**III.ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x2=16**

17. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು ?
18. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು ?
19. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು ?
20. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು ?
21. ಗೋಪಾಲನು ಹೂಬನದ ಸೊಗಸನ್ನು ಯಾವರೀತಿ ವರ್ಣಿಸಿದನು ?
22. ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ ?
23. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು ?
24. ಬದುಕ ಬದುವ ಬೇಲಿ ಯಾವ ರೀತಿ ಇದೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1 x3=3**

25. ಎಂ. ಗೋಪಾಲಕೃಷ್ಣ ಅಡಿಗ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 x3=3**

26. ಹಸಿ ಸೌದೆ ಬುಸುಗುಟ್ಟಿ ಧನಿತನೆತ್ತುವುದಲ್ತೆ
ಕಿಡಿಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವ ವಿಬ್ಬನಿವೊಲಿರು
ಸಿಡುಕು ಮಿಡುಕನು ತೊರೆದು ಮೌನಿಯಾಗು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

27. ಸೀತೆಯ ಮುಖ ಕಮಲದಂತೆ ಅರಳಿತು.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1x3=3**

28. ದೇಶ ಸುತ್ತು: ಕೋಶ ಓದು.

ಅಥವಾ

ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ ?
30. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು.
31. ನೀರ ಕಂಡಲ್ಲಿ ಮುಳುಗುವರಯ್ಯ
32. ಪರಹಿತಕ್ಕೆ ಬಳಲುತ್ತಿರಲು ಅದುವೇ ಜೀವನವು.
33. ಎಮ್ಮರಮನೆಯ ನಾರಿಯರೆ ಸಾಕು.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಕೊರಡ ಕೊನರಿಸಿ ______________________
______________________
______________________
______________________ ಮತ್ತೇರಿದೆ.

ಅಥವಾ

ಯುಗದ ಹಿಂದಿನ ______________________
______________________
______________________
______________________ ಸವಿಚೈತ್ರವು

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ತಾಯಿ ಸಿದ್ಧಮ್ಮ ಮತ್ತು ಪುಟ್ಟಯ್ಯರ ನಡುವೆ ನಡೆದ ಸಂಭಾಷಣೆ ಸ್ವಾರಸ್ಯವನ್ನು ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 2x2=4**

ರಾತ್ರಿ ಕತ್ತಲಾಯಿತು. ಕತ್ತಲಲ್ಲಿ ಹಾಗೇ ಕುಳಿತಿದ್ದ. ಬೆಳಕಾದಾಗ ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿತುಂಬಿ ಕುಡಿದ. ಆ ನೀರಿಗೆಆತನತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಡಿಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರಧನಿಯಲ್ಲಿತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯಛಾಯೆಯೇಕಾಣುತ್ತಿತ್ತು. ಹೀಗೆ ಆ ರಾಜಕುಮಾರತನ್ನ ಸುತ್ತ ಮುತ್ತತನ್ನತಾಯಿಯರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ. ಆ ವೇಳೆಗೆ ಮತ್ತೆಕತ್ತಲಾಯಿತು. ಮಲಗಿಬಿಟ್ಟನು. ಕನಸಿನಲ್ಲಿ ತಾಯಿ ಬಂದು ಹೀಗೆಂದಳು. 'ಭರತಕುಮಾರ, ನಾನು ಈ ನೆಲದಲ್ಲಿಅಡಗಿ ಹೋಗಿದ್ದೇನೆ, ನೀರಿನಲ್ಲಿಕರಗಿ ಹೋಗಿದ್ದೇನೆ, ನಿನ್ನರೋದನವನ್ನು ಕೇಳಿ ಕೇಳಿ, ಕೊರಗಿಕೊರಗಿ, ಇಲ್ಲೇಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ'. ಬೆಳಗಾಗಿ ಎದ್ದುರಾಜಕುಮಾರ ಆ ತನ್ನ ನೆಲವನ್ನೇತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತ ಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. ಅವನ ಜನವೆಲ್ಲ ಹಾಗೆ ಕರೆದರು, ಆ ಹಿಂದಿನ ಕಾಲದಲ್ಲಿ.

36. ಅ) ರಾಜಕುಮಾರ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನು ಹೇಗೆ ಕಂಡುಕೊಂಡ?

ಆ) ಭರತನ ತಾಯಿ ಕನಸ್ಸಿನಲ್ಲಿ ಬಂದು ಏನೆಂದು ಹೇಳಿದಳು?

**XII. ಕೆಳಗಿನ ಯಾವುದಾದರೂಒಂದು ವಿಷಯವನ್ನುಕುರಿತು ಪ್ರಬಂಧ ಬರೆಯಿರಿ. 1x4=4**

37. ಸ್ವಚ್ಛ ಭಾರತ ಅಭಿಯಾನ

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ಅರುಣ'ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ ಅರಣ್ಯಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ತುಮಕೂರಿನ 'ರಚನಾ' ಎಂದು ಭಾವಿಸಿಕೊಂಡು ಕೊರೋನಾ ಸಾಂಕ್ರಾಮಿಕ ರೋಗದಿಂದಾದ ಅನಾಹುತಗಳನ್ನು ವಿವರಿಸಿ ಚಿತ್ರದುರ್ಗದಲ್ಲಿರುವ ನಿಮ್ಮ ಗೆಳತಿ 'ರಮಾ' ಗೆ ಒಂದು ಪತ್ರ ಬರೆಯಿರಿ.

********************

# ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80 ಮಾದರಿ ಪ್ರಶ್ನೋತ್ತರಪತ್ರಿಕೆ – 4 ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

**1. ಕೆಳಗಿನವುಗಳಲ್ಲಿ ದ್ವಿರುಕ್ತಿ ಪದವಿದು.**

**ಅ) ಮೊಟ್ಟಮೊದಲು** ಆ) ಕಾಡುಮೇಡು ಇ) ಕಿಲಕಿಲ ಈ) ಬೆನ್ತಟ್ಟು

**2. 'ವಿದ್ಯಾರ್ಥಿ' ಪದದ ಅನ್ಯಲಿಂಗ ರೂಪವಿದು.**

ಅ) ವಿದ್ಯಾರ್ಥಿಗಳು ಆ) ವಿದ್ಯಾರ್ಥಿಗೆ **ಇ) ವಿದ್ಯಾರ್ಥಿನಿ** ಈ) ವಿದ್ಯಾರ್ಥಿಯರು

**3. 'ಬವಣೆ' ಪದಕ್ಕೆ ಅರ್ಥವಿದು.**

ಅ) ಬಣವೆ ಆ) ಒಣಗಿ ಇ) ಮಂದಾರ **ಈ) ಕಷ್ಟ**

**4. 'ಮೂವತ್ತು, ನಲವತ್ತು' ಪದಗಳು ನಾಮಪದದ ಈ ಪ್ರಕಾರಕ್ಕೆ ಉದಾಹರಣೆ.**

**ಅ) ಸಂಖ್ಯಾವಾಚಕ** ಆ) ನಾಮವಾಚಕ ಇ) ವಸ್ತುವಾಚಕ ಈ) ಗುಣವಾಚಕ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 12 x1=12**

**5. ಇಂದ್ರನು ತನಗಾದ ಸಂತೋಷವನ್ನು ಯಾವ ರೀತಿ ಪ್ರಕಟಿಸಿದನು?**

ಗಿಳಿಗೆ ವರವನ್ನು ಕೊಡುವ ಮೂಲಕ ಇಂದ್ರನು ತನಗಾದ ಸಂತೋಷವನ್ನು ಪ್ರಕಟಿಸಿದನು.

**6. ಈ ನಾಡಿನ ಬೆನ್ನೆಲುಬು ಯಾರು?**

ಈ ನಾಡಿನ ಬೆನ್ನೆಲುಬು ರೈತ.

**7. ತಾಯಿ ಸಿದ್ಧಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ಏನೆಂದು ಬೇಡಿಕೊಂಡಳು?**

ತಾಯಿ ಸಿದ್ದಮ್ಮ ಪಂಚಾಕ್ಷರಿ ಗವಾಯಿಗಳಲ್ಲಿ ತಮ್ಮ ಮಗ ಪುಟ್ಟರಾಜನನ್ನು ಮನೆಗೆ ಕಳುಹಿಸಿ ಕೊಡುವಂತೆ ಬೇಡಿಕೊಂಡರು.

**8. ಹಕ್ಕಿಗಳು ಗೂಡುಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳಾವುವು?**

ಹಕ್ಕಿಯ ದೇಹ ಸ್ವರೂಪ, ಪರಿಸರದ ವೈಲಕ್ಷಣಗಳು, ಬಲಿ ಬೇಟೆಗಳ ಸಂಬಂಧಗಳು ಇವು ಹಕ್ಕಿಗಳು ಗೂಡು ಕಟ್ಟುವ ಸಾಮರ್ಥ್ಯಕ್ಕೆ ಮಿತಿಯೊಡ್ಡುವ ಅಂಶಗಳು.

**9. ಗುರುಗಳು ಯಾವುದನ್ನು ದುರ್ದೈವದ ಸಂಗತಿ ಎಂದು ಬಣ್ಣಿಸಿದ್ದಾರೆ?**

ಕಾಫೀಗಿಂತ ಕಾಫಿಯ ಕಪ್ಪಿಗೆ ಜನರು ಹೆಚ್ಚು ಮಹತ್ವ ಕೊಡುತ್ತಿರುವುದು ದುರ್ದೈವದ ಸಂಗತಿ ಎಂದು ಗುರುಗಳು ಬಣ್ಣಿಸಿದ್ದಾರೆ.

**10. ಬನದ ಗೋಪಾಲ ಯಾರು? ಕಾಡಿನಲ್ಲಿ ಅವನ ಕೆಲಸವೇನು?**

ಬನದ ಗೋಪಾಲ ಭಗವಾನ್ ಶ್ರೀ ಕೃಷ್ಣ. ಕಾಡಿನಲ್ಲಿ ದನ ಕಾಯುವುದು ಅವನ ಕೆಲಸ.

**11. ಅರ್ಜುನನು ಯಾರನ್ನು ನಾಡನರಿ ಎಂದು ಕರೆದಿದ್ದಾನೆ?**

ಅರ್ಜುನನು ಉತ್ತರನನ್ನು ನಾಡನರಿ ಎಂದು ಕರೆದಿದ್ದಾನೆ.

**12. ಸಿದ್ಧಾರ್ಥನು ಕಂಡುಕೊಂಡ ಬದುಕಿನ ಗೂಡಾರ್ಥವೇನು?**

ಸಿದ್ಧಾರ್ಥನು ತಪಸ್ಸಿಗಿಂತ ಜೀವನ ಪ್ರೀತಿ ದೊಡ್ಡದು ಎಂಬ ಬದುಕಿನ ಗೂಡಾರ್ಥವನ್ನು ಕಂಡುಕೊಂಡನು.

**13. ತಿಮಿರಕ್ಕೆ ವೈರಿ ಯಾವುದು?**

ತಿಮಿರಕ್ಕೆ ವೈರಿ ದೀಪ.

**14. ಅಡಿಗರು ಹಗಲಿರಳು ಯಾವುದಕ್ಕೆ ಹೋರಾಡಬೇಕೆಂದು ಹೇಳುತ್ತಾರೆ?**

ಅಡಿಗರು ಹಗಲಿರುಳು ಒಂದು ಹೆಗ್ಗುರಿಗಾಗಿ ಹೋರಾಡಬೇಕು ಎಂದಿದ್ದಾರೆ.

**15. ಕುಣಿಗಲ್ ಕೆರೆಯಲ್ಲಿ ಎಂತಹ ಮೀನುಗಳಿದ್ದವು?**

ಕುಣಿಗಲ್ ಕೆರೆಯಲ್ಲಿ ಬಾಳೆ ಮೀನುಗಳಿದ್ದವು.

**16. ಧನವಿದ್ದವರಲ್ಲಿ ಇರಬೇಕಾದ ಗುಣ ಯಾವುದು?**

ಧನವಿದ್ದವರಲ್ಲಿ ಇರಬೇಕಾದ ಗುಣ ದಯೆ.

**III.ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 8 x2=16**

**17. ಗಿಳಿಯು ಇಂದ್ರನನ್ನು ಯಾವ ವರ ಕೇಳಿತು?**

ಗಿಳಿಯು ಇಂದ್ರನನ್ನು "ದೇವರಾಜ, ನಾನು ವಾಸವಾಗಿರುವ ಈ ಮರವು ಮೊದಲಿನಂತೆ ಹಸಿರಿನಿಂದ ನಳನಳಿಸುವ, ಫಲಪುಷ್ಪ ಭಾರದಿಂದ ಬೀಗುವ, ನೆರಳನ್ನು ಕೊಡುವ ಮರವನ್ನಾಗಿ ಮಾಡು" ಎಂದು ವರವನ್ನು ಕೇಳಿತು.

**18. ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?**

1. ನಿಸರ್ಗದ ಜೊತೆ ಹೋರಾಟ
2. ಸಕಾಲದಲ್ಲಿ ಮಳೆ ಬಾರದಿರುವುದು
3. ಉತ್ತಮ ಬೀಜ ಸಿಗದಿರುವುದು
4. ಭೂಮಿ ಬರಡಾಗುವುದು
5. ಕ್ರಿಮಿಕೀಟಗಳ ಹಾವಳಿ
6. ಬೆಳೆಗೆ ಸರಿಯಾದ ಬೆಲೆ ಸಿಗದಿರುವುದು, ಇವು ರೈತರು ಎದುರಿಸುತ್ತಿರುವ ಸಮಸ್ಯೆಗಳು.

**19. ಹಕ್ಕಿಗಳು ಗೂಡನ್ನು ಎಲ್ಲೆಲ್ಲಿ ಕಟ್ಟಬಲ್ಲವು?**

ಹಕ್ಕಿಗಳು ತಮಗಿರುವ ಹಾರಾಟದ ಶಕ್ತಿಯಿಂದ ತಮಗೆ ಬೇಕಾದ ಕಡೆ ಗೂಡು ಕಟ್ಟುತ್ತವೆ. ಸಾಗರದ ದ್ವೀಪ, ಗಿರಿ ಶಿಖರದ ನೆತ್ತಿ, ನಿಬಿಡ ವನಶ್ರೇಣಿ, ಕಗ್ಗತ್ತಲ ಕಣಿವೆ, ಶೀತಲ ಧೃವ ಪ್ರದೇಶ ಹೀಗೆ ತಮಗೆ ಇಷ್ಟವಾದ ಕಡೆ ಗೂಡು ಕಟ್ಟಬಲ್ಲವು.

**20. ಬನದ ಗೋಪಾಲನ ವೇಷಭೂಷಣಗಳು ಹೇಗಿದ್ದವು?**

ತಲೆಯ ಮೇಲೆ ಸಣ್ಣ ಕಿರೀಟ, ಕಿರೀಟದಲ್ಲಿ ನವಿಲು ಗರಿ, ಕೈಯಲ್ಲಿ ಕೊಳಲು, ಇವು ಬನದ ಗೋಪಾಲನ ವೇಷಭೂಷಣಗಳಾಗಿದ್ದವು. ಶ್ರೀ ಕೃಷ್ಣ ಪರಮಾತ್ಮನೆ ಬನದ ಗೋಪಾಲ.

**21. ಥೇಮ್ಸ್ ನದಿಯ ಉತ್ತರ ಮತ್ತು ದಕ್ಷಿಣಕ್ಕೆ ಯಾವ ವರ್ಗದ ಜನರು ವಾಸಿಸುತ್ತಾರೆ?**

ಥೇಮ್ಸ್ ನದಿಯ ದಕ್ಷಿಣಕ್ಕೆ ಉದ್ಯಮಗಳು, ಫ್ಯಾಕ್ಟರಿಗಳು, ರಾಜಕಾರಣಿಗಳು ಹೆಚ್ಚಾಗಿ ಇರುತ್ತಾರಂತೆ. ಉತ್ತರಕ್ಕೆ ವ್ಯಾಪಾರಿಗಳು, ಕಡಿಮೆ ಆದಾಯ ಹೊಂದಿರುವವರು ವಾಸಿಸುತ್ತಾರೆ.

**22. ಕಬ್ಬಕ್ಕಿಗಳು ಯಾವಾಗ ಬಾಯಿ ಬಿಡುತ್ತವೆ?**

ಕುಣಿಗಲ್ ಕೆರೆ ತುಂಬಿದಾಗ ನೋಡಲು ಶಿವನು ಬಂದನು. ಆಗ ಜಲಚರಗಳು ಶಿವನನ್ನು ನೋಡಲು ಮೇಲೆದ್ದಾಗ ಜಲಚರಗಳನ್ನು ತಿನ್ನಲು ಕಬ್ಬಕ್ಕಿಗಳು ಹಾತೊರೆಯುತ್ತ ಬಾಯಿ ಬಿಡುತ್ತವೆ.

**23. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?**

ಭೀಮನಾಯಕನು "ಆ ಕಾಣದ ದೇವರು ಇದ್ದಾನೊ ಇಲ್ಲವೋ, ಆದರೆ ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ನಿಮ್ಮ ಉಪಕಾರವನ್ನು ಮರೆಯಲಾರೆ". ಎಂದು ಹೇಳಿ ವೈದ್ಯರಿಗೆ ಕೃತಜ್ಞತೆಗಳನ್ನು ಸಲ್ಲಿಸಿದನು.

**24. ಬದುಕ ಬದುವ ಬೇಲಿ ಯಾವ ರೀತಿ ಇದೆ?**

ಬದುಕಿನ ಬದುವಿನ ಬೇಲಿಯು ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಿನಂತೆ, ಮುದ್ದಾದ ಮಲ್ಲಿಗೆಯಂತೆ ಇದೆ. ತಾಯಿಯಂತೆ ನೆರಳು, ಕರುಳಿನಂತ ಮಡಿಲು ಇದೆ ಎಂದು ಕವಯಿತ್ರಿ ಡಾ.ಹೆಚ್.ಎಲ್. ಪುಷ್ಪ ಬದುಕಿನ ಬದುವ ಬೇಲಿಯ ಬಗ್ಗೆ ಹೇಳಿದ್ದಾರೆ.

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1 x3=3**

**25. ಎಂ. ಗೋಪಾಲಕೃಷ್ಣ ಅಡಿಗ**

ಎಂ. ಗೋಪಾಲಕೃಷ್ಣ ಅಡಿಗ ಅವರು 1918ರಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಮೊಗೇರಿಯಲ್ಲಿ ಜನಿಸಿದರು. ಇವರು ಭಂಡಮದ್ದಳೆ, ಭೂಮಿಗೀತ, ಭಾವತರಂಗ, ಅನಾಥೆ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಪಂಪ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮತ್ತು ಕಬೀರ್ ಸಮ್ಮಾನ್ ಪ್ರಶಸ್ತಿಗಳು ದೊರೆತಿವೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1 x3=3**

26. ಹಸಿ ಸೌದೆ ಬುಸುಗುಟ್ಟಿ ಧನಿತನೆತ್ತುವುದಲ್ತೆ
ಕಿಡಿಸೋಕೆ ಮದ್ದು ಸಿಡಿದಬ್ಬರಿಪುದು
ಅಂತಿರದೆ ರವಿಕರಕೆ ಕರಗುವ ವಿಬ್ಬನಿವೊಲಿರು
ಸಿಡುಕು ಮಿಡುಕನು ತೊರೆದು ಮೌನಿಯಾಗು.

**ಸಾರಾಂಶ :** ಈ ಪದ್ಯವನ್ನು ಕವಿ ಸಿ.ಪಿ. ಕೃಷ್ಣಕುಮಾರ್ ಅವರು ಬರೆದಿರುವ 'ಬೊಗಸೆ' ಎಂಬ ಕವನ ಸಂಕಲನದ 'ಸದ್ದು ಮಾಡದಿರು' ಎಂಬ ಪದ್ಯದಿಂದ ಆರಿಸಲಾಗಿದೆ. ಪದ್ಯಭಾಗದಲ್ಲಿ ಮಾನವ ಸದ್ದುಗದ್ದಲವಿಲ್ಲದೆ ಶಾಂತಿಯಿಂದ ಬದುಕಬೇಕು ಎಂಬುದಕ್ಕೆ ಅನೇಕ ನಿದರ್ಶನಗಳನ್ನು ನೀಡಿದ್ದಾರೆ. ಹಸಿಸೌದೆಯನ್ನು ಬೆಂಕಿಯಲ್ಲಿ ಹಾಕಿದಾಗ ಹೊಗೆಯನ್ನು ಉಗುಳುತ್ತಾ ಬುಸುಗುಟ್ಟಿ ಶಬ್ದ ಮಾಡುತ್ತದೆ. ಪಟಾಕಿಗೆ ಕಿಡಿ ಸೋಕಿದಾಗ ಸಿಡಿದು ಅಬ್ಬರಿಸುತ್ತದೆ, ಮಾನವ ಈ ರೀತಿ ಇರದೆ ರವಿಯ ಕಿರಣಗಳಿಗೆ ಇಬ್ಬನಿಯು ಮೌನವಾಗಿ ಕರಗುವಂತೆ ಸಿಡುಕು ಮಿಡುಕುಗಳನ್ನು ತೊರೆದು ಮೌನವಾಗಿ ಬದುಕನ್ನು ಸಾಗಿಸಬೇಕೆಂದು ಕವಿ ಹೇಳಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1 x3=3**

**27. ಸೀತೆಯ ಮುಖ ಕಮಲದಂತೆ ಅರಳಿತು.**

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.

ಉಪಮೇಯ : ಸೀತೆಯ ಮುಖ

ಉಪಮಾನ : ಕಮಲ

ಉಪಮಾವಾಚಕ : ಅಂತೆ

ಸಮಾನಧರ್ಮ : ಸೀತೆಯ ಮುಖ ಮತ್ತು ಕಮಲ ಅರಳಿರುವುದು

ಸಮನ್ವಯ : ಇಲ್ಲಿ 'ಸೀತೆಯ ಮುಖ' ಎಂಬ ಉಪಮೇಯವನ್ನು 'ಕಮಲ' ಎಂಬ ಉಪಮಾನದಿಂದ 'ಅರಳಿರುವುದು' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VII. ಕೆಳಗೆಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1 x3=3**

**28. ದೇಶ ಸುತ್ತು: ಕೋಶ ಓದು.**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು. ಗಾದೆಗಳು ಜನಪದರ ಅನುಭವದ ನುಡಿಗಳು. ಕನ್ನಡದ ಪ್ರಮುಖ ಗಾದೆಗಳಲ್ಲಿ ಈ ಗಾದೆ ಪ್ರಮುಖವಾದುದು.

ಮನುಷ್ಯ ನಾನಾ ರೀತಿಯಿಂದ ಜ್ಞಾನವನ್ನು ಸಂಪಾದಿಸುತ್ತಾನೆ. ಹಾಗೆಯೇ 'ದೇಶ ಸುತ್ತುವುದರಿಂದ ಕೋಶವನ್ನು ಓದುವುದರಿಂದ' ಜ್ಞಾನಾಭಿವೃದ್ಧಿಯಾಗುತ್ತದೆ. ದೇಶ ವಿದೇಶಗಳಿಗೆ ಹೋಗುವುದರಿಂದ ಅಲ್ಲಿಯ ಆಚಾರ–ವಿಚಾರ, ಸಂಸ್ಕೃತಿ, ಭಾಷೆ, ಊಟ–ಉಪಚಾರ, ವೇಷ–ಭೂಷಣ, ವಾತಾವರಣ ಇತ್ಯಾದಿಗಳನ್ನು ತಿಳಿಯಬಹುದು. ಹಾಗೆಯೇ ವಿವಿಧ ಕೋಶಗಳನ್ನು ಓದಿ ಅವುಗಳಲ್ಲಿರುವ ಹಲವಾರು ಸಂಗತಿಗಳನ್ನು ತಿಳಿದುಕೊಳ್ಳಬಹುದು. ಒಳ್ಳೆಯ ಪುಸ್ತಕಗಳನ್ನು, ಗ್ರಂಥಗಳನ್ನು ಓದುವುದರಿಂದ ಅಪಾರವಾದ ಜ್ಞಾನ ದೊರೆಯುತ್ತದೆ. ಆದ್ದರಿಂದಲೇ "ದೇಶ ಸುತ್ತಬೇಕು ಕೋಶ ಓದಬೇಕು" ಎಂಬ ಹಿರಿಯರ ಮಾತು ಸಾರ್ವಕಾಲಿಕ ಸತ್ಯವಾಗಿದೆ.

**ಅಥವಾ**

**ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು.**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು. ಗಾದೆಗಳು ಜನಪದರ ಅನುಭವದ ನುಡಿಗಳು. ಕನ್ನಡದ ಪ್ರಮುಖ ಗಾದೆಗಳಲ್ಲಿ ಈ ಗಾದೆ ಪ್ರಮುಖವಾದುದು.

ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಯಾರೂ ಬದುಕಲು ಸಾಧ್ಯವಿಲ್ಲ. ಯಾವ ಕಾರ್ಖಾನೆಯಿಂದಲೂ ಟೊಮೊಟೊ, ಅಕ್ಕಿ, ರಾಗಿಯನ್ನು ಬೆಳೆಯಲು ಸಾಧ್ಯವಿಲ್ಲ. ಇದಕ್ಕೆಲ್ಲ ಭೂಮಿಯೇ ಬೇಕು. ರೈತನ ಬೆವರು ಹರಿಯಲೇಬೇಕು. ಹೀಗಾಗಿ ಒಕ್ಕಲಿಗ ಒಕ್ಕದಿರೆ ಜಗವೆಲ್ಲ ಬಿಕ್ಕುವುದು ಎಂದು ನಾಡಿನ ಹಿರಿಯರು ಹೇಳಿದ್ದಾರೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5 x3=15**

**29. 'ಇಂಥ ಒಣಮರದಲ್ಲಿ ಏಕೆ ವಾಸ ಮಾಡುತ್ತಿದ್ದೀಯಾ'?**

ಈ ವಾಕ್ಯವನ್ನು ಅ.ರಾ.ಮಿತ್ರ ರವರು ಬರೆದಿರುವ 'ಮಹಾಭಾರತ ಪಾತ್ರ ಸಂಗತಿಗಳು' ಎಂಬ ಪುಸ್ತಕದ 'ಒಣಮರದ ಗಿಳಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಇಂದ್ರನು ಗಿಳಿಗೆ ಹೇಳುತ್ತಾನೆ. ಸಾಮಾನ್ಯವಾಗಿ ಪಕ್ಷಿಗಳು ಹಸಿರು ಮರಗಳಲ್ಲಿ ವಾಸಿಸುತ್ತವೆ. ಆದರೆ ಈ ಗಿಳಿಯು ಒಣಮರದಲ್ಲಿ ವಾಸವಾಗಿತ್ತು. ಇದನ್ನು ಕಂಡ ಇಂದ್ರನು ಆಶ್ಚರ್ಯದಿಂದ ಇಂಥಾ ಒಣಮರದಲ್ಲಿ ಏಕೆ ವಾಸಮಾಡುತ್ತಿದ್ದೀಯ ಎಂದು ಕೇಳಿದನು.

**30. 'ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು'.**

ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಯವರು ಬರೆದಿರುವ 'ವ್ಯಕ್ತಿತ್ವ' ಪುಸ್ತಕದ 'ಅಸಿ–ಮಸಿ–ಕೃಷಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಸರ್ವಜ್ಞ ಕವಿಯು ಹೇಳಿದ್ದಾರೆ. ಸರ್ವಜ್ಞ ಕವಿಯು ಕೃಷಿಯ ಬಗ್ಗೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕಡೆಗುಂ" ಎಂದಿದ್ದಾರೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು, ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಅರ್ಥ.

**31. ನೀರ ಕಂಡಲ್ಲಿ ಮುಳುಗುವರಯ್ಯ**

ಈ ವಾಕ್ಯವನ್ನು ಬಸವಣ್ಣನವರ 'ವಚನಗಳು' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಬಸವಣ್ಣನವರು ಓದುಗರಿಗೆ ಹೇಳಿದ್ದಾರೆ. ಕೆಲ ಢಾಂಬಿಕ ಭಕ್ತರು ನೀರ ಕಂಡಲ್ಲಿ ಮುಳುಗುತ್ತಾರೆ, ಮರವನ್ನು ಕಂಡಲ್ಲಿ ಸುತ್ತುತ್ತಾರೆ, ಬತ್ತುವ ಜಲವನ್ನು ಒಣಗುವ ಮರವನ್ನು ಮೆಚ್ಚಿರುವ ಇವರು ಕೂಡಲಸಂಗಮನನ್ನು ಅರಿಯರು. ಇವರಲ್ಲಿ ದೇವರ ಬಗೆಗಿನ ಭಕ್ತಿ ಅಲ್ಪವಾದುದು ಎಂದು ಜನರ ಮೂಢನಂಬಿಕೆಯನ್ನು ಖಂಡಿಸಿದ್ದಾರೆ, ಇಂಥಹ ಅರ್ಥವಿಲ್ಲದ ಆಚರಣೆಗಳನ್ನು ಬಿಡಬೇಕೆಂದು ಬಸವಣ್ಣನವರು ಹೇಳಿದ್ದಾರೆ.

**32. 'ಪರಹಿತಕ್ಕೆ ಬಳಲುತ್ತಿರಲು ಅದುವೇ ಜೀವನವು'.**

ಈ ವಾಕ್ಯವನ್ನು ಎಂ. ಗೋಪಾಲಕೃಷ್ಣ ಅಡಿಗರು ಬರೆದಿರುವ 'ಸಮಗ್ರ ಕಾವ್ಯ' ಪುಸ್ತಕದ 'ಗುರಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಕವಿ ಓದುಗರಿಗೆ ಹೇಳಿದ್ದಾರೆ. ನರನೊಳಗೆ ನಾರಾಯಣನ ರೂಪ ಕಾಣಬೇಕು, ಭೂಮಿಯಲ್ಲೇ ಸ್ವರ್ಗಸುಖವನ್ನು ಅನುಭವಿಸಬೇಕು. ಬೇರೆಯವರ ಹಿತವನ್ನು ಬಯಸುತ್ತಾ ಬದುಕು ಸಾಗಿಸಿದಾಗ ಗೆಲುವು ನಮ್ಮದಾಗುತ್ತದೆ ಅದನ್ನು ಬಿಟ್ಟು ಬೇರೆ ಯಾವುದೇ ಕೇಡು ಬಯಸಿದರೂ ನಮಗೆ ಕೆಟ್ಟ ಹೆಸರೊಂದು ಬರುತ್ತದೆಂದು ಕವಿ ಹೇಳಿದ್ದಾರೆ.

**33. 'ಎಮ್ಮರಮನೆಯ ನಾರಿಯರೆ ಸಾಕು'.**

ಈ ವಾಕ್ಯವನ್ನು ಕುಮಾರವ್ಯಾಸ ಬರೆದಿರುವ 'ಕರ್ಣಾಟ ಭಾರತ ಕಥಾಮಂಜರಿ' ಎಂಬ ಕಾವ್ಯದ 'ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ' ಎಂಬ ಪದ್ಯದಿಂದ ಆರಿಸಲಾಗಿದೆ.

ಈ ಮಾತನ್ನು ಉತ್ತರನು ಅರ್ಜುನನಿಗೆ ಹೇಳುತ್ತಾನೆ. ಯುದ್ಧಭೂಮಿಯಿಂದ ಓಡಿ ಬಂದ ಪಾಪವನ್ನು ಬ್ರಾಹ್ಮಣರು ನಿವಾರಿಸುತ್ತಾರೆ. ಅಶ್ವಮೇಧ ಯಾಗವನ್ನು ಭೂಮಿಯಲ್ಲೆ ಮಾಡಬಹುದು, ಅರಮನೆಯ ನಾರಿಯರಲ್ಲೇ ಅಪ್ಸರೆಯರನ್ನು ಕಾಣಬಹುದು, ಇಂದ್ರ ಪದವಿಗಿಂತ ಅರಸುತನವೇ ಸಾಕು ಎಂದು ಹೇಳುತ್ತಾ ಉತ್ತರನು ಯುದ್ಧವನ್ನು ಮಾಡದೆಯೆ ಸುಖಪಡಬಹುದು ಎಂದು ಉತ್ತರನು ಸಮರ್ಥಿಸುವಾಗ ಈ ವಾಕ್ಯ ಬಂದಿದೆ.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x4=4**

34. ಕೊರಡ ಕೊನರಿಸಿ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು
ಬರಡು ಜೀವಕೆ ಹೊಸತು ಚೈತನ್ಯವು
ಕುಕಿಲ ಕೋಗಿಲೆ ಕಂಠಮುಕ್ತ ತಾರಕಕೇರಿ
ಚಿಲಿಪಿಲಿಯ ಕಲರವಕೆ ಮತ್ತೇರಿದೆ.

ಅಥವಾ

ಯುಗದ ಹಿಂದಿನ ಕೊಳೆಯ ತಿಕ್ಕಿ ಮೈತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 1 x4=4**

**35. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವನ್ನು ಅರ್ಥಪೂರ್ಣವಾಗಿ ಬರೆಯಿರಿ.**

ಗೋಪಾಲನು ತನ್ನ ತಾಯಿಯೊಂದಿಗೆ ಗುಡಿಸಲಿನಲ್ಲಿ ವಾಸವಾಗಿದ್ದನು. ತಾಯಿ ಮೇಲೆ ತುಂಬಾ ಪ್ರೀತಿ ಇದ್ದ ಗೋಪಾಲನು ತಾಯಿ ಏಳಿಸುವ ಮುನ್ನವೇ ನಿದ್ದೆಯಿಂದ ಎದ್ದು ಹೂಗಳನ್ನು ಕೊಯ್ಯಲು ಬನಕ್ಕೆ ಹೋಗುತ್ತಿದ್ದನು. ಆದರೂ ಮಗ ಮಲಗಿರುವನೆಂದು ತಿಳಿದ ತಾಯಿ "ಗೋಪಾಲ, ಬೆಳಗಾಯಿತು ಮೇಲೇಳು, ನೋಡಲ್ಲಿ ಸೂರ್ಯ ನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿ ಬಳಿಯ ತೆಂಗಿನ ಮರದ ತುದಿಯಲ್ಲಿ ಬೆಳಗುತ್ತಿದ್ದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತಾ ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ ಎದ್ದೇಳು ಗೋಪಾಲ ಶಾಲೆಗೆ ಹೊತ್ತಾಗುತ್ತದೆ" ಎಂದು ತಾಯಿ ಕೂಗುತ್ತಾಳೆ. ಅದಾಗಲೆ ಗೋಪಾಲನು ಎದ್ದು ಸ್ನಾನ ಮಾಡಿ ಗೋಪಾಲನ ಪೂಜೆಗಾಗಿ ಹೂಗಳನ್ನು ಕೊಯ್ಯಲೆಂದು ಹೂಬನಕ್ಕೆ ಹೋಗಿದ್ದನು. ಹೂಕೊಯ್ದು ಹಿಂದಿರುಗಿದ ಮೇಲೆ ಹೂಬನದ ಸೌಂದರ್ಯವನ್ನು ತಾಯಿಗೆ ವಿವರಿಸುತ್ತಾನೆ. ಅಲ್ಲಿ ತಾಯಿ ಇಲ್ಲದಿರುವ ಕೊರಗನ್ನು ವಿವರಿಸುತ್ತಾನೆ. ಹಾಗೆಯೇ ಶಾಲೆಗೆ ಹೊತ್ತಾಗುತ್ತದೆ ಎಂದು ತಾಯಿಯು ಹೇಳಿದಾಗ ಗೋಪಾಲ ಶಾಲೆಯಿಂದ ಹಿಂದಿರುಗುವಾಗ "ಕಾಡಿನಲ್ಲಿ ಒಬ್ಬನೇ ಬರಬೇಕು ಅಲ್ಲಿ ಒಬ್ಬನೇ ಬರುವುದಕ್ಕೆ ಹೆದರಿಕೆ. ತನ್ನನ್ನು ಕರೆತರಲು ಒಬ್ಬ ಆಳು ಬೇಕು" ಎಂದು ಕೇಳುತ್ತಾನೆ. ಆಗ ತಾಯಿಯು ತನ್ನ ಮನೆಯ ಬಡತನದ ಪರಿಸ್ಥಿತಿಯನ್ನು ವಿವರಿಸಿ ಶಾಲೆಯಿಂದ ಬರುವಾಗ ಹೆದರಿಕೆಯಾದರೆ ಬನದ ಗೋಪಾಲನನ್ನು ಕೂಗು ಎಂದು ಹೇಳುತ್ತಾಳೆ. ಬನದ ಗೋಪಾಲ ತನ್ನ ಹಿರಿಯ ಮಗನೆಂದು ಅವನು ಕಾಡಿನಲ್ಲಿ ದನ ಕಾಯುತ್ತಿರುವನೆಂದು ತಿಳಿಸಿದಳು. ಹೀಗೆ ತಾಯಿ ಮತ್ತು ಮಗನ ನಡುವೆ ಸಂಭಾಷಣೆ ನಡೆಯುತ್ತದೆ.

**ಅಥವಾ**

**ನನ್ನ ಗೋಪಾಲ ಪಾಠದಲ್ಲಿ ಬರುವ ಪ್ರಕೃತಿ ವರ್ಣನೆಯನ್ನು ಸ್ವಾರಸ್ಯ ಪೂರ್ಣವಾಗಿ ಬರೆಯಿರಿ.**

ನನ್ನ ಗೋಪಾಲ ಪಾಠದಲ್ಲಿ ತಾಯಿ "ಗೋಪಾಲ, ಬೆಳಗಾಯಿತು ಮೇಲೇಳು, ನೋಡಲ್ಲಿ ಸೂರ್ಯ ನಾರಾಯಣನು ತನ್ನ ಚಿನ್ನದ ಕಿರಣಗಳಿಂದ ಬಾವಿ ಬಳಿಯ ತೆಂಗಿನ ಮರದ ತುದಿಯಲ್ಲಿ ಬೆಳಗುತ್ತಿದ್ದಾನೆ. ಕೇಳಲ್ಲಿ ಹಕ್ಕಿಗಳು ಹಾಡುತ್ತಾ ಹಾರಾಡಿ ಕರೆಯುತ್ತಿವೆ ನಿನ್ನ. ಹೂಗಳು ಅರಳಿ ಬನದಲ್ಲಿ ನಿನಗಾಗಿ ಕಾದುಕೊಂಡಿವೆ ಎದ್ದೇಳು ಗೋಪಾಲ ಶಾಲೆಗೆ ಹೊತ್ತಾಗುತ್ತದೆ" ಎಂದು ತಾಯಿ ಕೂಗುತ್ತಾಳೆ. ಗೋಪಾಲನು ಹೂಬನದ ಸೊಬಗನ್ನು ವರ್ಣಿಸುತ್ತ "ಹೂಬನದಲ್ಲಿ ಮಲ್ಲಿಗೆ, ಕೇದಿಗೆ, ಸಂಪಿಗೆ, ಗೋರಂಟಿಯ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು, ಹಕ್ಕಿಗಳ ಹಾಡು, ತಂಗಾಳಿ, ಸೂರ್ಯನ ಹೊಂಬೆಳಕು, ಹಿಮಮಣಿಗಳು ಎಷ್ಟೊಂದು ಸುಂದರ" ಎಂದು ವರ್ಣಿಸಿದನು. ಹೂಕೊಯ್ದು ಹಿಂದಿರುಗಿದ ಮೇಲೆ ಹೂಬನದ ಸೌಂದರ್ಯವನ್ನು ತಾಯಿಗೆ ವಿವರಿಸುತ್ತಾನೆ ಅಲ್ಲಿ ತಾಯಿ ಇಲ್ಲದಿರುವ ಕೊರಗನ್ನು ವಿವರಿಸುತ್ತಾನೆ. ಹೀಗೆ ಪಾಠದಲ್ಲಿ ಪ್ರಕೃತಿಯ ವರ್ಣನೆ ಇದೆ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x4=4(2 +2)**

ರಾತ್ರಿ ಕತ್ತಲಾಯಿತು. ಕತ್ತಲಲ್ಲಿ ಹಾಗೇ ಕುಳಿತಿದ್ದ. ಬೆಳಕಾದಾಗ ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಡಿಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು ಮಾತನಾಡಿಸಿದ. ಅದರ ಧನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಹೀಗೆ ಆ ರಾಜಕುಮಾರ ತನ್ನ ಸುತ್ತಮುತ್ತ ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ. ಆ ವೇಳೆಗೆ ಮತ್ತೆ ಕತ್ತಲಾಯಿತು. ಮಲಗಿಬಿಟ್ಟನು. ಕನಸಿನಲ್ಲಿ ತಾಯಿ ಬಂದು ಹೀಗೆಂದಳು. 'ಭರತಕುಮಾರ, ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ, ನೀರಿನಲ್ಲಿ ಕರಗಿ ಹೋಗಿದ್ದೇನೆ, ನಿನ್ನ ರೋದನವನ್ನು ಕೇಳಿ ಕೇಳಿ, ಕೊರಗಿ ಕೊರಗಿ, ಇಲ್ಲೇ ಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ'. ಬೆಳಗಾಗಿ ಎದ್ದು ರಾಜಕುಮಾರ ಆ ತನ್ನ ನೆಲವನ್ನೇ ತಾಯಿಯೆಂದು ಭಾವಿಸಿಕೊಂಡ. ಆ ನಾಡನ್ನೇ ಭಾರತ ಮಾತೆಯೆಂದೂ, ತಾಯಿ ಭಾರತಿಯೆಂದೂ ಕರೆಯಲಾರಂಭಿಸಿದ. ಅವನ ಜನರೆಲ್ಲ ಹಾಗೆ ಕರೆದರು, ಆ ಹಿಂದಿನ ಕಾಲದಲ್ಲಿ.

**36. ಅ) ರಾಜಕುಮಾರ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನು ಹೇಗೆ ಕಂಡುಕೊಂಡ?**

ಭರತಕುಮಾರ ಹತ್ತಿರವಿದ್ದ ನೀರನ್ನು ಬೊಗಸೆಯಲ್ಲಿ ತುಂಬಿ ಕುಡಿದ. ಆ ನೀರಿಗೆ ಆತನ ತಾಯಿಯ ಹಾಲಿನ ರುಚಿಯಿತ್ತು. ಹೂವು ಬಿಡಿಸಿ ಕಂಪು ಮೂಡಿಸಿದ. ಅದರಲ್ಲಿ ಆ ತಾಯಿಯ ಪರಿಮಳವಿತ್ತು. ಹಕ್ಕಿಯೊಂದನ್ನು ಹಿಡಿದು

ಮಾತನಾಡಿಸಿದ. ಅದರ ಧನಿಯಲ್ಲಿ ತಾಯಿಯ ಪ್ರೀತಿಯ ಸ್ವರವೇ ಕೇಳಿಸಿತು. ನೆಲವನ್ನು ದಿಟ್ಟಿಸಿ ನೋಡಿದರೆ ಆ ತಾಯಿಯ ಛಾಯೆಯೇ ಕಾಣುತ್ತಿತ್ತು. ಹೀಗೆ ಆ ರಾಜಕುಮಾರ ತನ್ನ ಸುತ್ತ ಮುತ್ತ ತನ್ನ ತಾಯಿಯ ರುಚಿ, ಕಂಪು, ನುಡಿ, ಆಟ, ಕೂಟ, ಪಾಟಗಳನ್ನೇ ಕಂಡುಕೊಂಡ.

**ಆ) ಭರತನ ತಾಯಿ ಕನಸ್ಸಿನಲ್ಲಿ ಬಂದು ಏನೆಂದು ಹೇಳಿದಳು?**

ಕನಸಿನಲ್ಲಿ ತಾಯಿ ಬಂದು ಹೀಗೆಂದಳು. 'ಭರತಕುಮಾರ, ನಾನು ಈ ನೆಲದಲ್ಲಿ ಅಡಗಿ ಹೋಗಿದ್ದೇನೆ, ನೀರಿನಲ್ಲಿ ಕರಗಿ ಹೋಗಿದ್ದೇನೆ, ನಿನ್ನ ರೋದನವನ್ನು ಕೇಳಿ ಕೇಳಿ, ಕೊರಗಿ ಕೊರಗಿ, ಇಲ್ಲೇ ಇದ್ದು ಬಿಟ್ಟಿದ್ದೇನೆ. ಈ ನೆಲವೇ ನಾನೆಂದು ಭಾವಿಸಿಕೊ' ಎಂದು ಹೇಳಿದಳು.

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1 x4=4**

**37. ಸ್ವಚ್ಛ ಭಾರತ ಅಭಿಯಾನ**

ಪೀಠಿಕೆ: ನಮ್ಮ ಆರೋಗ್ಯದ ದೃಷ್ಟಿಯಿಂದ ನಾವು ವಾಸಿಸುವ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಈ ದಿಸೆಯಲ್ಲಿ ಪ್ರತಿಯೊಬ್ಬರೂ ಸ್ವಯಂ ಪ್ರೇರಣೆಯಿಂದ ಸ್ವಚ್ಛತೆಯ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಇದು ನಮ್ಮ ಮನೆಯ ಪರಿಸರದಿಂದಲೇ ಆರಂಭವಾಗಬೇಕಾಗಿದೆ.

**ವಿಷಯ ನಿರೂಪಣೆ:** 'ಆರೋಗ್ಯವೇ ಭಾಗ್ಯ' ಎಂಬ ನಾಣ್ನುಡಿ ನಮ್ಮಲ್ಲಿದೆ. ಉತ್ತಮ ಆರೋಗ್ಯಕ್ಕೆ ಉತ್ತಮ ಹಾಗೂ ಸ್ವಚ್ಛವಾದ ಪರಿಸರ ಅಗತ್ಯ. ಹಾಗಾಗಿ ಅಕ್ಟೋಬರ್–2, 2014 ರ ಗಾಂಧೀ ಜಯಂತಿಯಂದು ಮಾನ್ಯ ಪ್ರಧಾನಮಂತ್ರಿಗಳು ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಗಾಂಧೀಜಿಯವರು ಹುಟ್ಟಿ 150 ವರ್ಷ ಪೂರ್ಣಗೊಳ್ಳುವ 2.10.2019 ಕ್ಕೆ ಈ ಯೋಜನೆಯ ಗುರಿಯನ್ನು ಇಟ್ಟುಕೊಳ್ಳಲಾಗಿತ್ತು. ಇಂದಿಗೂ ಇದು ಮುಂದುವರೆಯುತ್ತಿದೆ. ಸಂಪೂರ್ಣವಾಗಿ ಸ್ವಚ್ಛಭಾರತ ನಿರ್ಮಾಣವಾಗಬೇಕು. ಈ ದಿಸೆಯಲ್ಲಿ ಈಗಾಗಲೇ ಹಳ್ಳಿಗಳಲ್ಲಿ, ನಗರಗಳಲ್ಲಿ ತಾವು ವಾಸಿಸುವ ಪ್ರದೇಶಗಳಲ್ಲಿ, ಕೆಲಸ ಮಾಡುವ ಸ್ಥಳಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದರಿಂದ ಉತ್ತಮ ಪರಿಸರ ನಿರ್ಮಾಣವಾಗುತ್ತಿದೆ. ತ್ಯಾಜ್ಯ ವಸ್ತುಗಳ ಸಮರ್ಪಕ ವಿಲೇವಾರಿಯಾಗುತ್ತಿದ್ದು, ಇನ್ನೂ ಉತ್ತಮಗೊಳ್ಳಬೇಕಿದೆ. ಜನರಲ್ಲಿ ಸ್ವಚ್ಛತೆಯ ಬಗ್ಗೆ ಜಾಗೃತಿ ಮೂಡಿದೆ. ಸಮೂಹ ಮಾಧ್ಯಮಗಳು ಇದನ್ನು ಯಶಸ್ವಿಗೊಳಿಸುವಲ್ಲಿ ಪೂರ್ಣ ಸಹಕಾರ ನೀಡುತ್ತಿವೆ. ದೇಶದಾದ್ಯಂತ ಈ ಅಭಿಯಾನವು ಉತ್ತಮವಾಗಿ ಜಾರಿಗೊಳ್ಳುತ್ತಿರುವುದು ಸಂತೋಷದ ವಿಷಯ. ಅದರಲ್ಲೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಸ್ವಚ್ಛಭಾರತ ಅಭಿಯಾನದ ಭಾಗವಾಗುತ್ತಾ ಈ ಯೋಜನೆಯನ್ನು ಯಶಸ್ವಿಗೊಳಿಸುತ್ತಿದ್ದಾರೆ.

**ಉಪಸಂಹಾರ:** ಸ್ವಚ್ಛ ಭಾರತ ನಿರ್ಮಾಣದ ಕನಸನ್ನು ನನಸು ಮಾಡೋಣ. ಈ ಯೋಜನೆಯನ್ನು ಸಾಕಾರಗೊಳಿಸಲು ಪ್ರತಿವಾರ ಎರಡು ಗಂಟೆಗಳ ಅವಧಿಯನ್ನು ಮೀಸಲಿಡೋಣ. ಸ್ವಚ್ಛ ಮನೆ, ಸ್ವಚ್ಛ ಗ್ರಾಮ, ಸ್ವಚ್ಚ ನಗರ, ಸ್ವಚ್ಛ ರಾಜ್ಯ, ಸ್ವಚ್ಛ ದೇಶ ಎಂಬ ಸೂತ್ರದಡಿ ಸ್ವಚ್ಛಭಾರತ ಅಭಿಯಾನವನ್ನು ಕೈಗೊಳ್ಳೋಣ. ಆ ಮೂಲಕ ಸ್ವಚ್ಛಭಾರತ ಅಭಿಯಾನದ ಯಶಸ್ವಿ ನಾಗಾಲೋಟಕ್ಕೆ ಅಡಿಗಲ್ಲು ಆಗೋಣ. ಜೈ ಭಾರತ್

**ಅಥವಾ**

**ರಾಷ್ಟ್ರೀಯ ಹಬ್ಬಗಳ ಮಹತ್ವ**

**ಪೀಠಿಕೆ:** ರಾಷ್ಟ್ರೀಯ ಹಬ್ಬಗಳು ಜನರನ್ನು ಪ್ರೀತಿ ವಿಶ್ವಾಸಗಳಿಂದ ಬಂಧಿಸುತ್ತವೆ. ಹಬ್ಬಗಳ ಸಮಯದಲ್ಲಿ ಜನರು ಎಲ್ಲಾ ಭೇದ ಭಾವಗಳನ್ನು ಮರೆತು ಒಂದಾಗುತ್ತಾರೆ. ದೇಶದ ಜನರೆಲ್ಲರೂ ಜಾತಿ,ಮತ, ಭೇದಗಳನ್ನು ಮರೆತು ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ಸ್ವಾತಂತ್ರ್ಯ ದಿನಾಚರಣೆ, ಗಾಂಧೀಜಯಂತಿ ಮತ್ತು ಗಣ ರಾಜ್ಯೋತ್ಸವಗಳು ರಾಷ್ಟ್ರೀಯ ಹಬ್ಬಗಳಾಗಿವೆ. ಇವು ಸರಕಾರ ಘೋಷಿಸಿರುವ ಹಬ್ಬಗಳಾಗಿವೆ.

**ವಿಷಯ ನಿರೂಪಣೆ:** 1947 ಆಗಸ್ಟ್ 15ರಂದು ಭಾರತ ದೇಶವು ಸ್ವತಂತ್ರವಾಯಿತು. ಅಂದು ಭಾರತೀಯರಿಗೆ ಬ್ರಿಟಿಷರು ಅಧಿಕಾರವನ್ನು ಬಿಟ್ಟುಕೊಟ್ಟರು. ಅರವಿಂದ ಘೋಷ್ ಅವರ ಜನ್ಮ ದಿನವು ಈ ದಿನವೇ ಆಗಿದೆ. ಇವೆಲ್ಲದರ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಅಕ್ಟೋಬರ್2 ರಂದು ಮಹಾತ್ಮ ಗಾಂಧೀಜಿಯವರು ಜನಿಸಿದ ದಿನ. ಆ ದಿನವನ್ನು ಗಾಂಧೀ ಜಯಂತಿ ಎಂದು ಆಚರಿಸಲಾಗುತ್ತದೆ. ಅಂದು ಅವರ ತ್ಯಾಗ ಮತ್ತು ಬಲಿದಾನದ ಸೇವೆಯನ್ನು

ಜನರು ಸ್ಮರಿಸುತ್ತಾರೆ. ಜನವರಿ 26ರಂದು ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ. ಅಂದು ಭಾರತೀಯ ಸಂವಿಧಾನ ಜಾರಿಗೆ ಬಂದ ದಿನ. ಆ ಸವಿನೆನಪಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ.

**ಉಪಸಂಹಾರ :**ರಾಷ್ಟ್ರೀಯ ಹಬ್ಬಗಳನ್ನು ಎಲ್ಲರೂ ಕೂಡಿ ಆಚರಿಸುವುದರಿಂದ ರಾಷ್ಟ್ರೀಯ ಭಾವೈಕ್ಯತೆ ಬೆಳೆಯುತ್ತದೆ. ಅಲ್ಲದೆ ದೇಶಭಕ್ತಿ ಮತ್ತು ದೇಶಪ್ರೇಮ ಹೆಚ್ಚಾಗುತ್ತದೆ. ಧಾರ್ಮಿಕ ಸಾಮರಸ್ಯ ಬೆಳೆಯಲು ಸಹಕಾರಿಯಾಗುತ್ತದೆ. ರಾಷ್ಟ್ರೀಯ ಹಬ್ಬಗಳು ತ್ಯಾಗ ಮತ್ತು ಸೇವಾ ಮನೋಭಾವವನ್ನು ಬೆಳೆಸುತ್ತವೆ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x5=5**

**38. ನಿಮ್ಮನ್ನು ಹಾಸನದ ಸರ್ಕಾರಿ ಪ್ರೌಢಶಾಲೆಯ 'ಅರುಣ'ಎಂದು ಭಾವಿಸಿಕೊಂಡು ಶಾಲೆಯಲ್ಲಿ ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ ಅರಣ್ಯಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.**

**ಇವರಿಂದ** **ದಿನಾಂಕ : 01–01–2024**

ಅರುಣ

ಸರ್ಕಾರಿ ಪ್ರೌಢಶಾಲೆ

ಹಾಸನ

**ಇವರಿಗೆ**

ಅರಣ್ಯಾಧಿಕಾರಿಗಳು

ಅರಣ್ಯ ಇಲಾಖೆ

ಹಾಸನ

ಮಾನ್ಯರೆ,

**ವಿಷಯ : ವನಮಹೋತ್ಸವ ಆಚರಣೆಗೆ ಸಸಿಗಳನ್ನು ಒದಗಿಸುವಂತೆ ಕೋರಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಪರಿಸರದ ಜಾಗೃತಿಯನ್ನು ಮೂಡಿಸುವ ಸದುದ್ದೇಶದಿಂದ ನಮ್ಮ ಶಾಲೆಯಲ್ಲಿ ವನಮಹೋತ್ಸವ ಆಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ತಾವು ಔಷಧಿಯ, ವಿವಿಧ ಬಗೆಯ ಹಣ್ಣಿನ ಹಾಗೂ ಹೂ ಬಿಡುವ ವಿವಿಧ ರೀತಿಯ ಸಸಿಗಳನ್ನು ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ.

**ತಮ್ಮ ವಿಶ್ವಾಸಿ**

**ಅರುಣ**

**ಅಥವಾ**

**<u>ನಿಮ್ಮನ್ನು ತುಮಕೂರಿನ 'ರಚನಾ' ಎಂದು ಭಾವಿಸಿಕೊಂಡು ಕೊರೋನಾ ಸಾಂಕ್ರಾಮಿಕ ರೋಗದಿಂದಾದ ಅನಾಹುತಗಳನ್ನು ವಿವರಿಸಿ ಚಿತ್ರದುರ್ಗದಲ್ಲಿರುವ ನಿಮ್ಮ ಗೆಳತಿ 'ರಮಾ' ಗೆ ಒಂದು ಪತ್ರ ಬರೆಯಿರಿ.</u>**

**ಕ್ಷೇಮ** **ಶ್ರೀ** **ದಿನಾಂಕ : 01–01–2024**

**ರಚನಾ**

**ಸರ್ಕಾರಿ ಪ್ರೌಢಶಾಲೆ**

**ತುಮಕೂರು**

ಪ್ರೀತಿಯ ಗೆಳತಿ ರಮಾಗೆ ನಿನ್ನ ಗೆಳತಿ ರಚನಾ ಮಾಡುವ ನಮಸ್ಕಾರಗಳು. ನಾನು ಇಲ್ಲಿ ಆರೋಗ್ಯವಾಗಿದ್ದೇನೆ ನಿನ್ನ ಆರೋಗ್ಯದ ಬಗ್ಗೆ ಪತ್ರ ಬರೆದು ತಿಳಿಸು. ಇತ್ತೀಚೆಗೆ ದೇಶದೆಲ್ಲೆಡೆ ಕೊರೋನಾ ಎಂಬ ಸಾಂಕ್ರಾಮಿಕ ರೋಗವು ತುಂಬಾ ಅನಾಹುತಗಳನ್ನು ತಂದಿಟ್ಟಿದೆ. ಕೊರೋನಾ ರೊಗಕ್ಕೆ ತುತ್ತಾದವರು ಉಸಿರಾಟದ ಸಮಸ್ಯೆಯಿಂದ ಸಾವನ್ನಪ್ಪುತ್ತಿದ್ದಾರೆ. ನಮ್ಮ ತುಮಕೂರು ಜಿಲ್ಲೆಯಲ್ಲಿ ಹಳ್ಳಿಹಳ್ಳಿಗಳಲ್ಲೂ ವ್ಯಾಪಿಸಿದ್ದು ಅನೇಕರು ತುಂಬಾ ಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಜಿಲ್ಲಾ ಆಸ್ಪತ್ರೆಗಳಲ್ಲೂ ಚಿಕಿತ್ಸೆಗೆ ಸಾಕಷ್ಟು ಹಾಸಿಗೆಗಳ ಕೊರತೆಯು ಕಂಡುಬಂದಿದೆ. ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ವೆಚ್ಚವು ಹೆಚ್ಚಾಗಿದ್ದು ಬಡಜನತೆ ಸರ್ಕರಿ ಆಸ್ಪತ್ರಗಳನ್ನೇ ನೆಚ್ಚಿಕೊಂಡಿದ್ದಾರೆ. ಸರ್ಕಾರವೂ ಕೂಡ ಈ ಬಗ್ಗೆ ಗಮನ ಹರಿಸಿ ಆಮ್ಲಜನಕ ಸರಬರಾಜು ಮಾಡುತ್ತಿದ್ದರೂ ಸಾಕಷ್ಟು ರೋಗಿಗಳಿಗೆ ಇದರ ಸೌಲಭ್ಯ ಸಿಗದೆ ಸಾವನ್ನಪ್ಪುತ್ತಿದ್ದಾರೆ. ಸಾರ್ವಜನಿಕರು ಸಹ ಸರ್ಕಾರ ಜೊತೆ ಕೈಗೂಡಿಸಬೇಕು ಮಾಸ್ಕ್ ಧರಿಸುವುದು ಹಾಗೂ ವ್ಯಾಕ್ಸಿನ್‌ಗಳನ್ನು ಹಾಕಿಸಿಕೊಂಡು ಸುರಕ್ಷಿತವಾಗಿರಬೇಕು. ನೀನು ಮತ್ತು ಮನೆಯವರೆಲ್ಲರೂ ಈ ಸಾಂಕ್ರಾಮಿಕ ರೋಗದ ಬಗ್ಗೆ ಜಾಗರೂಕರಾಗಿರಿ.

**ಇಂತಿ ನಿನ್ನ ಗೆಳತಿ**

**ರಚನಾ**

**ಇವರಿಗೆ**

ರಮಾ

ಸರ್ಕಾರಿ ಪ್ರೌಢಶಾಲೆ

ಚಿತ್ರದುರ್ಗ

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80** **ಮಾದರಿ ಪ್ರಶ್ನೆ ಪತ್ರಿಕೆ 5** **ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.** **4x1=4**

1. ಕಾರ್ಯ ಪದದ ತದ್ಭವ ರೂಪ.

ಎ) ಕಾಯಕ ಬಿ) ಕಾವ್ಯ ಸಿ) ಕಜ್ಜ ಡಿ) ಕೆಲಸ

2. 'ಬೇರೊಬ್ಬ' ಪದದಲ್ಲಿರುವ ಸಂಧಿ.

ಎ) ಲೋಪ ಬಿ) ಆಗಮ ಸಿ) ಆದೇಶ ಡಿ) ಗುಣ

3. 'ನಾಯಕ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.

ಎ) ಮೂರು ಬಿ) ಆರು ಸಿ) ನಾಲ್ಕು ಡಿ) ಐದು

4. 'ಕಾಡು ಮೇಡು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಕೃದಂತ ಡಿ) ಜೋಡಿಪದ

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **12x1=12**

5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?
6. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?
7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?
8. ಪಂಡಿತ ಪುಟ್ಟರಾಜ ಗವಾಯಿಗಳ ಗುರುಗಳು ಯಾರು?
9. ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆಯ್ಕೆ ಮಾಡಿಕೊಂಡರು?
10. ಲಂಡನ್ ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು?
11. ಸಿದ್ಧಾರ್ಥ ಯಾರ ಮತ್ತು ಯಾವುದರ ಮೋಹವನ್ನು ತೊರೆದನು?
12. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೋಳ್ಳುತ್ತಾಳೆ?
13. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ?
14. ಬಾವ ಬಣ್ಣದ ಸೀರೆಯನ್ನು ಏಕೆ ತಂದನೆಂದು ಜನಪದರು ಹೇಳಿದ್ದಾರೆ?
15. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?
16. ಅರಮನೆಯ ನಾರಿಯರು ಯಾರ ಸ್ಥಾನವನ್ನು ತುಂಬುತ್ತಾರೆ?

**III. ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.** **8x2=16**

17. ಇಂದ್ರನಿಗೆ ಗಿಳಿಯು ಯಾವ ವರವನ್ನು ಕೇಳಿತು?
18. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?
19. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಅನುಭವಗಳಿವೆ?
20. ಲಂಡನ್ ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?
21. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?
22. ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?
23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?

24. ಬದುಕುವ ಬದುವ ಬೇಲಿಯಲ್ಲಿ ಏನೇನು ಇದೆ ಎಂದು ಕವಯಿತ್ರಿ ಹೇಳಿದ್ದಾರೆ?

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

25. ಬಸವರಾಜ ಸಬರದ

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

27. 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ'

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ.** **1x3=3**

28. 'ಬೆಳೆಯುವ ಸಿರಿ ಮೊಳಕೆಯಲ್ಲಿ'

ಅಥವಾ

'ಮನಸ್ಸಿದ್ದರೆ ಮಾರ್ಗ'

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **5x3=15**

29. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು
30. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು
31. ನನ್ನ ಕಾಫಿ ಕೂಡ ತುಂಬಾ ಚೆನ್ನಾಗಿರುತ್ತದೆ
32. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು
33. ಧನವಿದ್ದು ಫಲವೇನು ದಯವಿಲ್ಲದನ್ನಕ್ಕ

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

34. ಕೆಸರೊಳಿದ್ದರು ______________________
______________________
______________________
______________________ಸಾರ್ಥಕತೆಗೆ.

ಅಥವಾ

ಒಂದು ಬಾಣಕೆ ______________________
______________________
______________________
______________________ ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ** **1x4=4**

35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ತಾಯಿ ಸಿದ್ಧಮ್ಮ ಮತ್ತು ಪುಟ್ಟಯ್ಯರ ನಡುವೆ ನಡೆದ ಸಂಭಾಷಣೆ ಸ್ವಾರಸ್ಯವನ್ನು ಬರೆಯಿರಿ.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ, ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಠಿ, ಅನಾವೃಷ್ಠಿ, ಚಂಡಮಾರುತಗಳು. ಸಾಂಕ್ರಾಮಿಕ ರೋಗಗಳು ಉಂಟಾಗುತ್ತಿವೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳಿಂದಾಗಿ ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧನೀರು, ಗಾಳಿ, ಆಹಾರ ಸಿಗದೇ ಹೋಗಬಹುದು ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**ಪ್ರಶ್ನೆಗಳು :**

36. ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದೆ ಏಕೆ? ವಿವರಿಸಿರಿ.

ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದ ಆಗುವ ಪರಿಣಾಮಗಳೇನು?

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

37. ಬಾಹ್ಯಾಕಾಶ ವಿಜ್ಞಾನ

ಅಥವಾ

ಕಂಪ್ಯೂಟರ್ – ಅವಶ್ಯಕತೆ – ಅನುಕೂಲತೆ

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ರವಿ/ರಾಧ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಚಲಿತ ದಿನಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಧಾರವಾಡದ ಸುಲೋಚನಾ ಎಂದು ಭಾವಿಸಿಕೊಂಡು ನೀವು ನಿಮ್ಮ ಶಾಲೆಯಿಂದ ಕೈಗೊಂಡ ಪ್ರವಾಸದ ಬಗ್ಗೆ ಬೆಳಗಾವಿಯ ಗೆಳತಿ 'ಸಂಸ್ಕೃತಿ'ಗೆ ಒಂದು ಪತ್ರ ಬರೆಯಿರಿ.

*******************

## ಬೆಂಗಳೂರು ಉತ್ತರ ಜಿಲ್ಲಾ ಮಟ್ಟದ ಎಸ್ ಎಸ್ ಎಲ್ ಸಿ ಅಭ್ಯಾಸ ಪತ್ರಿಕೆ

## ವಿಷಯ : 33K ದ್ವಿತೀಯ ಭಾಷೆ – ಕನ್ನಡ

**ಗರಿಷ್ಠ ಅಂಕಗಳು : 80 ಮಾದರಿ ಪ್ರಶ್ನೋತ್ತರಪತ್ರಿಕೆ 5 ಒಟ್ಟು ಪ್ರಶ್ನೆಗಳು : 38**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 4x1=4**

**1. ಕಾರ್ಯ ಪದದ ತದ್ಭವ ರೂಪ.**

ಎ) ಕಾಯಕ ಬಿ) ಕಾವ್ಯ **ಸಿ) ಕಜ್ಜ** ಡಿ) ಕೆಲಸ

**2. 'ಬೇರೊಬ್ಬ' ಪದದಲ್ಲಿರುವ ಸಂಧಿ.**

**ಎ) ಲೋಪ** ಬಿ) ಆಗಮ ಸಿ) ಆದೇಶ ಡಿ) ಗುಣ

**3. 'ನಾಯಕ' ಪದದಲ್ಲಿರುವ ಮಾತ್ರೆಗಳ ಸಂಖ್ಯೆ.**

ಎ) ಮೂರು ಬಿ) ಆರು **ಸಿ) ನಾಲ್ಕು** ಡಿ) ಐದು

**4. 'ಕಾಡು ಮೇಡು' ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.**

ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಕೃದಂತ **ಡಿ) ಜೋಡಿಪದ**

**II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 12x1=12**

**5. ಬೇಡನು ಪ್ರಾಣಿಗಳನ್ನು ಕೊಲ್ಲಲು ಮಾಡುತ್ತಿದ್ದ ಉಪಾಯವೇನು?**

ಬೇಡನು ಪ್ರಾಣಿಗಳನ್ನು ಕೊಲ್ಲಲು ವಿಷ ಸವರಿದ ಬಾಣಗಳನ್ನು ಉಪಯೋಗಿಸುತ್ತಿದ್ದನು.

**6. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು ಏನೆಂದು ಖ್ಯಾತರಾಗಿದ್ದಾರೆ?**

ಶ್ರೀ ಪಂಡಿತಾರಾಧ್ಯ ಶಿವಾಚಾರ್ಯರು 'ರಂಗಜಂಗಮ' ಎಂದು ಖ್ಯಾತರಾಗಿದ್ದಾರೆ.

**7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ?**

ಶ್ರೇಷ್ಠ ಗುರುವಿನಲ್ಲಿ ಶಿಷ್ಯರ ಮನಸ್ಸನ್ನು ಓದುವ ಶಕ್ತಿ ಇರುತ್ತದೆ.

**8. ಪಂಡಿತ ಪುಟ್ಟರಾಜ ಗವಾಯಿಗಳ ಗುರುಗಳು ಯಾರು?**

ಪಂಡಿತ ಪುಟ್ಟರಾಜ ಗವಾಯಿಗಳ ಗುರು ಪಂಚಾಕ್ಷರ ಗವಾಯಿಗಳು.

**9. ವಿದ್ಯಾರ್ಥಿಗಳು ಕಾಫಿ ಕುಡಿಯಲು ಎಂತಹ ಕಪ್ಪುಗಳನ್ನು ಆಯ್ಕೆ ಮಾಡಿಕೊಂಡರು?**

ವಿದ್ಯಾರ್ಥಿಗಳು ಕಾಫಿ ಕುಡಿಯಲು ಅತ್ಯಂತ ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

**10. ಲಂಡನ್ ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಯಾವುವು?**

ಲಂಡನ್‌ನಲ್ಲಿರುವ ಪ್ರಸಿದ್ಧ ವಿಶ್ವವಿದ್ಯಾಲಯಗಳು ಕೇಂಬ್ರಿಡ್ಜ್ ಮತ್ತು ಆಕ್ಸ್‌ಫರ್ಡ್ ಮತ್ತು ಲಂಡನ್ ವಿಶ್ವವಿದ್ಯಾಲಯಗಳು.

**11. ಸಿದ್ಧಾರ್ಥ ಯಾರ ಮತ್ತು ಯಾವುದರ ಮೋಹವನ್ನು ತೊರೆದನು?**

ಸಿದ್ಧಾರ್ಥ ಮಡದಿ, ಮಗು ಮತ್ತು ಅರಮನೆಯ ಮೋಹವನ್ನು ತೊರೆದನು.

**12. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ?**

ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಬಗೆ ಬಗೆಯ ಬಣ್ಣಗಳಿಂದ ಬರೆದ ಚಿತ್ರದಂತೆ ಹಾಗು ನವವಧುವಿನಂತೆ ಸಿಂಗಾರಗೊಳ್ಳುತ್ತಾಳೆ.

**13. ಕವಿ ಮಾನವನ ಬದುಕನ್ನು ಇಬ್ಬನಿಗೆ ಏಕೆ ಹೋಲಿಸಿದ್ದಾರೆ?**

ರವಿಯ ಕಿರಣಕೆ ಇಬ್ಬನಿ ಕರಗಿ ನೀರಾಗುವಂತೆ ಮಾನವನು ತನ್ನ ಬದುಕನ್ನು ಶಾಂತಿಯಿಂದ ಮುಗಿಸಬೇಕೆಂದು ತಿಳಿಸಲು ಕವಿ ಮಾನವನ ಬದುಕನ್ನು ಇಬ್ಬನಿಗೆ ಹೋಲಿಸಿದ್ದಾರೆ.

**14. ಬಾವ ಬಣ್ಣದ ಸೀರೆಯನ್ನು ಏಕೆ ತಂದನೆಂದು ಜನಪದರು ಹೇಳಿದ್ದಾರೆ?**

ಬಾವ ಬಣ್ಣದ ಸೀರೆಯನ್ನು ಬಾಗಿನ ಅರ್ಪಿಸಲು ತಂದನೆಂದು ಜನಪದರು ಹೇಳುತ್ತಾರೆ.

**15. ಧುರಕ್ಕೆ ಬೆನ್ನು ಹಾಕಿದರೆ ಏನು ಪ್ರಾಪ್ತಿಯಾಗುತ್ತದೆ?**

ಧುರಕ್ಕೆ ಬೆನ್ನು ಹಾಕಿದರೆ ಪಾಪ ಪ್ರಾಪ್ತಿಯಾಗುತ್ತದೆ.

**16. ಅರಮನೆಯ ನಾರಿಯರು ಯಾರ ಸ್ಥಾನವನ್ನು ತುಂಬುತ್ತಾರೆ?**

ಅರಮನೆಯ ನಾರಿಯರು ಅಪ್ಸರೆಯರ ಸ್ಥಾನವನ್ನು ತುಂಬುತ್ತಾರೆ.

**III. ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 8x2=16**

**17. ಗಿಳಿಯ ವರ್ತನೆಯು ಸಾಮಾನ್ಯವಾದ ಲೋಕವರ್ತನೆಗೆ ವಿರುದ್ಧವಾಗಿತ್ತು ಹೇಗೆ?**

ಸುಖ ಸಂಪತ್ತಿನ ಕಾಲದಲ್ಲಿ ಜೊತೆಗಿದ್ದವರು ಕಷ್ಟ ಕಾಲದಲ್ಲಿ ಕೈಬಿಟ್ಟು ಹೋಗುತ್ತಾರೆ. ಇದು ಸಾಮಾನ್ಯವಾದ ಲೋಕವರ್ತನೆ. ಆದರೆ ಗಿಳಿಯ ವರ್ತನೆಯು ಇದಕ್ಕೆ ವಿರುದ್ಧವಾಗಿತ್ತು. ತನಗೆ ಆಶ್ರಯ ನೀಡಿದ ಮರಕ್ಕೆ ಕಷ್ಟ ಬಂದರೂ ಅದನ್ನು ಬಿಟ್ಟು ಹೋಗದೆ ಅದರ ಜೊತೆಗೇ ಇದ್ದು ಉಪಕಾರ ಸ್ಮರಣೆ ಮಾಡಿತು.

**18. ಪುಟ್ಟರಾಜರ ವೇಷಭೂಷಣಗಳು ಹೇಗಿದ್ದವು?**

"ಶುಭ್ರವಾದ ಖಾದಿಯ ಬಿಳಿಯ ಉದ್ದನೆಯ ಅಂಗಿ, ಪಂಚೆ, ತಲೆಗೆ ಕೆಂಪು ಪೇಟ, ಹಣೆಯಲ್ಲಿ ವಿಭೂತಿ, ಕೊರಳಲ್ಲಿ ರುದ್ರಾಕ್ಷಿ ಮಾಲೆ, ಪಾದಗಳಲ್ಲಿ ಆವುಗೆ, ಕೈಯಲ್ಲಿ ಉದ್ದನೆಯ ಬೆತ್ತ" ಇವು ಪುಟ್ಟರಾಜರ ವೇಷಭೂಷಣಗಳಾಗಿದ್ದವು.

**19. ಹಕ್ಕಿಗೂಡಿನಲ್ಲಿ ಬದುಕಿನ ಯಾವ ಅನುಭವಗಳಿವೆ?**

ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸವಿದೆ, ಕಾವು, ಗುಟುಕು ಪಡೆದು ಜೀವ ಕಣ್ಣು ತೆರೆವ ಸೃಷ್ಟಿಯ ಅಚ್ಚರಿಯಿದೆ, ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ತೊಂದರೆಗಳನ್ನು ಎದುರಿಸಿ ಗೆಲ್ಲುವ ಸಾಹಸಗಾಥೆ ಇದೆ. ಕಲಾವಿದನ ಸೃಜನತೆ, ವಿಜ್ಞಾನಿಯ ತಂತ್ರಜ್ಞಾನವೂ ಇದೆ.

**20. ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?**

1666 ರಲ್ಲಿ ಲಂಡನ್ನಿನಲ್ಲಿ ಅಗ್ನಿ ದುರಂತ ಸಂಭವಿಸಿ ಮೂರು ದಿನ ಲಂಡನ್ ಹೊತ್ತಿ ಉರಿಯಿತಂತೆ. 13000 ಮನೆಗಳು 80 ಚರ್ಚ್‌ಗಳು ಸುಟ್ಟು ಹೋದವಂತೆ. ಅದಕ್ಕಿಂತ ಒಂದೆರಡು ವರ್ಷದ ಹಿಂದೆ ಪ್ಲೇಗ್ ರೋಗಕ್ಕೆ ಹನ್ನೆರಡು-ಹದಿಮೂರು ಸಾವಿರ ಜನ ಸತ್ತು ಹೋದರಂತೆ ಎಂದು ಲಂಡನ್‌ನಲ್ಲಿ ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ.

**21. ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಗಳು ಕವಿಗೆ ಹೇಗೆ ಗೋಚರಿಸಿದವು?**

ಚೈತ್ರದಲ್ಲಿ ಪ್ರಕೃತಿಯು ಹಸಿರಿನಿಂದ ಕಂಗೊಳಿಸುತ್ತದೆ. ಆ ಸೌಂದರ್ಯವನ್ನು ಕಂಡು ಪ್ರಾಣಿ, ಪಕ್ಷಿಗಳು ಉಲ್ಲಾಸಗೊಳ್ಳುತ್ತವೆ. ಹೊಸ ಉತ್ಸಾಹದಿಂದ ಅವು ತಮ್ಮ ತಮ್ಮ ಕೆಲಸಗಳಿಗೆ ಹೊರಟಂತೆ ಕಾಣುತ್ತವೆ. ಎಂದು ಕವಿ ಚೈತ್ರದಲ್ಲಿ ಪ್ರಾಣಿ ಪಕ್ಷಿಗಳ ಚಟುವಟಿಕೆಯ ಬಗ್ಗೆ ಹೇಳಿದ್ದಾರೆ.

**22. ಕುಣಿಗಲ್ ಕೆರೆಯ ಬಾಳೆ ಮೀನುಗಳು ಬೊಬ್ಬೆ ಹೊಡೆಯಲು ಕಾರಣವೇನು?**

ಕೃಷಿಕರ ಉಪಕಸುಬು ಮೀನುಗಾರಿಕೆ, ಅದು ಅವರ ಬದುಕಿಗೆ ಊರುಗೋಲು. ಕುಣಿಗಲ್ ಕೆರೆಯಲ್ಲಿ ಮೀನು ಹಿಡಿಯುವಾಗ ಬಲೆಯಲ್ಲಿ ಸಿಲುಕಿಕೊಂಡ ಬಾಳೆ ಮೀನುಗಳು ವಿಲವಿಲನೆ ಒದ್ದಾಡುತ್ತವೆ. ಮೀನುಗಳ ಒದ್ದಾಟದ ಪರಿಯನ್ನು ಬೊಬ್ಬೆ ಹೊಡೆಯುತ್ತವೆ ಎನ್ನಲಾಗಿದೆ.

**23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು?**

ವೈದ್ಯರು ಭೀಮನಾಯಕನ ಮಗುವಿನ ನಾಡಿಯನ್ನು ಹಿಡಿದು ನೋಡಿ ಜ್ವರದ ರೀತಿಯನ್ನು ಗುರುತಿಸಿದರು, ಮಾತ್ರೆಯನ್ನು ಕುಡಿಸಿದರು, ಕಾಡಿಗೆ ಹೋಗಿ ಔಷಧಿಯ ಸಸ್ಯ ತಂದು ರಸ ತಯಾರಿಸಿ ಕುಡಿಸಿದರು. ಲೇಹವನ್ನು ಹಣೆಗೆ ಹಚ್ಚಿ ಶುಶ್ರೂಷೆ ಮಾಡಿದರು. ಹೀಗೆ ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಉಳಿಸಿದರು.

**24. ಬದುಕುವ ಬದುವ ಬೇಲಿಯಲ್ಲಿ ಏನೇನು ಇದೆ ಎಂದು ಕವಯಿತ್ರಿ ಹೇಳಿದ್ದಾರೆ?**

ಬದುಕಿನ ಬದುವಿನ ಬೇಲಿಯು ಹೊಂಗೆ ಮರದ ಜೋಲಿಯಂತೆ, ಅರಳಿದ ಹೂವಿನಂತೆ, ಮುದ್ದಾದ ಮಲ್ಲಿಗೆಯಂತೆ ಇದೆ. ತಾಯಿಯಂತೆ ನೆರಳು, ಕರುಳಿನಂತ ಮಡಿಲು ಇದೆ ಎಂದು ಕವಯಿತ್ರಿ ಡಾ.ಹೆಚ್.ಎಲ್. ಪುಷ್ಪ ಬದುಕಿನ ಬದುವ ಬೇಲಿಯ ಬಗ್ಗೆ ಹೇಳಿದ್ದಾರೆ.

**IV. ಕೆಳಗಿನ ಕವಿ/ ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ, ಮತ್ತು ಬಿರುದು/ ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ.** **1x3=3**

**25. ಬಸವರಾಜ ಸಬರದ**

ಬಸವರಾಜ ಸಬರದ ಅವರು 1954ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರಿನಲ್ಲಿ ಜನಿಸಿದರು. ಇವರು 'ನನ್ನವರ ಹಾಡು', 'ಹೋರಾಟ', 'ನೂರು ಹನಿಗಳು' ಮುಂತಾದ ಕೃತಿಗಳನ್ನು ಬರೆದಿದ್ದಾರೆ. ಇವರಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ, ಕುವೆಂಪು ಸಾಹಿತ್ಯ ಪುರಸ್ಕಾರ, ಕಾವ್ಯಾನಂದ ಪ್ರಶಸ್ತಿಗಳು ದೊರೆತಿವೆ.

**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ.** **1x3=3**

26. ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ
ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ
ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ
ಎಲ್ಲರೆದೆಗಳ ತುಂಬ ಸವಿಚೈತ್ರವು.

ಸಾರಾಂಶ : ಈ ಪದ್ಯವನ್ನು ಬಸವರಾಜ ಸಾದರ ಅವರು ಬರೆದಿರುವ 'ಸಿಸಿಫಸರ ಸುತ್ತು' ಎಂಬ ಪುಸ್ತಕದ 'ಸವಿಚೈತ್ರ' ಎಂಬ ಪದ್ಯದಿಂದ ಆರಿಸಲಾಗಿದೆ. ಕವಿ ಹೇಳುವಂತೆ ಭಾರತೀಯರ ಹೊಸವರ್ಷದ ದಿನವಾದ ಯುಗಾದಿಯು ಎಲ್ಲರ ಬಾಳಲ್ಲೂ ಸಿಹಿಯನ್ನು ಹೊತ್ತು ತರಬೇಕು, ಹಳೆಯ ನೆನಪುಗಳನ್ನು ಮರೆತು ಬರಲಿರುವ ಹೊಸವರ್ಷದ ದಿನಗಳನ್ನು ಬರಮಾಡಿಕೊಂಡು ಸುಖ ಸಂಭ್ರಮಗಳಿಂದ ಬಾಳಬೇಕು. ಬರಲಿರುವ ದಿನಗಳ ಸುಖ ದುಃಖಗಳನ್ನು ಸಮನಾಗಿ ಸ್ವೀಕರಿಸುವ ಸಂಕೇತವಾಗಿ ಬೇವು ಬೆಲ್ಲವನ್ನು ಸವಿಯಬೇಕು, ಈ ಮೂಲಕ ಎಲ್ಲರೆದೆಗಳಲ್ಲಿ ನಗುವಿನ ಸವಿಚೈತ್ರವು ಬರಬೇಕೆಂದು ಕವಿ ಹೇಳಿದ್ದಾರೆ.

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

**27. 'ನಿಂಬೆಯ ಹಣ್ಣಿನಂತೆ ತುಂಬಿದ ಕುಣಿಗಲ್ ಕೆರೆ'**

ಅಲಂಕಾರದ ಹೆಸರು : ಉಪಮಾಲಂಕಾರ

ಲಕ್ಷಣ : ಒಂದು ಮತ್ತೊಂದರಂತೆ ಇದೆ ಎಂದು ಹೋಲಿಸಿ ವರ್ಣಿಸುವುದನ್ನು ಉಪಮಾಲಂಕಾರ ಎನ್ನುತ್ತೇವೆ.

ಉಪಮೇಯ : ಕುಣಿಗಲ್ ಕೆರೆ

ಉಪಮಾನ : ನಿಂಬೆಯ ಹಣ್ಣು

ಉಪಮಾವಾಚಕ : ಅಂತೆ

ಸಮಾನಧರ್ಮ : ಕುಣಿಗಲ್ ಕೆರೆ ಮತ್ತು ನಿಂಬೆಯ ಹಣ್ಣು ತುಂಬಿರುವುದು

ಸಮನ್ವಯ : ಇಲ್ಲಿ 'ಕುಣಿಗಲ್ ಕೆರೆ' ಎಂಬ ಉಪಮೇಯವನ್ನು 'ನಿಂಬೆಯ ಹಣ್ಣು' ಎಂಬ ಉಪಮಾನದಿಂದ 'ತುಂಬಿರುವುದು' ಎಂಬ ಸಮಾನಧರ್ಮವನ್ನು 'ಅಂತೆ' ಎಂಬ ಉಪಮಾವಾಚಕದ ಮೂಲಕ ಪರಸ್ಪರ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರದ ಉದಾಹರಣೆಯಾಗಿದೆ.

**VII. ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

**28. 'ಬೆಳೆಯುವ ಸಿರಿ ಮೊಳಕೆಯಲ್ಲಿ'**

ಗಾದೆ ವೇದಕ್ಕೆ ಸಮಾನ. ವೇದ ಸುಳ್ಳಾದರೂ ಗಾದೆ ಸುಳ್ಳಾಗುವುದಿಲ್ಲ. ಗಾದೆಗಳು ಹಿರಿಯರು ಹೇಳಿದ ಅನುಭವದ ನುಡಿಮುತ್ತುಗಳು. ಗಾದೆಗಳು ನಮ್ಮ ಬದುಕಿಗೆ ದಾರಿ ದೀಪಗಳಾಗಿವೆ.

ಬೆಳೆಯುವ ಸಸಿಯನ್ನು ನೋಡಿದಾಗಲೇ ಅದು ಮುಂದೆ ಎಂತಹ ಬೆಳೆಯನ್ನು ಕೊಡುತ್ತದೆ ಎಂಬುದು ತಿಳಿಯುತ್ತದೆ. ಹಾಗೆಯೇ ಬಾಲ್ಯದಲ್ಲಿ ಮಕ್ಕಳ ನಡೆನುಡಿಗಳನ್ನು ಗಮನಿಸಿದರೆ ಮುಂದೆ ಅವರು ಏನಾಗುತ್ತಾರೆ ಎಂಬುದನ್ನು ಅರಿಯಬಹುದು. ಕ್ರಿಕೆಟ್ ಆಟಗಾರ ಸಚಿನ್ ಜೀವನವೇ ಇದಕ್ಕೊಂದು ಉತ್ತಮ ಉದಾಹರಣೆ. ಮೊಳಕೆ ಚೆನ್ನಾಗಿದ್ದರೆ ಬೆಳೆ ಚೆನ್ನಾಗಿರುತ್ತದೆ. ಅದೇರೀತಿ ಮಕ್ಕಳು ಬಾಲ್ಯದಲ್ಲಿ ಉತ್ತಮ ಗುಣಗಳನ್ನು ಬೆಳೆಸಿಕೊಂಡರೆ ಮುಂದೆ ಅವರು ಉತ್ತಮ ವ್ಯಕ್ತಿಗಳಾಗುತ್ತಾರೆ ಎಂಬುದೇ ಈ ಗಾದೆಯ ಅರ್ಥವಾಗಿದೆ.

**ಅಥವಾ**

**'ಮನಸ್ಸಿದ್ದರೆ ಮಾರ್ಗ'**

ಗಾದೆ ವೇದಕ್ಕೆ ಸಮಾನ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲಾರದು. ಗಾದೆಗಳು ಜನಪದರ ಅನುಭವದ ನುಡಿಗಳು. ಕನ್ನಡದ ಪ್ರಮುಖ ಗಾದೆಗಳಲ್ಲಿ ಈ ಗಾದೆ ಪ್ರಮುಖವಾದುದು.

ಪ್ರತಿಯೊಬ್ಬರ ಜೀವನದಲ್ಲೂ ಒಂದು ಗುರಿಯಿರಬೇಕು. ಆ ಗುರಿ ಸಾಧನೆಯಲ್ಲಿ ಮುನ್ನುಗ್ಗುತ್ತಿರಬೇಕು. ಕಷ್ಟ ಬಂದಾಗ ಕಂಗೆಡದೆ ಪರಿಹಾರ ಹುಡುಕುವ ಕಂಡುಕೊಳ್ಳುವ ಮಾರ್ಗ ಕಂಡುಕೊಳ್ಳಬೇಕು. ಮಾಡುವ ಕೆಲಸ ಯಾವುದೇ ಆಗಿರಲಿ ಅದನ್ನು ಶ್ರದ್ಧೆಯಿಂದ ಮಾಡಬೇಕು. ಮನಸ್ಸಿದ್ದರೆ ಮಾರ್ಗ ಎಂಬಂತೆ ಇಟ್ಟುಕೊಂಡ ಗುರಿಯನ್ನು ಒಂದೇ ಮನಸ್ಸಿನಲ್ಲಿ ಮಡಿದಾಗ ಪ್ರತಿಫಲವು ಉತ್ತಮವಾಗಿ ಸಿಗುತ್ತದೆ ಎಂದು ಈ ಗಾದೆ ತಿಳಿಸುತ್ತದೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 5x3=15**

**29. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು**

ಈ ವಾಕ್ಯವನ್ನು ಶ್ರೀ ಪಂಡಿತಾರಾಧ್ಯ ಶಿವಚಾರ್ಯ ಸ್ವಾಮಿಯವರು ಬರೆದಿರುವ 'ವ್ಯಕ್ತಿತ್ವ' ಎಂಬ ಪುಸ್ತಕದ 'ಅಸಿ–ಮಸಿ–ಕೃಷಿ' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಸರ್ವಜ್ಞ ಕವಿಯು ಹೇಳಿದ್ದಾರೆ. ಸರ್ವಜ್ಞ ಕವಿಯು ಕೃಷಿಯ ಬಗ್ಗೆ "ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟೆ ನಡೆದುದಲ್ಲದೆ ದೇಶದಾಟವೆ ಕಡೆಗುಂ" ಎಂದಿದ್ದಾರೆ. ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಅಂದರೆ ವ್ಯವಸಾಯವೇ ಮೇಲು, ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು ಎಂದು ಅರ್ಥ.

**30. ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಶಾಲೆ ಅದು**

ಈ ವಾಕ್ಯವನ್ನು ಕೆ.ಪುಟ್ಟಸ್ವಾಮಿ, ಕೃಪಾಕರ ಮತ್ತು ಸೇನಾನಿ ಯವರು ಬರೆದಿರುವ 'ಜೀವಜಾಲ' ಎಂಬ ಪುಸ್ತಕದ 'ಹಕ್ಕಿಗೂಡುಗಳ ನಿಗೂಢ ಜಗತ್ತು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಲೇಖಕರು ಹೇಳುತ್ತಾರೆ. ಹಕ್ಕಿ ಗೂಡಿನಲ್ಲಿ ನೋವಿದೆ, ನಲಿವಿದೆ, ಆಕ್ರಂದನವಿದೆ, ಸಂತಸವಿದೆ, ಕಾವು, ಗುಟುಕು ಪಡೆದು ಜೀವ ಕಣ್ಣು ತೆರೆವ ಸೃಷ್ಟಿಯ ಅಚ್ಚರಿಯಿದೆ, ಶತ್ರುಗಳ ಬೇಟೆಗೆ, ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ದಾರುಣವಿದೆ. ಈ ತೊಂದರೆಗಳನ್ನು ಎದುರಿಸಿ ಗೆಲ್ಲುವ ಸಾಹಸಗಾಥೆ ಇದೆ. ಕಲಾವಿದನ ಸೃಜನತೆ, ವಿಜ್ಞಾನಿಯ ತಂತ್ರಜ್ಞಾನವೂ ಇದೆ. ಎಂದು ಹೇಳುವಾಗ ಲೇಖಕರು "ಹುಟ್ಟಿದ ಮಕ್ಕಳಿಗೆ ಬದುಕಿನ ಪಾಠ ಹೇಳುವ ಪಾಠಶಾಲೆ ಅದು" ಎನ್ನುತ್ತಾರೆ.

**31. ನನ್ನ ಕಾಫಿ ಕೂಡ ತುಂಬಾ ಚೆನ್ನಾಗಿರುತ್ತದೆ**

ಈ ವಾಕ್ಯವನ್ನು ಗುರುರಾಜ ಕರ್ಜಗಿ ಅವರು ಬರೆದಿರುವ 'ಕರುಣಾಳು ಬಾ ಬೆಳಕೆ' ಎಂಬ ಪುಸ್ತಕದ 'ಕಾಫೀ ಕಪ್ಪು' ಎಂಬ ಪಾಠದಿಂದ ಆರಿಸಲಾಗಿದೆ.

ಈ ಮಾತನ್ನು ಹೆಡ್ ಮಾಸ್ತರರು ತಮ್ಮ ಹಳೆಯ ವಿದ್ಯಾರ್ಥಿಗಳಿಗೆ ಹೇಳುತ್ತಾರೆ. ಒಮ್ಮೆ ಹಳೆಯ ವಿದ್ಯಾರ್ಥಿಗಳು ನಿವೃತ್ತರಾಗಿದ್ದ ತಮ್ಮ ಹೆಡ್ ಮಾಸ್ತರರನ್ನು ನೋಡಲು ಅವರ ಮನೆಗೆ ಹೋದರು. ಅವರೆಲ್ಲ ಹೆಡ್ ಮಾಸ್ತರರ ಬಳಿ ತಮ್ಮ ಸಮಸ್ಯೆಗಳನ್ನು ಹೇಳಿಕೊಂಡರು, ಅದನ್ನು ಆಲಿಸಿದ ಹೆಡ್ ಮಾಸ್ತರರು ಅವರಿಗಾಗಿ ಕಾಫೀ ಮಾಡಲು ಎದ್ದಾಗ "ನನ್ನ ಕಾಫೀ ಕೂಡ ತುಂಬ ಚೆನ್ನಾಗಿರುತ್ತದೆ" ಎಂದು ತಮಾಷೆ ಮಾಡಿದರು.

**32. ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ತೋರುತ್ತಿತ್ತು**

ಈ ವಾಕ್ಯವನ್ನು ಕುವೆಂಪುರವರು ಬರೆದಿರುವ 'ನನ್ನ ಗೋಪಾಲ' ಎಂಬ ನಾಟಕದಿಂದ ಆರಿಸಲಾಗಿದೆ.

ಈ ಮಾತನ್ನು ಗೋಪಾಲನು ತನ್ನ ತಾಯಿಗೆ ಹೇಳುತ್ತಾನೆ. ಗೋಪಾಲನು ಹೂಬನದ ಸೊಬಗನ್ನು ವರ್ಣಿಸುತ್ತ "ಹೂಬನದಲ್ಲಿ ಮಲ್ಲಿಗೆ, ಕೇದಿಗೆ, ಸಂಪಿಗೆ, ಗೋರಂಟಿಯ ಬಣ್ಣ ಬಣ್ಣದ ಹೂವುಗಳು ಸಾವಿರಾರು ಮಳೆಬಿಲ್ಲುಗಳು ಸೇರಿ ಕುಣಿದಂತೆ ಕಾಣುತ್ತಿದ್ದವು, ಹಕ್ಕಿಗಳ ಹಾಡು, ತಂಗಾಳಿ, ಸೂರ್ಯನ ಹೊಂಬೆಳಕು, ಹಿಮಮಣಿಗಳು ಎಷ್ಟೊಂದು ಸುಂದರ" ಎಂದು ಹೇಳಿದನು.

**33. ಧನವಿದ್ದು ಫಲವೇನು ದಯವಿಲ್ಲದನ್ನಕ್ಕ**

ಈ ವಾಕ್ಯವನ್ನು ಅಕ್ಕಮಹಾದೇವಿಯವರ ವಚನಗಳಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಅಕ್ಕಮಹಾದೇವಿ ಹೇಳಿದ್ದಾರೆ. ಮರವಿದ್ದ ಮೇಲೆ ನೆರಳಿರಬೇಕು, ಧನವಿದ್ದವರಲ್ಲಿ ದಾನಧರ್ಮ, ದಯಾಗುಣವಿರಬೇಕು, ಹಸುವಿದ್ದ ಮೇಲೆ ಹಾಲು ತುಪ್ಪವನ್ನು ನೀಡುವಂತಿರಬೇಕು, ಗುಣವಿಲ್ಲದ ರೂಪ ಫಲ ನೀಡದು. ರೂಪ ಇದ್ದರೆ ಸಾಲದು ಒಳ್ಳೆಯ ಗುಣವಿರಬೇಕು. ಬರಿದಾದ ಬಟ್ಟಲಿಗಿಂತ ಅನ್ನ ತುಂಬಿದ ಬಟ್ಟಲು ಶ್ರೇಷ್ಠ. ಹಾಗೆಯೇ ಚೆನ್ನಮಲ್ಲಿಕಾರ್ಜುನನ ಜ್ಞಾನ ತನಗೆ ದೊರೆತರೆ ಜೀವನ ಸಾರ್ಥಕವಾಗುತ್ತದೆ ಎಂದು ಅಕ್ಕಮಹಾದೇವಿ ಹೇಳುತ್ತಾರೆ.

**XI. ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1x4=4**

34. ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ
ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ
ಮಸಗುವಂಬುಜದಂತೆ ಧ್ಯೇಯದಾಳ್ವೆಸಕೆ
ಬಸಮಾಗು ಬಂದ ಮನುಜತೆಯ ಸಾರ್ಥಕತೆಗೆ.

ಅಥವಾ

ಒಂದು ಬಾಣಕೆ ಗುರಿಯು ಹಲವಿರುವುದುಂಟೆ?

ಒಂದು ದೇಹದೊಳಾತ್ಮವೆರಡಿರುವುದುಂಟೆ?

ಒಂದು ಜೀವನಕೇಕೆ ಹಲವು ಸಾಧ್ಯಗಳು?

ಒಂದೇ ಹೆಗ್ಗುರಿಗೆ ಹೋರಾಡು ಹಗಲಿರುಳು.

**X. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ 1x4=4**

**35. ಬಾಲಕ ಪುಟ್ಟಯ್ಯ ಹಾರ್ಮೋನಿಯಂ ನುಡಿಸಿದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಬಾಲಕ ಪುಟ್ಟಯ್ಯನಿಗೆ ಹಾರ್ಮೋನಿಯಂ ನುಡಿಸುವ ಆಸೆ. ಒಮ್ಮೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ತನ್ನ ಮಾವನ ಹಾರ್ಮೋನಿಯಂ ಹಿಡಿದು ತಲ್ಲೀನವಾಗಿ ನುಡಿಸಲಾರಂಭಿಸಿದ. ಹಾರ್ಮೋನಿಯಂ ನಿಂದ ಹೊರಟನಾದ ಮನೆಯನ್ನು ತುಂಬಿ ಮನೆಯ ಮುಂದೆ ಹಾಯ್ದು ಹೋಗುತ್ತಿದ್ದ ಜನರೆಲ್ಲರ ಮನವನ್ನು ತುಂಬಿತು. ನಾದ ಮಾಧುರ್ಯಕ್ಕೆ ಮನಸೋತ ಜನರು ಮನೆಯ ಒಳಗೆ ಬಂದು ಕುಳಿತುಕೊಂಡರು. ಹೊಲಕ್ಕೆ ಹೋಗಿದ್ದ ಬಾಲಕನ ಮಾವ ಮನೆಯ ಹೊರಗೆ, ಒಳಗೆ ಜನರ ಗುಂಪು ಕಂಡು ಆಶ್ಚರ್ಯಚಕಿತರಾದರು. ಮನೆಯ ಒಳಗೆ ಹಾರ್ಮೋನಿಯಂ ನುಡಿಸುತ್ತಿರುವವರು ಯೋಗಿಗಳೇ ಇರಬಹುದು ಎಂದು ಭಾವಿಸಿ, ಒಳಗೆ ಬಂದರು. ತಲ್ಲೀನರಾಗಿ ಹಾರ್ಮೋನಿಯಂ ನುಡಿಸುತ್ತಿದ್ದ ಪುಟ್ಟ ಬಾಲಕನನ್ನು ಕಂಡು ನಿಬ್ಬೆರಗಾದರು. ಮಾವನ ಪಾದ ಸಪ್ಪಳ ಕೇಳಿ ಪುಟ್ಟರಾಜರು “ಮಾವ ತಪ್ಪಾತು ಕ್ಷಮಿಸಿ” ಎಂದರು. ಆಗ ಮಾವ ಇಂದಿನಿಂದ ಇದು ನಿನ್ನದೇ ಹಾರ್ಮೋನಿಯಂ ಎಂದು ಹೇಳಿ ತಬ್ಬಿಕೊಂಡರು.

**ಅಥವಾ**

**ತಾಯಿ ಸಿದ್ಧಮ್ಮ ಮತ್ತು ಪುಟ್ಟಯ್ಯರ ನಡುವೆ ನಡೆದ ಸಂಭಾಷಣೆ ಸ್ವಾರಸ್ಯವನ್ನು ಬರೆಯಿರಿ.**

ಪಂಚಾಕ್ಷರಿ ಗವಾಯಿಗಳ ಸಂಚಾರಿ ಪಾಠಶಾಲೆಯ ಹೊಳೆ ಆಲೂರಿನಲ್ಲಿ ಕ್ಯಾಂಪ್ ಹಾಕಿದ್ದ ಸಂದರ್ಭದಲ್ಲಿ ತಾಯಿಯಾದ ಸಿದ್ದಮ್ಮನವರು ಬೆಳೆದು ದೊಡ್ಡವನಾದ ಪುಟ್ಟರಾಜರನ್ನು ಕಾಣಲು ಬಂದರು. ಸಂಗೀತದ ಸಕಲ ವಿದ್ಯೆಗಳಲ್ಲಿ ಪಾರಂಗತನಾದ ಮುದ್ದು ಮಗನನ್ನು ನೋಡಿದ ತಾಯಿಗೆ ಅಂತಃಕರಣ ತುಂಬಿ ಬಂತು. ಪಂಚಾಕ್ಷರಿ ಗವಾಯಿಗಳ ಪಾದಕ್ಕೆರಗಿ ಸೆರಗೊಡ್ಡಿ ಮಗನನ್ನು ಕಳುಹಿಸಿಕೊಡುವಂತೆ ಬೇಡಿಕೊಂಡರು. ಗವಾಯಿಗಳು ಅವನು ಬಂದರೆ ಕರೆದುಕೊಂಡು ಹೋಗು ತಾಯಿ ಎಂದು ವಾತ್ಸಲ್ಯ ಪೂರ್ಣವಾಗಿ ಹೇಳಿದರು. ಸಿದ್ದಮ್ಮನವರು ಪುಟ್ಟಯ್ಯನೆಡೆ ಬಂದು ಮನೆಗೆ ಬರುವಂತೆ ಕೇಳಿಕೊಂಡರು. ಆದರೆ ಪುಟ್ಟಯ್ಯನಿಗೆ ಮನಸ್ಸು ದೃಢವಾಗಿತ್ತು. ತಾಯಿಗೆ ಮೃದುವಾದ ಮಾತುಗಳಿಂದಲೇ ತನ್ನಿಚ್ಛೆಯನ್ನು ಹೇಳಿದರು “ನನಗೆ ನನ್ನ ಸರ್ವಸ್ವವೂ ಗುರುಗಳು ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ. ಸಮಾಜದ ಋಣವನ್ನು ತೀರಿಸದೆ ಅದು ಹೇಗೆ ನಿನ್ನ ಜೊತೆ ಬರಲಿ? ಎಂದು ತಾಯಿಯನ್ನು ಕೇಳಿದರು. ನಾನು ಎಲ್ಲ ಬಂಧನಗಳನ್ನು ತೊರೆದು ಹಾಕಿರುವ ಗುರು ಪಂಚಾಕ್ಷಕರೇ ನನ್ನ ಸರ್ವಸ್ವ ಅವರ ಆಜ್ಞಾದಾರಕ. ನಾನು ನನ್ನ ಮಗನೆಂಬ ಭಾವವನ್ನು ತೊರೆದು ಹಾಕಿ ನನ್ನನ್ನು ಸಮಾಜಕ್ಕೆ ಅರ್ಪಿಸು ತಾಯಿ” ಎಂದು ಹೇಳಿದರು. ತಾಯಿಯೂ ಸಹ “ನಿನ್ನಂಥ ಶ್ರೇಷ್ಠ ಪುತ್ರರತ್ನನನ್ನು ಹೆತ್ತಭಾಗ್ಯ ನನ್ನದಾಗಲಿ ಗುರು ಪಂಚಾಕ್ಷರರು ತೋರುವ ಮಾರ್ಗದಲ್ಲಿ ನಡೆದು ಅಮರನಾಗು” ಎಂದು ತಾಯಿ ಹರಸಿದರು.

**XI. ಕೆಳಗಿನ ಗದ್ಯ ಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**

ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ, ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಠಿ, ಅನಾವೃಷ್ಠಿ, ಚಂಡಮಾರುತಗಳು. ಸಾಂಕ್ರಾಮಿಕ ರೋಗಗಳು ಉಂಟಾಗುತ್ತಿವೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳಿಂದಾಗಿ ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು

ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧನೀರು, ಗಾಳಿ, ಆಹಾರ ಸಿಗದೇ ಹೋಗಬಹುದು ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**36. ಅ) ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದೆ ಏಕೆ? ವಿವರಿಸಿರಿ.**

ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ, ಗಣಿಗಾರಿಕೆ ಮುಂತಾದವುಗಳಿಂದಾಗಿ ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ. ಪರಿಸರ ನಾಶವಾಗುತ್ತಾ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧನೀರು, ಗಾಳಿ, ಆಹಾರ ಸಿಗದೇ ಹೋಗಬಹುದು ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**ಆ) ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿರುವುದರಿಂದ ಆಗುವ ಪರಿಣಾಮಗಳೇನು?**

ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ, ಇದಕ್ಕೆ ಪ್ರತಿಯಾಗಿ ಪ್ರಕೃತಿ ನೆರೆಹಾವಳಿ, ಭೂಕಂಪ, ಅತಿವೃಷ್ಠಿ, ಅನಾವೃಷ್ಠಿ, ಚಂಡಮಾರುತಗಳು. ಸಾಂಕ್ರಾಮಿಕ ರೋಗಗಳು ಉಂಟಾಗುತ್ತಿವೆ.

**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ. 1x4=4**

**37. ಬಾಹ್ಯಾಕಾಶ ವಿಜ್ಞಾನ**

**ಪೀಠಿಕೆ:** ಇತ್ತೀಚಿನ ದಿನಗಳಲ್ಲಿ ಭಾರತೀಯ ವಿಜ್ಞಾನಿಗಳು ಅನೇಕ ರೀತಿಯ ಹೊಸ ಹೊಸ ಪ್ರಯೋಗಗಳನ್ನು ನಡೆಸಿ ನಾನಾ ರೀತಿಯ ಉಪಗ್ರಹಗಳನ್ನು ಬಾಹ್ಯಾಕಾಶಕ್ಕೆ ಕಳುಹಿಸುತ್ತಿರುವುದು ಸಂತೋಷದ ಸಂಗತಿಯಾಗಿದೆ. ಚಂದ್ರ ಮತ್ತು ಮಂಗಳ ಗ್ರಹಗಳ ಮೇಲೆ ಉಪಗ್ರಹಗಳ ಮೂಲಕ ಕಾಲಿಟ್ಟಿದ್ದು ಒಂದು ದೊಡ್ಡ ಸಾಧನೆಯೇ ಸರಿ. ಅಲ್ಲಿಯ ವಾತಾವರಣ ಸನ್ನಿವೇಶಗಳ ಬಗ್ಗೆ ವಿವರಣೆಗಳನ್ನು ಬಾಹ್ಯಾಕಾಶದ ಉಪಗ್ರಹದ ಮೂಲಕ ತಿಳಿಯಲಾಗುತ್ತಿದೆ.

**ವಿಷಯ ನಿರೂಪಣೆ:** ನಮ್ಮ ವಿಜ್ಞಾನಿಗಳು ಇನ್ನೂ ಸಾಕಷ್ಟು ಇಂತಹ ಆವಿಷ್ಕಾರಗಳನ್ನು ಮಾಡಿ ಇಡೀ ಪ್ರಪಂಚಕ್ಕೆ ಮಾದರಿಯಾಗಬೇಕು. ಪ್ರೊ॥ ಸಿ.ಎನ್. ಆರ್. ರಾವ್ ಅವರಿಗೆ 'ಭಾರತರತ್ನ' ಎಂಬ ಉನ್ನತ ಪ್ರಶಸ್ತಿಯನ್ನು ಕಳೆದ ವರ್ಷವಷ್ಟೆ ಕೊಟ್ಟು ಭಾರತ ಸರ್ಕಾರ ಅವರನ್ನು ಗೌರವಿಸಿದೆ. ಇತ್ತೀಚಿಗಷ್ಟೆ ಎಸ್.ಜೆ.ಸಿ.ಇಂಜಿನಿಯರಿಂಗ್ ಕಾಲೇಜಿನ ಯುವ ವಿಜ್ಞಾನಿ ಕ್ಷುದ್ರಗ್ರಹ ಒಂದನ್ನು ಕಂಡು ಹಿಡಿದು ಪ್ರಪಂಚವೇ ತನ್ನತ್ತ ತಿರುಗಿ ನೋಡುವಂತೆ ಮಾಡಿದ್ದಾರೆ. ಈ ವಿಜ್ಞಾನಿಗಳು ಮುಂದೆಯೂ ದೇಶದ ಬೆನ್ನೆಲುಬಾಗಿ ನಿಂತು, ಬಾಹ್ಯಾಕಾಶದಲ್ಲಿ ಹೊಸ ಹೊಸ ಆವಿಷ್ಕಾರ ಮಾಡುವಂತಾಗಬೇಕು. ಚಂದ್ರಯಾನ 3ರಲ್ಲಿ ಯಶಸ್ಸನ್ನು ಪಡೆದಿದ್ದೇವೆ. ಆದತ್ಯ ಎಲ್ ಎಂಬ ಯೋಜನೆಚುಲ್ಲಿ ಸೂರ್ಯನನ್ನು ಅಧ್ಯಯನ ಮಾಡಲು ಹೊರಟಿದ್ದೇವೆ.

**ಉಪಸಂಹಾರ:** ಬೆಂಗಳೂರು ಮತ್ತು ಶ್ರೀ ಹರಿಕೋಟಾದಲ್ಲಿ ಎರಡು ಬಾಹ್ಯಾಕಾಶ ಸಂಶೋಧನಾ ಕೇಂದ್ರಗಳು ಮತ್ತು ಹಾಸನದಲ್ಲಿ ನಿಯಂತ್ರಣ ಕೇಂದ್ರವು ಸ್ಥಾಪನೆಯಾಗಿವೆ. ಇಸ್ರೋದ ಅಧ್ಯಕ್ಷರಾಗಿದ್ದ ಡಾ॥ ಯು.ಆರ್.ರಾವ್ ಮತ್ತು ಇತ್ತೀಚೆಗೆ ಅಧ್ಯಕ್ಷರಾಗಿ ಬಂದ ಡಾ॥ ಕೆ.ಕಸ್ತೂರಿ ರಂಗನ್ ಅವರುಗಳು ಪ್ರಪಂಚದ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿಗಳಾಗಿದ್ದಾರೆ. ಅವರ ಸಾಧನೆ ವಿದ್ಯಾರ್ಥಿಗಳಿಗೆ ದಾರಿದೀಪವಾಗಿದೆ.

**ಅಥವಾ**

**ಕಂಪ್ಯೂಟರ್ – ಅವಶ್ಯಕತೆ – ಅನುಕೂಲತೆ**

**ಪೀಠಿಕೆ:** ಕಂಪ್ಯೂಟರ್ – ಎಂದರೆ ಗಣಕಯಂತ್ರ. ಇದು ಆಧುನಿಕ ವಿಜ್ಞಾನದ ಅಪೂರ್ವ ಕೊಡುಗೆ. ಕಂಪ್ಯೂಟರಿಗೆ ನಿಘಂಟಿನಲ್ಲಿ 'ಎಲೆಕ್ಟ್ರಾನಿಕ್ ಕ್ಯಾಲ್ಕುಲೇಟಿಂಗ್ ಮೆಷಿನ್' ಎನ್ನುವ ಅರ್ಥವಿದೆ. ಕಂಪ್ಯೂಟರ್ ಲೆಕ್ಕ ಹಾಕುತ್ತದೆ, ಹಾಗೆಯೇ ಜಟಿಲವಾದ ಸಮಸ್ಯೆಗಳನ್ನು ಶೀಘ್ರವಾಗಿ, ನಿಖರವಾಗಿ ಬಿಡಿಸುತ್ತದೆ. ಯಾವುದೇ ಗೊಂದಲವಿಲ್ಲದೆ ಅದು ಹಲವು ಕ್ರಿಯೆಗಳನ್ನು ಏಕಕಾಲದಲ್ಲಿ ಮಾಡುತ್ತದೆ.

**ವಿಷಯ ನಿರೂಪಣೆ:** ಇಂದು ಗಣಕಯಂತ್ರಗಳನ್ನು ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ವಾಣಿಜ್ಯ ಕೈಗಾರಿಕೆ, ಆಡಳಿತ, ಶಿಕ್ಷಣ ಹೀಗೆ ಹಲವು ಕ್ಷೇತ್ರಗಳಲ್ಲಿ ಬಳಸಲಾಗುತ್ತದೆ. ಹವಾಮಾನ ಮಾಹಿತಿಗಾಗಿ ಭೂಉಪಗ್ರಹಗಳನ್ನು ಹಾರಿ ಬಿಡಲು, ಮಾಹಿತಿಗಳನ್ನು ಪಡೆಯಲು ಗಣಕ ಯಂತ್ರಗಳನ್ನು ಬಳಸಲಾಗುತ್ತಿದೆ. ಇಂದು ಗಣಕಯಂತ್ರಗಳು ಮಾಡದೇ

ಇರುವ ಕೆಲಸವೇ ಇಲ್ಲವೆನ್ನುವಂತಾಗಿದೆ. ನಿಖರ ಮಾಹಿತಿಗಳನ್ನು ಒದಗಿಸಿದರೆ ಸಾಕು, ನಿಮಿಷ ಮಾತ್ರದಲ್ಲಿ ಗಣಕಯಂತ್ರವು ಹಲವು ಜನರು ಮಾಡುವ ಕೆಲಸವನ್ನು ಒಂದೇ ಮಾಡಿ ಮುಗಿಸುತ್ತದೆ.

**ಉಪಸಂಹಾರ:** ಹೊಸ ಯಂತ್ರಗಳ ನಿರ್ಮಾಣ ಮಾಡಲು, ಮಾಹಿತಿ ನೀಡಲು ಎಲೆಕ್ಟ್ರಾನಿಕ್ ಉಪಕರಣಗಳ ಬಳಕೆ ಹೆಚ್ಚಾಗುತ್ತಿದೆ. ಕಂಪ್ಯೂಟರ್ ತಯಾರಕರು, ಕಲಿಯುವವರು, ಕಲಿಸುವವರು ಹೀಗೆ ಅದಕ್ಕೆ ಸಂಬಂಧಿಸಿದ ವಿವಿಧ ವಿಭಾಗಗಳಲ್ಲಿ ಉದ್ಯೋಗದ ಅವಕಾಶಗಳು ಹೆಚ್ಚಾಗುತ್ತಿವೆ. ಕೆಲವೇ ವರ್ಷಗಳಲ್ಲಿ ಗಣಕಯಂತ್ರ ಇಡೀ ವಿಶ್ವದಲ್ಲೇ ಶ್ರೇಷ್ಠ ಸ್ಥಾನಮಾನವನ್ನು ಗಳಿಸುವಲ್ಲಿ ಯಶಸ್ವಿಯಾಗಿದೆ ಎಂದರೆ ತಪ್ಪಾಗದು.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

**38. ನಿಮ್ಮನ್ನು ಮೈಸೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ ರವಿ/ರಾಧ ಎಂದು ಭಾವಿಸಿಕೊಂಡು ಶಾಲೆಯಲ್ಲಿ ಆಚರಿಸಿದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪ್ರಚಲಿತ ದಿನಪತ್ರಿಕೆಯ ಸಂಪಾದಕರಿಗೆ ಒಂದು ಪತ್ರ ಬರೆಯಿರಿ.**

**ಇವರಿಂದ** **ದಿನಾಂಕ : 01–01–2024**

ರವಿ/ರಾಧ

ಸರ್ಕಾರಿ ಪ್ರೌಢಶಾಲೆ

ಮೈಸೂರು

**ಇವರಿಗೆ**

ಸಂಪಾದಕರು

ಪ್ರಚಲಿತ ದಿನಪತ್ರಿಕೆ

ಮೈಸೂರು

ಮಾನ್ಯರೆ,

**ವಿಷಯ : ಶಾಲಾ ವಾರ್ಷಿಕೋತ್ಸವ ವರದಿಯನ್ನು ಪ್ರಕಟಿಸುವಂತೆ ಕೋರಿ.**

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಶಾಲೆಯಲ್ಲಿ ಈ ವರ್ಷ ಶಾಲಾ ವಾರ್ಷಿಕೋತ್ಸವವನ್ನು ಬಹಳ ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮುಖ್ಯ ಅಥಿತಿಗಳಾಗಿ ಜಿಲ್ಲಾ ಶಿಕ್ಷಣಾಧಿಕಾರಿಗಳು ಆಗಮಿಸಿದ್ದರು ವಿದ್ಯಾರ್ಥಿಗಳೆಲ್ಲರೂ ಉನ್ನತ ಗುರಿಯೆಡೆಗೆ ಮುನ್ನಡೆಯಬೇಕು ಎಂದು ಹೇಳಿದರು. ವೇದಿಕೆ ಕಾರ್ಯಕ್ರಮ ಮುಗಿದ ಮೇಲೆ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ನಾನು ಸಹ ಜಾನಪದ ನೃತ್ಯವೊಂದಕ್ಕೆ ಹೆಜ್ಜೆ ಹಾಕಿದೆ, ವಿದ್ಯಾರ್ಥಿಗಳೆಲ್ಲರೂ ಉತ್ಸಾಹದಿಂದ ಕಾರ್ಯಕ್ರಮ ನಡೆಸಿಕೊಟ್ಟರು. ಸಾಹಿತಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಿಸಲಾಯಿತು, ಕನ್ನಡ ಶಿಕ್ಷಕರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಈ ವರದಿಯನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಧನ್ಯವಾದಗಳೊಂದಿಗೆ.

ತಮ್ಮ ವಿಶ್ವಾಸಿ

ರವಿ/ರಾಧ

**ಅಥವಾ**

**<u>ನಿಮ್ಮನ್ನು ಧಾರವಾಡದ ಸುಲೋಚನಾ ಎಂದು ಭಾವಿಸಿಕೊಂಡು ನೀವು ನಿಮ್ಮ ಶಾಲೆಯಿಂದ ಕೈಗೊಂಡ ಪ್ರವಾಸದ ಬಗ್ಗೆ ಬೆಳಗಾವಿಯ ಗೆಳತಿ 'ಸಂಸ್ಕೃತಿ'ಗೆ ಒಂದು ಪತ್ರ ಬರೆಯಿರಿ.</u>**

**ಕ್ಷೇಮ** **ಶ್ರೀ** **ದಿನಾಂಕ : 01–01–2024**

ಸುಲೋಚನಾ
ಸರ್ಕಾರಿ ಪ್ರೌಢಶಾಲೆ
ಧಾರವಾಡ

ಪ್ರೀತಿಯ ಗೆಳತಿಗೆ ನಿನ್ನ ಗೆಳತಿ ಸುಲೋಚನಾ ಮಾಡುವ ನಮಸ್ಕಾರಗಳು ನಾನು ಇಲ್ಲಿ ಆರೋಗ್ಯವಾಗಿದ್ದೇನೆ, ನಿನ್ನ ಆರೋಗ್ಯದ ಬಗ್ಗೆ ಒಂದು ಪತ್ರ ಕಳುಹಿಸು. ಇತ್ತೀಚೆಗೆ ನಮ್ಮ ಶಾಲೆಯಲ್ಲಿ ಶೈಕ್ಷಣಿಕ ಪ್ರವಾಸವನ್ನು ಕೈಗೊಂಡಿದ್ದೆವು, ಮೈಸೂರು, ಹಂಪೆ, ಬೇಲೂರು, ಹಳೇಬೀಡು, ಬಾದಾಮಿ, ಐಹೊಳೆ, ಪಟ್ಟದಕಲ್ಲು ಮುಂತಾದ ಐತಿಹಾಸಿಕ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿದ್ದರು. ಪ್ರತಿಯೊಂದು ಸ್ಥಳಗಳು ಐತಿಹಾಸಿಕ ಹಿನ್ನೆಲೆಯನ್ನು ಹೊಂದಿದ್ದು ಅವುಗಳನ್ನು ನೋಡಿದ ನಮಗೆಲ್ಲ ತುಂಬಾ ಸಂತೋಷವಾಯಿತು. ಹಂಪೆಯ ಕಮಲ ಮಹಲ್, ವಿರೂಪಾಕ್ಷ ದೇವಸ್ಥಾನ, ಮೈಸೂರಿನ ಅರಮನೆ, ಬೇಲೂರು ಹಳೆಬೀಡಿನ ಶಿಲ್ಪಕಲೆ, ಬಾದಾಮಿ ಐಹೊಳೆಯ ಗುಹೆಗಳು ನಮ್ಮನ್ನು ತುಂಬಾ ಆಕರ್ಷಣೆ ಮಾಡಿದವು. ನಾನು ಮತ್ತು ನನ್ನೆಲ್ಲ ಸ್ನೇಹಿತರು ತುಂಬ ಖುಷಿಪಟ್ಟೆವು, ನಿಮ್ಮ ಶಾಲೆಯಿಂದ ಕೈಗೊಂಡ ಪ್ರವಾಸ ಕುರಿತು ಒಂದು ಪತ್ರ ಬರೆದು ತಿಳಿಸು.

ಇಂತಿ ನಿನ್ನ ಸ್ನೇಹಿತೆ
**ಸುಲೋಚನಾ**

**ರವರಿಗೆ**

ಸಂಸ್ಕೃತಿ
ಸರ್ಕಾರಿ ಪ್ರೌಢಶಾಲೆ
ಬೆಳಗಾವಿ

********************